# ಮುಕ್ತ ಆಯ್ಕೆ ಕನ್ನಡ ಪಠ್ಯ
## ಮೂರನೇ ಸೆಮಿಸ್ಟರ್
[ಎನ್‌ಇಪಿ ೨೦೨೨–೨೩]

# ಕನ್ನಡ ಅಭಿಮಾನ

ಪ್ರಧಾನ ಸಂಪಾದಕರು
ಡಾ.ಬಿ.ಗಂಗಾಧರ

ಸಂಪಾದಕರು
ಡಾ. ಟಿ. ಯಲ್ಲಪ್ಪ
ಡಾ. ಮೃತ್ಯುಂಜಯ ಎಚ್
ಡಾ. ಎಚ್. ಲಕ್ಷ್ಮಿನಾರಾಯಣಸ್ವಾಮಿ
ಡಾ. ಬಿ.ಕೆ. ಮಂಜುಳ

**ಬೆಂಗಳೂರು ಉತ್ತರ ವಿಶ್ವವಿದ್ಯಾಲಯ**
**ಟಮಕ, ಕೋಲಾರ – 563103**

## ಮುಕ್ತ ಆಯ್ಕೆ ಕನ್ನಡ ಪಠ್ಯ
## ಮೂರನೇ ಸೆಮಿಸ್ಟರ್ ಕನ್ನಡ ಅಭಿಮಾನ

**(ಭಾಷಾ ಚರಿತ್ರೆ ಮತ್ತು ಸಂವಹನ)**

**ಘಟಕ –೧**

**(ಭಾಷೆ)**

೧. ಭಾಷೆ ಎಂದರೇನು ?
೨. ಭಾಷೆಯ ಸ್ವರೂಪ ಮತ್ತು ಸಾಮರ್ಥ್ಯ
೩. ಭಾಷಾ ವರ್ಗೀಕರಣ
೪. ಕನ್ನಡ ಭಾಷಾ ವೈಶಿಷ್ಟ್ಯಗಳು

**ಘಟಕ– ೨**

**(ದ್ರಾವಿಡ ಭಾಷೆಗಳು)**

೧. ದ್ರಾವಿಡರು
೨. ದ್ರಾವಿಡ ಭಾಷೆಗಳು
೩. ಕನ್ನಡ ಭಾಷಾ ವೈಶಿಷ್ಟ್ಯ

**ಘಟಕ –೩**

**(ಸಂವಹನ ಕೌಶಲವಾಗಿ ಭಾಷೆ)**

೧. ಔಪಚಾರಿಕ ಮತ್ತು ಅನೌಪಚಾರಿಕ ಅಭಿವ್ಯಕ್ತಿಯ ಸ್ವರೂಪ
(ಅ) ಸಂಘ–ಸಂಸ್ಥೆಗಳ ಕಾರ್ಯಕ್ರಮಗಳು/ಸಭೆಯ ತಿಳುವಳಿಕೆ ಪತ್ರ, ಕಾರ್ಯಸೂಚಿ, ಆಹ್ವಾನ ಪತ್ರಿಕೆ, ಕಾರ್ಯಕ್ರಮ ಪಟ್ಟಿ
೨. ಅಭ್ಯರ್ಥನ ಪತ್ರ/ ಸಂಕ್ಷಿಪ್ತ ವ್ಯಕ್ತಿ ವಿವರ
೩. ವಿದ್ಯಾರ್ಥಿಗಳು ಕಾಲೇಜಿಗೆ/ ವಿಶ್ವವಿದ್ಯಾಲಯಕ್ಕೆ ಬರೆಯುವ ಪತ್ರಗಳು
೪. ಕಂಪ್ಯೂಟರ್ ಮತ್ತು ಕನ್ನಡ ಬಳಕೆಯ ಸಾಧ್ಯತೆಗಳು

# ಘಟಕ–೧

# ೧. ಭಾಷೆ

**ಮಾತೆಂಬ ಜ್ಯೋತಿಯು ಬೆಳಗದೆ ಇದ್ದಿದ್ದರೆ**
**ಜಗತ್ರಯವೆಲ್ಲವೂ ಕಗ್ಗತ್ತಲ ಮೊತ್ತವಾಗಿರುತ್ತಿತ್ತು**
**–ದಂಡಿ**

ದಂಡಿಯ ಹೇಳಿಕೆಯಲ್ಲಿ ಮಾತಿನ ಮಹತ್ವ ವೇದ್ಯವಾಗುತ್ತದೆ. ಮಾತು ಅರ್ಥಾತ್ ಭಾಷೆ ಶ್ರೇಷ್ಠ ಅಭಿವ್ಯಕ್ತಿ ಮಾಧ್ಯಮ. ಅದು ಅಮೂರ್ತ ಭಾವಗಳನ್ನು ಮಾತುಗಳಲ್ಲಿ ಸೆರೆಹಿಡಿಯುತ್ತದೆ. ಎಷ್ಟೇ ಯುಗಗಳು ಉರುಳಿದರೂ ಅದನ್ನು ಸ್ಪರ್ಶಿಸಿದ ಕೂಡಲೇ ಮೊದಲ ರೂಪದ ಭಾವಸ್ಪಂಧನ ಆಗುತ್ತದೆ. ಇದನ್ನಾಶ್ರಾಯಿಸಿ ಕವಿಗಳು ಗೆದ್ದರು. ಅಂತೆಯೇ ದಿನನಿತ್ಯದ ವ್ಯವಹರಣೆಯಲ್ಲೂ ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ. ಅದಿಲ್ಲದೆ ಕೇವಲ ಆಂಗಿಕ ಸಂಜ್ಞೆಯಿಂದ ಭಾವಸಂವಹನ ಸಮರ್ಥ ರೀತಿಯಲ್ಲಾಗಲು ಸಾಧ್ಯವೇ ಇಲ್ಲ. ಭಾಷಾಬಳಕೆಯ ಭಾವೋಪಯೋಗಿ ಹಾಗೂ ಲೋಕೋಪಯೋಗಿ ಗುಣದ ಅನಂತ ಸಾಧ್ಯತೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಭಾಷಾಬಳಕೆಯ ಶಾಬ್ಧಿಕ, ರಾಚನಿಕ, ಸ್ವರೂಪಗಳಲ್ಲದೆ ಅದರ ಧ್ವನಿ ಸಾಂಕೇತಿಕತೆ, ಸಂವಹನ ಸಾಧ್ಯತೆ, ಭಾಷೆಯ ಸ್ವರೂಪ ಸಾಮರ್ಥ್ಯ ಮತ್ತು ಭಾಷಾ ವರ್ಗೀಕರಣದ ಸ್ಥೂಲ ಪರಿಚಯದೊಂದಿಗೆ ಪ್ರಮುಖ ಭಾಷಾ ವಿಜ್ಞಾನಿಗಳ ವ್ಯಾಖ್ಯೆ ಮತ್ತು ವಿವರಣೆಯ ಬೆಳಕಿನಲ್ಲಿ ಭಾಷೆಯ ಬಗೆಗಿನ ಅರಿವನ್ನು ವಿಸ್ತರಿಸಿಕೊಳ್ಳಬಹುದಾಗಿದೆ.

### ೧. ಭಾಷೆ ಎಂದರೇನು

'ಭಾಷೆಯ ಬಗೆಗೆ ಮಾತನಾಡುವುದೆಂದರೆ ಮರದ ಒಲೆಯಲ್ಲಿ ಅಡುಗೆ ಮಾಡಿದಂತೆ!' ಎನ್ನುತ್ತಾನೆ ಓರ್ವ ಭಾಷಾ ವಿಜ್ಞಾನಿ. ಅದರರ್ಥ ಭಾಷೆಯ ಉಗಮವನ್ನು ತಿಳಿವ ಪ್ರಯತ್ನಗಳು ಎಷ್ಟೇ ಪ್ರಮಾಣದಲ್ಲಿದ್ದರೂ ಅವುಗಳಿಂದ ಪೂರ್ಣಯಶಸ್ಸು ಪ್ರಾಪ್ತವಾಗಿಲ್ಲ; ಅವು ಭಾಷೆಯ ನಿಜದ ನೆಲೆಯನ್ನು ಭೇದಿಸಲಾಗಿಲ್ಲ ಎಂದು. 'ಭಾಷೆಯ ಹುಟ್ಟನ್ನು ತಿಳಿಯಲು ಮಾಡಿರುವ ಎಲ್ಲ ಪ್ರಯತ್ನಗಳೂ ನಿಷ್ಫಲ' ಎಂದಿದ್ದಾನೆ ಸಫೀರ್. ಭಗವಂತ ಹೇಗೊ ಭಾಷೆಯ ಮೂಲ ಹಾಗೆ. ಅದೊಂದು ಚಿದಂಬರ ರಹಸ್ಯ. ಆದರೂ ಅದರ ಬಗೆಗೆ ನಿರಂತರ ಶೋಧನೆ. ಚಿಂತನೆಗಳು ನಡೆದಿವೆ, ನಡೆಯುತ್ತಲೇ ಇವೆ. ಅವುಗಳ ಫಲವಾಗಿ ಭಾಷೆಯ ಬಾಹ್ಯರೂಪವನ್ನು ಅರಿಯಲು ಸಾಧ್ಯವಾಗಿದೆ. ಅದರ ಅಂತರ್ಯ ಇನ್ನೂ ನಿಗೂಢವಾಗಿದೆ.

ಮೂಲತಃ ಭಾಷೆ ಎನ್ನುವುದು ಒಂದು ಶಬ್ಧವ್ಯಾಪಾರ; ಧ್ವನಿ ಸಂಕೇತಗಳ ಮೊತ್ತ; ವಕ್ತೃವಿನ ಭಾವನೆಗಳು ಶ್ರೋತೃವಿನ ಭಾವಕಲ್ಪವನ್ನು ತಲುಪಿ, ಅಲ್ಲಿ ಗ್ರಹಣದ ಮೂಲಕ ಆಲೋಚನೆಯ ಅಲೆಗಳನೆಬ್ಬಿಸುವ ಸಮರ್ಥ ಸಂವಹನ ಸಾಧನ [Communicative Media] ದೈನಂದಿನ ವ್ಯವಹರಣೆಯ ಶ್ರೇಷ್ಠ ಅಭಿವ್ಯಕ್ತಿ ಮಾಧ್ಯಮ [Media of Expression]. ಅನುಭವಗಳ ಅಭಿವ್ಯಕ್ತಿ ರೂಪವೂ ಹೌದು, ರಚನೆಗಿಳಿದರೆ ಅಮೂರ್ತ ಭಾವಗಳ ಮೂರ್ತ ಸ್ವರೂಪವೂ ಹೌದು.

ಶಾಬ್ದಿಕ ಪ್ರವೃತ್ತಿ ಸಂವಹನ ಎಲ್ಲ ಪ್ರಾಣಿಗಳಲ್ಲಿಯೂ ಇದೆ. ನೋವು ನಲಿವುಗಳಿಗೆ ಹಸಿವು ಕಸುವುಗಳಿಗೆ ಅವು ಪ್ರತಿಕ್ರಿಯಿಸುತ್ತವೆ; ತಕ್ಕಂತೆ ಉದ್ಗರಿಸುತ್ತವೆ. ಆ ಬಗೆಯ ಶಬ್ದಾಭಿವ್ಯಕ್ತಿಯ ಸಂಕೇತವೇ ಭಾಷೆ. ಇರುವೆ ಇಪ್ಪತ್ತು ಕೋಟಿ ಪ್ರಾಣಿಗಳಲ್ಲೂ ಅವುಗಳದೇ ಆದ ಅಭಿವ್ಯಕ್ತಿ ಸಂಕೇತ ಇದೆ. ಆ ಸಂಕೇತವೇ ಭಾಷೆ. ನವಿಲ ಕೇಕೆ, ಕುದುರೆ ಕೆನೆತ, ಇರುವೆಗಳು ಸಾಲಿನಲ್ಲಿ ಎದುರಾಳಿಯೊಡನೆ ಮುತ್ತಿಟ್ಟು ಮಾತನಾಡುವುದು, ಕೋಗಿಲೆಯ ಕೂಜನ, ಗೂಗೆಯ 'ಗೂಕ್', ಕರುವಿನ 'ಅಂಬಾ', ಕಾಗೆಯ 'ಕಾಕಾ', ಕೋಳಿಯ 'ಕೊಕ್ಕೊಕ್ಕೋ' ಇವೆಲ್ಲವೂ ಒಂದರ್ಥದಲ್ಲಿ; ವಿಶಾಲಾರ್ಥದಲ್ಲಿ ಭಾಷೆಯ ಕಕ್ಷೆಯಲ್ಲಿ ಬರುತ್ತವೆ. ಆ ಕಾರಣದಿಂದಲೆ ಭಾಷೆಯನ್ನು "ಆತ್ಮವಿರುವ ಯಾವುದೇ ಪ್ರಾಣಿಯ ಅನುಭವಗಳ ಅಭಿವ್ಯಕ್ತಿ" ಎನ್ನುತ್ತಾನೆ ಈಸ್ಲರ್. ಅದು ಅನುಭವದ ಅಭಿವ್ಯಕ್ತಿಯೂ ಹೌದು, ಅನಿಸಿಕೆಯ ಉದ್ಗಾರವೂ ಹೌದು. ಮಾರ್ಟಿ ವ್ಯಾಖ್ಯಾನಿಸುವಂತೆ. 'ಒಂದು ಸ್ಥಿತಿಯನ್ನು

ವ್ಯಕ್ತಪಡಿಸಲು ಮಾಡುವ ಉದ್ದೇಶಪೂರ್ವಕ ಧ್ವನಿಗಳ ಉಚ್ಚಾರಣೆ' ಅಂದರೆ ಯಾವುದೇ ಪ್ರಾಣಿ ಇರಲಿ ಅದರಲ್ಲಿ ಎಚ್ಚೆತ್ತ ಭಾವಕ್ಕೆ ಒಂದು ಪ್ರವೃತ್ತಿ ದೊರೆಕೊಳ್ಳುತ್ತದೆ. ಅದೇ ಭಾಷೆ.

ಶಬ್ದರೂಪಿಯಾದ ಭಾಷೆ ಕೆಲವು ವೇಳೆ ಸಂಜ್ಞಾರೂಪಿಯೂ ಆಗಿರುತ್ತದೆ. ಉದಾಹರಣೆಗೆ: ಒಬ್ಬ ವ್ಯಕ್ತಿ ಮಾತನಾಡುತ್ತಿದ್ದರೆ, ಅವನ ಅಭಿಪ್ರಾಯ ಬೇರೊಬ್ಬನಿಗೆ ಒಪ್ಪಿಗೆಯಾಗದಿದ್ದರೆ ಅವನು ಸುಮ್ಮನೆ 'ಹು' ಎಂದು ಶಬ್ದಿಸಿದರೆ, ಆ ಧ್ವನಿ ಅವನ ಪ್ರತಿಭಟನೆಯ ಸೂಚಕವಾಗುತ್ತದೆ. ಒಬ್ಬನು ಭಾಷಣ ಮಾಡುವಾಗ ಒಬ್ಬ ಶ್ರೋತೃ ಆಕಳಿಸಿದರೆ 'ನಿನ್ನ ಭಾಷಣ ಸಾಕುಮಾಡು' ಎಂಬ ಸೂಚನೆ. ಅಕ್ಕಪಕ್ಕದ ತೋಟದವರು ಶತ್ರುಗಳಿದ್ದು ಇಬ್ಬರೂ ಮಾತನಾಡದಿದ್ದಾಗ, ಆಕಸ್ಮಾತ್ ಗೊತ್ತಿಲ್ಲದೆ ಒಬ್ಬ 'ಯಾರು ತೋಟದಲ್ಲಿ?' ಎಂದು ಕೂಗಿದರೆ, ಮೊದಲೇ ಅಲ್ಲಿದ್ದ ಅವನ ಶತ್ರು 'ನಾನು' ಎಂದು ಉತ್ತರಿಸುವುದಿಲ್ಲ. ಸುಮ್ಮನೆ ಒಮ್ಮೆ ಕೆಮ್ಮುತ್ತಾನೆ. ಆ ಕೆಮ್ಮು ಮೊದಲಿಗನ ಪ್ರಶ್ನೆಗೆ ಉತ್ತರವಾಗುತ್ತದೆ. ಮೂಕರೊಡನೆ ವ್ಯವಹರಿಸುವಾಗ ಆಡುಮಾತಿಗೆ ಬೆಲೆಯಿರುವುದಿಲ್ಲ. ಕೇವಲ ಹಸ್ತವಿನ್ಯಾಸ, ಅಭಿನಯ, ಆಂಗಿಕಚಲನ, ಪ್ರದರ್ಶನ ಇವುಗಳ ಮೂಲಕವೇ ಅಭಿವ್ಯಕ್ತಿಸಬೇಕಾಗುತ್ತದೆ. ಈ ಬಗೆಯ ಸಂಜ್ಞೆ ಸೂಕ್ಷ್ಮಗಳನ್ನು ಭಾಷೆ ಎಂದು ಗುರುತಿಸಬಹುದು.

ಆದರೆ ಈ ಎಲ್ಲ ಸಂಜ್ಞೆ ಸಂಕೇತಗಳೂ 'ಭಾಷೆ' ಎಂಬ ಪದದ ಗೌರವಕ್ಕೆ ಪಾತ್ರ ಅಲ್ಲ. ಪಶುಪಕ್ಷಿಗಳ ಶಬ್ದಕ್ರಿಯೆ, ಮೂಕರೊಡನಾಡುವ ಹಾವಭಾವ ವಿನ್ಯಾಸ ಇವಾವೂ 'ಭಾಷೆ' ಎನ್ನಿಸಿಕೊಳ್ಳುವುದಿಲ್ಲ. ಅವು ಅಧ್ಯಯನ ಯೋಗ್ಯವಾದವೂ ಅಲ್ಲ. ಭಾಷೆ ಎನ್ನುವುದು ನಿತ್ಯವ್ಯವಹರಣೆಯ ಸಂದರ್ಭದಲ್ಲಿ ಮಾನವನಾಡುವ ಮಾತು ಮಾತ್ರ. ಅದು ಸೀಮಿತವೂ ವೈಜ್ಞಾನಿಕವೂ ಆದ ಅರ್ಥದಲ್ಲಿ ಸ್ವೀಕೃತವಾದ ವಸ್ತು. 'ಸ್ವಪ್ರೇರಿತ ಉಚ್ಚಾರಣೆಯ ಸಂಕೇತಗಳ ಒಂದು ವ್ಯವಸ್ಥೆಯ ಮೂಲಕ ಅನಿಸಿಕೆಗಳನ್ನು, ಭಾವಗಳನ್ನು, ಇಷ್ಟಗಳನ್ನು, ಪ್ರಧಾನ ಮಾಡಲಿರುವ, ಮಾನವನಿಗಷ್ಟೇ ನಿಷ್ಠವಾದ (ಉಸಿರಾಟ, ರಕ್ತಚಲನೆ ಮೊದಲಾದವುಗಳಂತೆ ನೈಸರ್ಗಿಕ ಕ್ರಿಯೆ ಎನಿಸದ) ರೀತಿಯೇ ಭಾಷೆ' ಎಂಬುದಾಗಿ ಎಡ್ವರ್ಡ ಸಪೀರ್ (Edward Sapir) ಮಾನವನು ತನ್ನ ಅನಿಸಿಕೆಗಳನ್ನು ಅಭಿವ್ಯಕ್ತಪಡಿಸುವ ಸಲುವಾಗಿ ರೂಪಿಸಿಕೊಂಡಿರುವ ಸಂಕೇತಗಳ ವ್ಯವಸ್ಥೆಯೇ ಭಾಷೆ' ಎಂದು ಫರ್ಡಿನೆಂಡ್ ಸಸೂರ್ (Ferdinand-de-Sanssure) ಹೇಳಿದ್ದಾರೆ. ಇವರ ಹೇಳಿಕೆಗಳಲ್ಲಿ ಭಾಷೆ ಮಾನವನಿಷ್ಠ ಮಾತೇ ಹೊರತು ಬೇರೆಯದಲ್ಲ ಎಂಬ ಅಭಿಪ್ರಾಯ ಸ್ಪಷ್ಟವಾಗುತ್ತದೆ.

ಮಾತು ಧ್ವನ್ಯಂಗಗಳ ನೆರವಿನಿಂದ ಪ್ರಕಟವಾಗುವ ಧ್ವನಿ ಸಂಕೇತಗಳ ಸಮುದಾಯ. ವ್ಯಕ್ತಿಯ ಇಚ್ಛೆಯಂತೆ ಪುಪ್ಪುಸದಿಂದ ಗಾಳಿಯನ್ನು ದಬ್ಬಿದಾಗ, ಅದು ಧ್ವನಿಪೆಟ್ಟಿಗೆಯ ಮೂಲಕ ಹೊರಬರುತ್ತದೆ. ಧ್ವನಿಪೆಟ್ಟಿಗೆಯಲ್ಲಿ ಧ್ವನಿ ಉತ್ಪನ್ನವಾಗುತ್ತದೆ. ಆ ಧ್ವನಿಯನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ನಾಲಗೆಯು ತುಟಿ, ಹಲ್ಲು, ಅಂಗಳು, ಗಲ್ಲ, ತಾಲು ಮೊದಲಾದವುಗಳನ್ನು ಮುಟ್ಟಿ ಒಂದೊಂದು ಧ್ವನಿಮಾ(Phoneme)ವನ್ನು ಆ ಮೂಲಕ ಶಬ್ದರೂಪವನ್ನು ಸೃಷ್ಟಿಸುತ್ತದೆ. ಇಂತಹ ಧ್ವನಿಮಾಗಳ ಒಟ್ಟಂದವೇ ಭಾಷೆ. ಆದ್ದರಿಂದ ಭಾಷೆ ಎಂಬುದು ಬರಿಯ ಶಬ್ದವ್ಯಾಪಾರವಲ್ಲ, ಸುವ್ಯವಸ್ಥಿತ ಶಬ್ದವ್ಯಾಪಾರ.

ಅಂತೆಯೇ ಜಾಕಬ್ ಕೋರ್ಗ್ ಹೇಳುವಂತೆ ಅದು 'ತುಂಬಾ ಕೃತಕವೂ, ಆದರೆ ಸ್ಥಿತಿಸ್ಥಾಪಕ [Flexiblity] ಶಕ್ತಿ ಉಳ್ಳದ್ದೂ ಆದ ಅಭಿವ್ಯಕ್ತಿ ಮಾಧ್ಯಮ'. ಎರ್ದಮನ್ [Erdmann] ಹೀಗೆ ಹೇಳುತ್ತಾನೆ: 'ಭಾಷೆ ಎನ್ನುವುದು ಅಭಿಪ್ರಾಯಗಳ ಅಭಿವ್ಯಕ್ತಿಯ ಒಂದು ವಿಧಾನ ಅಲ್ಲ. ಅದೊಂದು ರೀತಿಯ ಆಲೋಚನೆ. ಭಾಷೆ ಎನ್ನುವುದು ಒಂದು ಸಾಧನ. ಮನುಷ್ಯರಿಗೆ ವಿಶಿಷ್ಟವಾಗಿರುವ ಆಲೋಚನೆಯ ಒಂದು ಸಾಧನ ಅಥವಾ ಅಂಗ. ಇವನ ಪ್ರಕಾರ ಭಾಷೆ ಎನ್ನುವುದು ವಿವೇಚನಾಶೀಲನಾದ ಮಾನವನ ವಿಶಿಷ್ಟ ಆಲೋಚನೆಯ ಆವಿರ್ಭಾವ. ಒಂದು ನಿರ್ದಿಷ್ಟ ಸಮಾಜವು ಒಪ್ಪಿಕೊಂಡ ತನ್ನ ನಿತ್ಯವ್ಯವಹರಣೆಯಲ್ಲಿ ಅದನ್ನು ಅರ್ಥವತ್ತಾಗಿ ದುಡಿಸಿಕೊಂಡ ಯಾದೃಚ್ಛಿಕ ಧ್ವನಿಸಂಕೇತಗಳ ಮೊತ್ತ.

ಭಾಷೆ ಎಂಬುದು ಒಂದು ವ್ಯವಸ್ಥೆ [System] ಅದು ಧ್ವನಿಸಂಕೇತಗಳ ವ್ಯವಸ್ಥೆ. ನಮ್ಮ ಕಣ್ಣಿಗೆ ಕಾಣುವ ವಸ್ತುವಿಗೆ ಮತ್ತು ನಮ್ಮ ಮನಸ್ಸಿನಲ್ಲಾಗುವ ಅನಿಸಿಕೆಗಳಿಗೆ ಒಂದು ಅರ್ಥಕೊಟ್ಟು ನಾವೆಲ್ಲರೂ ಒಪ್ಪಿಕೊಂಡಿರುವ ಧ್ವನಿ ಸಂಕೇತಗಳ ವ್ಯವಸ್ಥೆ. ಇದೇ ಅರ್ಥದಲ್ಲಿ ಮೇರಿಯೋ.ಎ.ಪೆಯ್ ಮತ್ತು ಫ್ರಾಂಕ್ ಗೆಯಾರ್, 'ಮಾನವ ಗುಂಪು ಅಥವಾ ಸಮುದಾಯವೊಂದು ಯಾದೃಚ್ಛಿಕ ಸಾಂಪ್ರದಾಯಿಕ ಅರ್ಥವುಳ್ಳ ಧ್ವನಿ ಸಂಕೇತಗಳನ್ನು ನುಡಿವ ಮತ್ತು ಕೇಳುವ ಅವಯವಗಳ ಮೂಲಕ ಪರಸ್ಪರ

ಮುಟ್ಟಿಸುವ (ಸಂವಹಿಸುವ) ಒಂದು ವ್ಯವಸ್ಥೆಯೇ ಭಾಷೆ' ಎಂದಿದ್ದಾರೆ. 'ಬೇಕಾದಾಗ ಸ್ವಇಚ್ಛೆಯಿಂದ ಉಚ್ಚರಿಸಬಹುದಾದ ಸಾಂಪ್ರದಾಯಿಕ ಧ್ವನಿಸಂಕೇತಗಳ ವ್ಯವಸ್ಥೆಯೇ ಭಾಷೆ, ಎಂದು ಎಬ್ಬಿಂಗ್ ಹಾಸ್ (Ebbinghaṇs) ಹೇಳಿರುವುದು ಇದೇ ಅರ್ಥದಲ್ಲಿ. ಇಂತಹ ಶಾಬ್ದಿಕ ಅಥವಾ ಧ್ವನಿಸಂಕೇತಗಳ ಅರ್ಥಪೂರ್ಣ ಅಭಿವ್ಯಕ್ತಿಯೇ ಭಾಷೆ.

೧. Language: a system of communication by sound. i.e. through the organ of speech and hearing, among human beings of a certain group or community. Using vocal symbols possessing arbitrary conventional meanings:

೨. Language is a system of arbitrary vocal symbols. By which members of a society act and react. - Sturtevant

ಭಾಷೆ ಎಂಬುದು ಸಂಸ್ಕೃತ ಭಾಷಾ ಶಬ್ದದ ತದ್ಭವ. ಸಂಸ್ಕೃತದ 'ಭಾಷಾ'ಕ್ಕೆ 'ಭಾಷ್' ಮೂಲಧಾತು. 'ಭಾಷ್'ಗೆ ನುಡಿ, ಉಚ್ಚರಿಸು, ಮಾತನಾಡು ಎಂಬ ಅರ್ಥಗಳಿವೆ. ಲ್ಯಾಟಿನ್‌ನ 'Lingua' ಇಂಗ್ಲಿಷ್‌ನಲ್ಲಿ Language ಆಗಿದೆ. Lingua ಕ್ಕೆ Tongue, Spoken word ಎಂಬರ್ಥಗಳಿವೆ. ಆದ್ದರಿಂದ 'ಭಾಷೆ' ಎಂಬುದು ನುಡಿರೂಪೀ ವ್ಯವಹರಣ ಯೋಗ್ಯ ಸಾಧನ ಎಂದು ವ್ಯಾಖ್ಯಾನಿಸಬಹುದು.

ಇಷ್ಟಾಗಿಯೂ ಭಾಷೆಯ ಬಗ್ಗೆ ಯಾವ ವ್ಯಾಖ್ಯಾನವೂ ಪರಿಪೂರ್ಣ ಅಲ್ಲ. ಯಾರ ಹೇಳಿಕೆಯೂ ಭಾಷೆಯ ನೈಜಸ್ವರೂಪವನ್ನು ಪರಿಚಯಿಸಲಾರದು. ಆದರೂ ಸ್ಟೂರ್ಟೆವಾಂಟ್ (Sturtvant) ಹಾಗೂ ಬ್ಲಾಕ್ ಮತ್ತು ಟ್ರಾಗರ್ (Bloc and Tragger) ಇವರ ವ್ಯಾಖ್ಯಾನಗಳು ವಸ್ತುವಿಗೆ ಸಮೀಪಗತವೂ ಅರ್ಥಪೂರ್ಣವೂ ಆದವುಗಳು. ಅದರಲ್ಲೂ ಬ್ಲಾಕ್ ಮತ್ತು ಟ್ರಾಗರ್ ಅವರ ವ್ಯಾಖ್ಯಾನ ಸರ್ವಸಮ್ಮತವಾದುದಾಗಿದೆ. ಸ್ಟೂರ್ಟೆವಾಂಟೆ ಹೇಳುತ್ತಾನೆ: 'ಭಾಷೆ ಎಂಬುದು ಯಾದೃಚ್ಛಿಕ ಧ್ವನಿಸಂಕೇತಗಳ ಒಂದು ವ್ಯವಸ್ಥೆ; ಎರಡು, ಸಮಾಜ ಅಥವಾ ಸಮುದಾಯವೊಂದು ಅದರೊಡನೆ ಸಹಕರಿಸುತ್ತದೆ (ವ್ಯವಹರಿಸುತ್ತದೆ). ಮೊದಲನೆಯದು ಭಾಷೆಯ ರೂಪವನ್ನು ಹೇಳಿದರೆ, ಎರಡನೆಯದು ಅದರ ಕಾರ್ಯವನ್ನು ಸೂಚಿಸುತ್ತದೆ. ಅದರ ಪ್ರಕಾರ 'ಭಾಷೆ' ಎಂಬುದು ಒಂದು ವರ್ಗದ ಒಂದು ವಲಯದ ಜನರ ಇಚ್ಛೆಗನುಗುಣವಾದ ಶಬ್ದರೂಪೀ ಸಂಕೇತ. ಉದಾಹರಣೆಗೆ: ಕನ್ನಡ ಭಾಷೆಯನ್ನಾಡುವ ಒಂದು ವರ್ಗ ಒಂದು ನಿರ್ದಿಷ್ಟ ವಸ್ತುವನ್ನು 'ನೀರು' ಎಂದಿತು.

೩. 'Language is a system of arbitrary vocal symbols, by means of which a social group co-operates.' -Bloc and Tragger.

ಮತ್ತೊಂದು ಅದೇ ವಸ್ತುವನ್ನು 'ಜಲ' ಎಂತಲೂ ಮಗುವೊಂದು 'ವಾಟರ್' ಅಂತಲೂ ಕರೆದುವು. ಇವೆಲ್ಲವೂ ಆ ವಸ್ತುವಿಗಿದ್ದ ಶುದ್ಧ ಅಥವಾ ಮೂಲ ನಾಮಗಳೆಲ್ಲ ಆ ವಸ್ತುವು ತಾನು ಹುಟ್ಟುವಾಗಲೇ ಆ ಹೆಸರುಗಳ ತಲೆ ಪಟ್ಟಿ ಕಟ್ಟಿಸಿಕೊಂಡು ಹುಟ್ಟಿಲ್ಲ. ಅದು ಮೊದಲು ಹುಟ್ಟಿತ್ತು. ಅದನ್ನು ಒಂದೊಂದು ವಲಯದ ಜನತೆ ಒಂದೊಂದು ಹೆಸರಿಟ್ಟು ಕರೆಯಿತು.' ಅದು ರೂಢಿಗೆ ಬಂದು, ಅರ್ಥಸಂಯೋಜನೆ ಪಡೆಯಿತು. ಹೀಗೆ ರೂಪುಗೊಂಡ ಶಾಬ್ದಿಕ ಅಭಿವ್ಯಕ್ತಿಯಲ್ಲಿ ಒಂದು ವ್ಯವಸ್ಥೆ ಇದೆ. ಅದು ಅಡ್ಡಾದಿಡ್ಡಿ ರಚನೆಯಾಗುವುದಿಲ್ಲ. 'ಹಣ್ಣು ಅವನನ್ನು ತಿಂದಳು.' ಎನ್ನುವುದಿಲ್ಲ. ಅಥವಾ 'ಅವನು ಹಣ್ಣನ್ನು ತಿಂದಳು' ಎಂದೂ ಹೇಳಬರುವುದಿಲ್ಲ. ಅವನು ಹಣ್ಣನ್ನು ತಿಂದನು' ಎಂದೇ ಹೇಳುವುದು. ಈ ರೀತಿ ಕರ್ತೃ, ಕರ್ಮ, ಕ್ರಿಯೆಗಳಲ್ಲಿ ಕ್ರಮಬದ್ಧತೆ, ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ ವೈಜ್ಞಾನಿಕ ವಿಶ್ಲೇಷಣೆ, ವಿಭಕ್ತಿ ಪ್ರತ್ಯಯಗಳನ್ನು ಹತ್ತಿಸುವಲ್ಲಿ ವಿಶಿಷ್ಟವಿವೇಚನೆ ಇಟ್ಟುಕೊಂಡೇ ಅಭಿವ್ಯಕ್ತವಾಗುತ್ತದೆ. ಅದು ಕೇಶಿರಾಜ ಹೇಳುವಂತೆ 'ನಾಮರೂಢಿಯಟೆಯದ' ರೂಪ; ಭಾಷಾ ಮರ್ಯಾದೆಯನ್ನು ಕಾಪಾಡುವ ಕ್ರಮ. ಇದೇ ವ್ಯವಸ್ಥೆ.

ಎರಡನೆಯದು, ಸಮುದಾಯವೊಂದು ಅದರೊಡನೆ ವ್ಯವಹರಿಸುವುದು. ಪ್ರತಿಯೊಬ್ಬ ವ್ಯಕ್ತಿಯೂ ಒಂದೊಂದು ವಿಶಿಷ್ಟ ಸಮಾಜದ ಸದಸ್ಯನಾಗಿರುತ್ತಾನೆ. ಸಮುದಾಯ ಒಪ್ಪಿದ, ರಾಜಕಾರಣ ಅಪ್ಪಿದ, ಧರ್ಮವು ರೂಪಿಸಿ ಕೊಟ್ಟ ಸಮಾಜ ಸಂಹಿತೆಗಳಿಗೆ ಅವನು ಬದ್ಧನಾಗಿರುತ್ತಾನೆ. ಎಲ್ಲ ಕ್ಷೇತ್ರಗಳಲ್ಲೂ ವಿನಿಮಯಗೊಳ್ಳುವ ಭಾಷೆಯೊಡನೆ ಅವನು

ರಾಜಿಮಾಡಿಕೊಂಡೇ ಬದುಕುತ್ತಾನೆ. ಬದುಕಬೇಕು. ಇಲ್ಲವಾದರೆ ಅವನ ಬದುಕಿನ ಬಂಡಿ ಮುಂದುವರಿಯುವುದೇ ಇಲ್ಲ. ಆದ್ದರಿಂದ ಭಾಷೆ ಸಮಾಜವೊಂದರ ಸಮರ್ಥ ಸಂವಹನ (Communication) ಸಾಧನ. ಅದರೊಡನೆ ಸಮುದಾಯ ಸದಾ ವ್ಯವಹರಿಸುತ್ತಿರುತ್ತದೆ. ಏನಿಲ್ಲವೆಂದರೂ ಭಾಷೆ ಸಾಮಾಜಿಕನ ಪ್ರಾಥಮಿಕ ಅಗತ್ಯಗಳನ್ನು ಪೂರೈಸಲು ನೆರವಾಗುತ್ತದೆ.

ಮಾನವ ಪತಿತ ದೇವತೆ ಇಲ್ಲವೇ ಉತ್ತಿಷ್ಠಿತ ಪ್ರಾಣಿ, ಅವನು ಮಾತನ್ನು ಕಂಡುಹಿಡಿದವನು. ಮಾತು ಬಲ್ಲವನು, ಮಾತಿನ ಮಹತ್ವವನ್ನರಿತವನು.

ಒಂದು ಜನಾಂಗದ ಪರಿಸರಕ್ಕನುಗುಣವಾಗಿ ಒಂದು ಧ್ವನಿ ಮೊತ್ತ ಕಲ್ಪಿತವಾಗುತ್ತದೆ. ಆ ಧ್ವನಿ ಮೊತ್ತವನ್ನು ಆ ಜನಾಂಗದ ಜನವೆಲ್ಲ ಗ್ರಹಿಸಿ ಸ್ವೀಕರಿಸಿದರೆ ತೀರಿತು. ಆ ವಸ್ತುವಿಗೆ ಆ ಶಬ್ದ ರೂಢವಾಗಿ ಬರುತ್ತದೆ. ಆ ರೂಢಮೂಲ ಸಂಕೇತಗಳ ಒಟ್ಟು ಸಮೂಹವೇ ಆ ಸಮೂಹದ ಒಂದು ವ್ಯವಸ್ಥಿತ ರೂಪವೇ ಭಾಷೆ.

ಕಂಠ, ನಾಲಿಗೆ, ತುಟಿ, ಹಲ್ಲು, ಅಂಗಳ (ಮೂರ್ಧನ್ಯ) ತಾಲು (ಗಲ್ಲ). ನಾಸಿಕ ಇತ್ಯಾದಿ ಪ್ರಾಣಿಗೂ ಇರದ ತುಂಬು ಹೊಂದಾಣಿಕೆಯ ಧ್ವನ್ಯಂಗಗಳು ಅವನಿಗಿವೆ. ಅವನಲ್ಲಿ ಅನುಭವಿಸುವ ಚೇತನವಿದೆ. ಅನುಭವಿಸಿದ್ದನ್ನು ಅಭಿವ್ಯಕ್ತಿಸುವ ಸಾಮರ್ಥ್ಯವಿದೆ. ತನ್ನ ಪರಿಸರದೊಡನೆ ಸದಾಸ್ಪಂದಿಸುವ, ಪ್ರತಿಕ್ರಿಯಿಸುವ, ತನ್ನನ್ನು ತಾನು ಪ್ರಕಟಿಸಿಕೊಳ್ಳುವ ವಿಶಿಷ್ಟ ಶಕ್ತಿ ಅವನಿಗಿದೆ. ಅವನು ಒಂದಲ್ಲ ಹತ್ತು ಭಾಷೆಗಳನ್ನು ಕಲಿಯಬಲ್ಲ ಶಕ್ತಿ ಸಂಪಾದಿಸಿಕೊಂಡಿದ್ದಾನೆ. ಅಂತಹ ಶಕ್ತಿ ಇರುವುದರಿಂದಲೇ ಅವನು ತನ್ನ ಹೃದಯಸ್ಥವಾದ ಭಾವ ಭಾವನೆಗಳನ್ನು ಚಿತ್ರ, ಶಿಲ್ಪ, ನೃತ್ಯ, ಸಂಗೀತ, ಸಾಹಿತ್ಯಾದಿ ಲಲಿತಕಲೆಗಳ (Fine Arts) ಮೂಲಕ ಅಭಿವ್ಯಕ್ತಿಸುತ್ತಾನೆ. ಪ್ರತೀ ಸಂದರ್ಭದಲ್ಲೂ ಅವನು ತನ್ನ ಆಲೋಚನೆಗೂ ಅಭಿವ್ಯಕ್ತಿಗೂ ಸಾವಯವ ಸಂಬಂಧವನ್ನು ಕಲ್ಪಿಸುವುದನ್ನು ಮರೆಯಲಾರ. ಅದರಿಂದಾಗಿ ದಿನನಿತ್ಯ ಚಟುವಟಿಕೆಗಳಲ್ಲೂ ಆಡುನುಡಿಯನ್ನು ಅರ್ಥವತ್ತಾಗಿ ದುಡಿಸಿಕೊಳ್ಳಬಲ್ಲ. ಆ ರೀತಿ ಮಾನವ ವ್ಯವಹರಣೆಯ ಸೌಲಭ್ಯಕ್ಕಾಗಿ ಅವನಾಡುವ ನುಡಿಯ ಶಬ್ದರೂಪವೇ ಭಾಷೆ.

**೨. ಭಾಷೆಯ ಸ್ವರೂಪ ಮತ್ತು ಸಾಮರ್ಥ್ಯ**

ಭಾಷೆ ದೈವ ನಿರ್ಮಿತಿ ಅಲ್ಲ; ಅದು ಮಾನವಸೃಷ್ಟಿ; ಅವನ ನಿರಂತರ ದುಡಿಮೆಯ ಸತ್ಫಲ. ಅವನ ಅತ್ಯಮೂಲ್ಯ ಅವಿಷ್ಕಾರಗಳಲ್ಲಿ (Inventions) ಒಂದು. ಮಹಾವಿಜ್ಞಾನಿ ಚಾರ್ಲ್ಸ್‌ಡಾರ್ವಿನ್ 'ಮಾನವ ಪ್ರಪಂಚದ ಆವಿಷ್ಕಾರಗಳಲ್ಲೆಲ್ಲಾ ಭಾಷೆಯ ಉಪಯೋಗೀ ಆವಿಷ್ಕಾರದಷ್ಟು ಅದ್ಭುತವಾದದ್ದು, ಮಹತ್ವಪೂರ್ಣವಾದದ್ದು ಬೇರೊಂದು ಇಲ್ಲ' ಎಂದಿದ್ದಾನೆ. ಇದರಿಂದ ಭಾಷೆಯ ಆವಿಷ್ಕರಣದ ಮಹತ್ವ ವೇದ್ಯವಾಗುತ್ತದೆ. ಜ್ಞಾನದ ಸಂಕೇತವೆನಿಸಿದ ಅಗ್ನಿ ಮಾನವನ ಮೊದಲ ಆವಿಷ್ಕಾರ; ಭಾಷೆ ಎರಡನೆಯದು. ಅಗ್ನಿಯ ಅವಿರ್ಭಾವದಿಂದ ಅವನಲ್ಲಿ ಜ್ಞಾನ ಅವತರಿಸಿತು; ಭಾಷೆಯ ಒಡನಾಟದಿಂದ ಅವನಿಗೆ ಭಾವಾಭಿವ್ಯಕ್ತಿ ಸಾಧ್ಯವಾಯಿತು.

**ಭಾಷೆ ಮಾನವನ ಅತ್ಯಮೂಲ್ಯ ಸಿದ್ದಿಗಳಲ್ಲಿ ಒಂದು.**

ಭಾಷೆ ನೈಸರ್ಗಿಕ ಕ್ರಿಯೆ ಅಲ್ಲ. ಕಲಿತ ಕ್ರಿಯೆ. ಅಂದರೆ ಯಾವುದೇ ಪ್ರಯತ್ನವಿಲ್ಲದೆ ಉಸಿರಾಟದಂತಹ ಸ್ವಾಭಾವಿಕ ವ್ಯಾಪಾರ ಅಲ್ಲ. ಅದು ಮೂಲತಃ ಸಂಸರ್ಗಜನ್ಯ. ಪರಿಸರಕ್ಕನುಗುಣವಾಗಿ, ವ್ಯಕ್ತಿವ್ಯಕ್ತಿಗಳ ಸಂಸರ್ಗ ಅಥವಾ ಸಂಪರ್ಕ ವ್ಯವಹರಣೆಯಿಂದಾಗಿ ಹುಟ್ಟುತ್ತದೆ; ಬೆಳೆಯುತ್ತದೆ. ಇದಕ್ಕೆ ಅಕ್ಬರ್ ಪ್ರಯೋಗವನ್ನು ಹೆಸರಿಸಬಹುದು. ಅಕ್ಬರ್ ಎಂಬುವನು ಒಂದು ಮಗುವನ್ನು ಸಂಪರ್ಕ ರಹಿತ ಪ್ರದೇಶದಲ್ಲಿ ಬೆಳೆಸಿದನಂತೆ. ಅದು ಬೆಳೆದು ನಿಂತರೂ ಮಾತುಬಾರದ ಮೂಕ ಪಶುವಾಗಿತ್ತಂತೆ! ಅದರಿಂದ ಜನಮಿಲನದಿಂದ ಭಾಷೆ ಜನನ ಎಂಬುದು ವೇದ್ಯವಾಗುತ್ತದೆ. ಭಾಷೆ ಏಕಕಾಲದಲ್ಲಿ ವ್ಯಷ್ಟಿಗತವೂ ಮತ್ತು ಸಮಷ್ಟಿಯುತವೂ ಆದ ಘಟನೆ (Phenomenon). ಪ್ರತಿಯೊಬ್ಬ ಸಾಮಾಜಿಕನ ಆಂತರ್ಯದಲ್ಲೂ ಸುಪ್ತ ಮತ್ತು ಅಭಿವ್ಯಕ್ತಿ ಸಾಮರ್ಥ್ಯವುಳ್ಳ ಶಕ್ತಿಯಾಗಿರುವುದರಿಂದ ಅದು ವ್ಯಷ್ಟಿಗತ, ಅಂತಹ ವ್ಯಕ್ತಿಗಳ ಸಮುದಾಯ ಅಥವಾ ಸಮಾಜದೊಡನೆ ಅದು ನಿಕಟ ಸಂಬಂಧ, ಸಂಪರ್ಕ, ವ್ಯವಹರಣೆ ಇಟ್ಟುಕೊಂಡು ಅಭಿಮತ ವಿನಿಮಯ ಸಾಧನವೆನಿಸಿದ್ದರಿಂದ ಅದು ಸಮುಷ್ಟಿಯುತ.

ಒಂದು ಭಾಷೆ ಒಂದು ದೇಶಕ್ಕೆ, ಒಂದು ಜಾತಿಗೆ, ಒಂದು ಜನಾಂಗಕ್ಕೆ ಮೀಸಲಲ್ಲ. ಯಾವುದೇ ದೇಶದ ಯಾವುದೇ ಜನಾಂಗ ಯಾವುದೇ ಭಾಷೆಯನ್ನಾಡಬಹುದು. ಒಬ್ಬ ವ್ಯಕ್ತಿ ಎಷ್ಟು ಭಾಷೆಗಳನ್ನು ಬೇಕಾದರೂ ಕಲಿಯಬಹುದು. ಅಭಿಪ್ರಾಯ ವಿನಿಮಯಕ್ಕಾಗಿ ಅವುಗಳೊಡನೆ ವ್ಯವಹರಿಸಬಹುದು. ಭಾಷೆ ಇಂತಹ ಜೀವಂತಿಕೆಯನ್ನುಳ್ಳದ್ದು.

ಭಾಷೆ ನೈಸರ್ಗಿಕ ಕ್ರಿಯೆ ಅಲ್ಲ, ಆದರೆ ಅನುವಂಶಿಕವಾದದುದು. ಒಂದೊಂದು ಪ್ರಾಣಿವರ್ಗಕ್ಕೂ ಅದರದೇ ಆದ ಒಂದು ಭಾಷೆ ಇರುತ್ತೆ. ಅದೇ ರೀತಿ ಮನುಷ್ಯನಿಗೂ ಇದೆ. ಅದು ಅವನಿಗೆ ಅನುವಂಶಿಕವಾಗಿ ಬಂದದ್ದು. ಬೆಕ್ಕಿಗೆ ಕಲಿಸಲು ಬರುವುದಿಲ್ಲ, ಮಾನವನ ಧ್ವನ್ಯಂಗಗಳ ರಚನೆ ಅನ್ಯ ಪ್ರಾಣಿಗಿಲ್ಲವಾದ್ದರಿಂದ ಆಡುನುಡಿ ಮಾನವನಿಗೇ ಮೀಸಲು. ಈ ಸಂಬಂಧವಾಗಿ ಒಂದು ಕಥೆ ಇದೆ.

ಒಂದು ತೋಳ ರಾಮುವನ್ನು ಒಂದು ದಿನದ ಮಗುವಾಗಿದ್ದಾಗಿನಿಂದಲೂ ಸಾಕಿತು. ರಾಮು ಅಲ್ಲಿ ಕಲಿತದ್ದು ತೋಳನಂತೆ ಒರಲವುದು. ಆ ರಾಮು ಜನರ ನಡುವೆ ಬಂದು ಸೇರಿದಾಗ ಅವನು ಮಾತು ಕಲಿತ, ಆಡಿದ, ತೋಳ ಕಲಿಯಲಿಲ್ಲ. ಆದ್ದರಿಂದ ಮಾತು ಅನುವಂಶಿಕ. ಭಾಷೆ ಮಾನವನನ್ನು ಅನ್ಯಪ್ರಾಣಿಗಳಿಂದ ಭಿನ್ನ ಎಂಬುದನ್ನು ಅಳೆಯಲು ಇರುವ ಒಂದು ಮಾಪನವೂ ಹೌದು.

ಭಾಷೆ ಅನುವಂಶಿಕ, ಅಷ್ಟೆ ಪರಿಸರ ಜನ್ಯ. ಸಾಮಾನ್ಯವಾಗಿ ನಿಮ್ಮ ಮಾತೃಭಾಷೆ ಯಾವುದು ಎಂದು ಕೇಳುವುದು ರೂಢಿ. 'ಮಾತೃಭಾಷೆ' ಅಂದಾಗ ಹೆತ್ತತಾಯಿಯ ಭಾಷೆಯೂ ಆಗಬಹುದು. ಹೊತ್ತ ನೆಲದ ಭಾಷೆಯೂ ಆಗಬಹುದು. ಮಗ ಎಳವೆಯಿಂದಲೆ ತನ್ನ ತಾಯಿಯ ಸಂಪರ್ಕ ಇಟ್ಟುಕೊಂಡೇ ಬೆಳೆದಿದ್ದರೆ, ಅವಳೊಡನೆ ಸಂಭಾಷಿಸಿ ಮಾತು ಕಲಿತಿದ್ದರೆ ಮಾತ್ರ ಅದು ತಾಯಿ ಭಾಷೆಯಾಗುತ್ತದೆ. ಹಾಗಲ್ಲದೆ ಕನ್ನಡದವಳ ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು ಅವಳಿಂದ ಬೇರೆಮಾಡಿ ಇಂಗ್ಲೆಂಡಿನಲ್ಲಿ ಬೆಳೆಸಿದರೆ ಅಲ್ಲಿ ಅದನ್ನು ಬೆಳೆಸಿದವರು ಆಡುವ ಇಂಗ್ಲಿಷ್ ಭಾಷೆಯನ್ನು ಕಲಿಯುತ್ತದೆಯೇ ಹೊರತು ಕನ್ನಡವನ್ನಲ್ಲ. ಅಂದರೆ ಪರಿಸರದ ಭಾಷೆ ಅದರ ಮಾತೃ ಭಾಷೆಯಾಗುತ್ತದೆ. ಮಾನವ ಪರಿಸರದ ಶಿಶು. ಅದು ಕೊಟ್ಟಿದ್ದನ್ನು ಸ್ವೀಕರಿಸುವ ಗುಣವುಳ್ಳವನಾದ್ದರಿಂದ ಪರಿಸರದ ಭಾಷೆಯನ್ನು ತನ್ನದನ್ನಾಗಿಸಿಕೊಳ್ಳುತ್ತಾನೆ.

ಮನುಷ್ಯನ ಹೊರತು ಮಿಕ್ಕ ಯಾವ ಪ್ರಾಣಿಗಳಿಗೂ ಆಡುನುಡಿ ತಿಳಿದಿಲ್ಲ. ಅವು ತಮ್ಮದಾದ ನಾಲ್ಕು ಅಥವಾ ಐದು ಭಾವಗಳನ್ನು ಮಾತ್ರ ಅಭಿವ್ಯಕ್ತಿಸಬಲ್ಲವು. ಮಾನವನ ಮಾನಸ ಸರೋವರದ ಭಾವದಲೆಗಳ ಲೆಕ್ಕಕ್ಕೆ ಸಂಖ್ಯೆಯೇ ಇಲ್ಲ. ಅಂತೆಯೇ ಒಂದೊಂದು ಪ್ರಾಣಿಗೂ ಒಂದೊಂದು ವಿಶಿಷ್ಟ ಗುಣವಿದ್ದರೆ, ಮಾನವನಲ್ಲಿ ಆ ಎಲ್ಲ ಪ್ರಾಣಿಗಳ ಎಲ್ಲ ಗುಣಗಳೂ ಅಡಗಿವೆ. ಹಸುವಿನಲ್ಲಿ ಸಾಧುತ್ವವಿದೆ. ಹಾವಿನಲ್ಲಿ ಸೇಡಿದೆ. ಹುಲಿಯಲ್ಲಿ ಉಗ್ರತೆಯಿದೆ. ಕಪಿಯಲ್ಲಿ ಚಪಲತೆ ಇದೆ. ನರಿಯಲ್ಲಿ ಕುತಂತ್ರ ಬುದ್ಧಿ ಇದೆ. ಕತ್ತೆಯಲ್ಲಿ ಮೂರ್ಖತೆ ಇದೆ. ಆದರೆ ಮಾನವನಲ್ಲಿ ಅವೆಲ್ಲ ಗುಣಗಳೂ ಇವೆ. ಅವನು ಎಲ್ಲ ಗುಣಗಳ ವಸ್ತು ಸಂಗ್ರಹಾಲಯ! ಭಾವಾಭಿವ್ಯಕ್ತಿಯ ಸಂದರ್ಭದಲ್ಲಿ ಪ್ರಾಣಿಗಳಲ್ಲಿ ಮಿತಿ ಇದ್ದಂತೆ ಮಾನವನಲ್ಲಿ ಇಲ್ಲ. ಅವನು ಭಾಷೆಯನ್ನು ಬಹು ವಿಧದಲ್ಲಿ ದುಡಿಸಿಕೊಳ್ಳುತ್ತಾನೆ. ಆ ರೀತಿಯ ಮಾನವ ಬಳಕೆಯ ಭಾಷೆಗೆ ವೈಶಿಷ್ಟ್ಯಗಳು ಏಳು ಎಂಬುದಾಗಿ ಹ್ಯಾಕೆಟ್ ಹೇಳುತ್ತಾನೆ. ಅವುಗಳ ಸ್ಥೂಲ ಪರಿಚಯ ಮಾಡಿಕೊಳ್ಳೋಣ.

**೧. ದ್ವಿವಿಧತೆ (Duality)**

ವಾಕ್ ಮತ್ತು ಅರ್ಥಗಳೆರಡೂ ಜಗತ್ಪಿತರಾದ ಪಾರ್ವತೀ–ಪರಮೇಶ್ವರರಂತೆ ಅವಿನಾಭಾವಿಗಳು (Inseperable Elements) ಎಂದಿದ್ದಾನೆ ಕಾಳಿದಾಸ. ಭಾಷೆಯ ಉಚ್ಚಾರದಲ್ಲಿ ಧ್ವನಿಸಂಕೇತಗಳ ಮೊತ್ತ ಮತ್ತು ಅವಕ್ಕಿರುವ ಅರ್ಥ. ಇವು ಅನ್ಯೋನ್ಯ. ಒಂದು ಕಡೆ ಧ್ವನಿ ವ್ಯವಸ್ಥೆ, ಇನ್ನೊಂದು ಕಡೆ ಅರ್ಥವ್ಯವಸ್ಥೆ ಇದ್ದೇ ಇರುತ್ತದೆ. ಇದನ್ನು ಮನುಷ್ಯನಾಡುವ ಭಾಷೆಗಿರುವ ವೈಶಿಷ್ಟ್ಯ ಎನ್ನುತ್ತಾನೆ ಭಾಷಾವಿಜ್ಞಾನಿ.

ಉದಾಹರಣೆಗೆ 'ಹಸು' ಇದರಲ್ಲಿ ಹ್+ಅ+ಸ್+ಉ ಎಂಬ ನಾಲ್ಕು ಧ್ವನಿಮಾ (Phoneme)ಗಳಿವೆ. ಈ ಧ್ವನಿಮಾಗಳು ಅಥವಾ ಧ್ವನಿ ಮೊತ್ತವು ಒಗ್ಗೂಡಿ 'ಹಸು' ಎಂಬ ಒಂದು ಅಕೃತಿಮಾ (Morpheme) ಆಗುತ್ತದೆ. ಹಸು ಎಂಬುದು ಧ್ವನಿ: ಒಂದು ನಿರ್ದಿಷ್ಟ ಪ್ರಾಣಿ ಎಂಬುದು ಅದಕ್ಕೆ ಅರ್ಥ. ಈ ಶಬ್ದಕ್ಕಿರುವ ಈ ಅರ್ಥವನ್ನು ಈ ಭಾಷೆಯನ್ನಾಡುವ ಜನ ಒಪ್ಪಿದ್ದಾರೆ;

ಒಪ್ಪಿ ಬಳಸುತ್ತಲೂ ಇದ್ದಾರೆ. ಹೀಗೆ ಮಾತು ಮತ್ತು ಅರ್ಥ ಅನ್ಯೋನ್ಯವಾಗಿ ಅಳವಟ್ಟ ಬಗೆಯನ್ನು ಭಾಷೆಯಲ್ಲಿ ದ್ವಿವಿಧತೆ ಎನ್ನುತ್ತಾರೆ.

**೨. ಉತ್ಪಾದಕತೆ (Productivity)**

ಸಕ್ಕರೆ ಒಂದೇ ವಸ್ತುವಾಗಿದ್ದರೂ ಅದನ್ನು ಬೇರೆಬೇರೆ ಪದಾರ್ಥಗಳೊಂದಿಗೆ ಸಂಯೋಜಿಸಿದರೆ ಒಂದೊಂದು ಹೆಸರಿನ ಸಿಹಿ ಅನ್ನಿಸಿಕೊಳ್ಳುತ್ತದೆ. ಅದೇ ರೀತಿ ಸಿದ್ಧ ಧ್ವನಿಸಂಕೇತಗಳನ್ನು ಒಗ್ಗೂಡಿಸಿಕೊಂಡು ಅರ್ಥವುಳ್ಳ ಅನೇಕ ಶಬ್ದಗಳನ್ನು ನಿರ್ಮಿಸಿಕೊಳ್ಳುತ್ತೇವೆ. ಉದಾಹರಣೆಗೆ: 'ಮೆಡು' ಧಾತುವಿನಿಂದ ಮೆಟ್ಟು, ಮೆಟ್ಟಿಲು ಇತ್ಯಾದಿ ಶಬ್ದಗಳು ನಿಷ್ಪನ್ನವಾಗುತ್ತವೆ. ಅಂತೆಯೇ ತನ್ನಲ್ಲಿಯೇ ಇರುವ ಎರಡೆರಡು ಪದಗಳನ್ನು ಕೂಡಿಸಿ ಬೆಂಕಿ+ಪೊಟ್ಟಣ, ಸೀಮೆ+ಎಣ್ಣೆ ಇತ್ಯಾದಿ ಪದಗಳನ್ನು ಸೃಷ್ಟಿಸುತ್ತೇವೆ. ಹೀಗೆ ವಸ್ತು, ಸಂಪರ್ಕ, ಸಂದರ್ಭ ಇವುಗಳಿಗನುಗುಣವಾಗಿ ಒಂದು ಭಾಷೆಯು ತನ್ನದೇ ಆದ ಹೊಸಹೊಸ ಶಬ್ದಗಳನ್ನು ನಿರ್ಮಿಸಿಕೊಳ್ಳುತ್ತಾ ಹೋಗುತ್ತದೆ. ಮತ್ತು ಅವುಗಳನ್ನು ನಿರ್ದಿಷ್ಟ ಅರ್ಥದಲ್ಲಿ ಪ್ರಚಾರಕ್ಕೆ ತರುತ್ತಾ ಹೋಗುತ್ತದೆ. ವಿಧಾನಸೌಧ (Legislative House) ದೂರವಾಣಿ (Telephone) ಭಯೋತ್ಪಾದಕರು (Terrorist) ಭ್ರಷ್ಟಾಚಾರ (Corruption) ರಸ್ತೆ ರೈಲು (Road Train) ದೂರವಾಣಿ ಕದ್ದಾಲಿಕೆ (Telephone Trapping) ಇತ್ಯಾದಿ ಪದಗಳು ಅಂತಹ ಉತ್ಪಾದಕ ಗುಣದ ಫಲ.

ಇದೇ ರೀತಿ ನಾವು ಹಿಂದೆಂದೂ ಕೇಳದ ಬಳಸದ ಒಂದು ಪದವನ್ನು ಒಬ್ಬ ಪ್ರಯೋಗಿಸುತ್ತಾನೆಂದು ಇಟ್ಟುಕೊಳ್ಳೋಣ. ಅದು ಅಪರಿಚಿತವಿದ್ದರೂ ಭಾಷೆಯ ಸಾದೃಶ್ಯದಿಂದಲೋ ಅಥವಾ ಸನ್ನಿವೇಶ ಪ್ರಭಾವದಿಂದಲೋ ಅದರರ್ಥ ಗ್ರಾಹ್ಯವಾಗುತ್ತದೆ. ಉದಾಹರಣೆಗೆ: ಭೀಮ ಕುಪಿತನಾಗಿ ಒಮ್ಮೆ ಧರ್ಮರಾಯನಿಗೆ 'ನಿನ್ನ ನುಡಿ ಎನಗೆ ಟಾಠಡಾಢಣಂ' ಎನ್ನುತ್ತಾನೆ. ಈ ಟಾಠಡಾಢಣ' ಪ್ರಯೋಗ ಹೊಸದು. ಅದಕ್ಕೆ ನಿಘಂಟುವಿನಲ್ಲಿ ಅರ್ಥಸಿಗದು. ಆದರೆ ಕೋಪದ ಸಂದರ್ಭದಲ್ಲಿ ಬಂದಿರುವುದರಿಂದ 'ನಿನ್ನ ಮಾತು ನನಗೆ ಮಾನ್ಯವಲ್ಲ. ನಿನ್ನಾಜ್ಞೆಯನ್ನು ನಾನು ಮೀರುತ್ತೇನೆ' ಎಂಬ ಧೋರಣೆಯನ್ನು ಅದು ಪ್ರಕಾಶಪಡಿಸುತ್ತದೆ. ಅದು ಕೇಳುಗನಿಗೆ ವೇದ್ಯವಾದರೆ ಬಳಸಿದ ಭಾಷೆ ಸಾರ್ಥಕ.

ಹೀಗೆ ಹೊಸ ಹೊಸ ಪದಗಳನ್ನೂ ಹೊಸ ಅರ್ಥಗಳನ್ನೂ ನಿರ್ಮಾಣ ಗೈವ ಭಾಷಾಶಕ್ತಿಯೇ ಉತ್ಪಾದಕತೆ.

**೩. ಯಾದೃಚ್ಛಿಕತೆ ಅಥವಾ ಅನುಕೂಲ್ಯ (Arbitrariness)**

ಮಾನವ ಭಾಷೆಯ ಅರ್ಥಪರಂಪರೆ ಅನುಕೂಲತೆಗೆ ಅಥವಾ ಯಾದೃಚ್ಛಿಕ (arbitrary) ಪ್ರಾಣಿಗಳ ಭಾಷೆ ಪ್ರತೀಕಾತ್ಮಕ (Iconic) ಯಾದೃಚ್ಛಿಕ ಭಾಷೆಯ ಕ್ಷೇತ್ರ ವಿಶಾಲ, ಪ್ರತೀಕಾತ್ಮಕ ಭಾಷೆಯ ಕ್ಷೇತ್ರ ತುಂಬಾ ಕಿರಿದು. ಮಾನವ ಭಾಷೆ ಅನೇಕ ಧ್ವನಿಮಾಗಳನ್ನು ಜೋಡಿಸಿಕೊಂಡು ಅರ್ಥ ಕಲ್ಪಿಸುತ್ತಾ ಹೋಗುತ್ತದೆ. ಆ ಸ್ವಾತಂತ್ರ ಪ್ರಾಣಿಗಳ ಸಂಜ್ಞಾ ಭಾಷೆಯಲ್ಲಿಲ್ಲ. ಮಾನವ ತನ್ನ ಹೊಸ ಹೊಸ ಆಲೋಚನೆಗೆ ಹೊಸಹೊಸ ಅರ್ಥವುಳ್ಳ ಶಬ್ದಗಳನ್ನು ಸೃಷ್ಟಿಸಬಲ್ಲ, ಹೆಸರಿಸಬಲ್ಲ, ಅದು ರೂಢಿಯನ್ನು ವಿಶೇಷವಾಗಿ ಅವಲಂಬಿಸಿರುತ್ತದೆ. ಉದಾಹರಣೆಗೆ: ಇಂಗ್ಲಿಷಿನ ಗೌರ್ನಮೆಂಟ್ ಎಂಬ ಶಬ್ದಕ್ಕೆ ಕನ್ನಡಿಗರು ಸರ್ಕಾರ ಎಂತಲೂ, ತೆಲುಗರು ಪ್ರಭುತ್ವಮು ಎಂತಲೂ, ತಮಿಳರು ಅರಸು ಎಂತಲೂ ಕರೆಯುತ್ತಾರೆ. ಅದೇ ರೀತಿ ಟೆಲಿವಿಷನ್‌ಗೆ ಭಾರತೀಯರು ದೂರದರ್ಶನ ಎಂದರೆ, ಸಿಲೋನಿಗಳು 'ರೂಪ ಸಾರಿಣಿ' ಎನ್ನುತ್ತಾರೆ. ನಾಯಿ ಎಂಬ ಒಂದು ಪ್ರಾಣಿಗೆ ದ್ರಾವಿಡ ಭಾಷೆಗಳಾದ ಕನ್ನಡದಲ್ಲಿ ನಾಯಿ, ಪಂಗೊದಲ್ಲಿ ನೆಕುಡ್, ಕುವಿನಲ್ಲಿ ನೆಹುರಿ, ನಾಯ್ಕಿಯಲ್ಲಿ ಆತೆ, ಪರ್ಜಿಯಲ್ಲಿ ನೆತ್ತ, ಗದಬದಲ್ಲಿ ನೀತೆ, ಕೊಂಡದಲ್ಲಿ ನುಕುಡಿ ಎಂದೂ, ಇಂಡೋ ಯೋರೋಪಿಯನ್ ವರ್ಗದ ಭಾಷೆಗಳಾದ ಸಂಸ್ಕೃತದಲ್ಲಿ ಶ್ವಾನ. ಇಂಗ್ಲಿಷ್ನಲ್ಲಿ ಡಾಗ್ ಜರ್ಮನ್ನಲ್ಲಿ ಹುಂಟ್, ಹಿಂದಿಯಲ್ಲಿ ಕುತ್ತ, ಮರಾಠಿಯಲ್ಲಿ ಕುತರಾ ಎಂದೂ ಕರೆಯುತ್ತಾರೆ. ವಸ್ತು ಒಂದೇ ಆಗಿದ್ದರೂ ಅದನ್ನು ಸಂಕೇತಿಸುವ ಧ್ವನಿ ಮೊತ್ತ ಒಂದಾಗಿರುವುದಿಲ್ಲ. ಪ್ರತಿ ಸಮುದಾಯವೂ ತನಗನುಕೂಲವಾದ ರೀತಿಯಲ್ಲಿ ಧ್ವನಿಸುತ್ತಾ ಹೋಗುತ್ತದೆ.

ಹೀಗೆ ಒಂದು ಹೊಸವಿಚಾರ ಅಥವಾ ವಸ್ತುವಿಗೆ ಒಂದು ಧ್ವನಿ ಮೊತ್ತವನ್ನೂ ಆ ಮೊತ್ತಕ್ಕೆ ತಮ್ಮ ಭಾಷಾ ಜಾಯಾಮಾನಕ್ಕೊಪ್ಪುವಂತಹ ಒಂದು ಅರ್ಥವನ್ನೂ ಕಲ್ಪಿಸಿದರೆ, ಅದೇ ಅರ್ಥವನ್ನು ಗರ್ಭೀಕರಿಸಿಕೊಂಡು ಆ ಪದ ರೂಢಿಗೆ ಬಂದರೆ ಅದು ತನ್ನದಾದ ಪರಂಪರೆಯನ್ನು ನಿರ್ಮಿಸಿಕೊಂಡು ಚಲಾವಣೆ ಪಡೆಯುತ್ತದೆ. ಒಂದು ವೇಳೆ ವ್ಯಾಕರಣ

ದೃಷ್ಟಿಯಿಂದಲಾಗಲಿ ಅಥವಾ ಮತ್ತಾವುದೇ ದೃಷ್ಟಿಯಿಂದಲಾಗಲಿ ದೋಷವೆನಿಸಿದ್ದಾದರೂ ಪ್ರಯೋಗದಲ್ಲಿ ಸಾಧುವೆ ಆಗಿಬಿಡುತ್ತದೆ. ಉದಾಹರಣೆಗೆ 'ತೊಂಬತ್ತು' ಮತ್ತು 'ರೈಲು' ಪದಗಳನ್ನು ನೋಡಿ. ತೊಂಬತ್ತು ಎಂಬುದು ತೊಳ್ಪತ್ತು ತೊಳ್ಪತ್ತು>ತೊಂಬತ್ತು ಎಂದಾಗಿದೆ, ತೊಳ್ ಅಥವಾ ತೋಳಿ ಅಂದರೆ ಮೊದಲು; ಪತ್ತು ಅಂದರೆ ಹತ್ತು. ಅದರರ್ಥ ಹತ್ತಕ್ಕೆ ಮೊದಲು '೯' ಆಗಬೇಕಿತ್ತು ವ್ಯಾಕರಣದ ಪ್ರಕಾರ, ಆದರೆ ಅದು '೯೦' ಗೆ ತೊಣ್ಣೂರ್ ಎನ್ನುತ್ತಾರೆ. ಅದು ಸರಿಯಾಗಿದೆ. ತೊಳ್+ನೂರ್=ತೊಳ್ನೂರ್>ತೊಣ್ಣೂರ್ ಆಗಿದೆ. ಮತ್ತೊಂದು ಶಬ್ದ ರೈಲು. ಇದರ ಇಂಗ್ಲಿಷ್ ಅರ್ಥ ಕಂಬಿ; ಆದರೆ ಕನ್ನಡದ ಬಳಕೆಯಲ್ಲಿ ಟ್ರೈನಿಗೆ ಅನ್ವಯ. ಇದೇ ರೀತಿ ;ಕೂಳ್;' ಎಂಬ ಶಬ್ದ. ಹಳಗನ್ನಡದಲ್ಲಿ ಅನ್ನಕ್ಕಿದ್ದ ಕನ್ನಡದ ಶಬ್ದ ಅದು. ಕಾಲಕ್ರಮೇಣ ಅರ್ಥ ಸಂಕುಚಿತಗೊಳಿಸಿಕೊಂಡು 'ಕೂಳ್' ಅನ್ನುವುದು ಸತ್ತವರ ಮನೆಯಲ್ಲಿ ತಿನ್ನುವ ಅನ್ನ ಎಂಬ ಹೀನಾರ್ಥ ಪಡೆಯಿತು. ಇದೇ ಭಾಷೆಯಲ್ಲಿನ ಯಾದೃಚ್ಛಿಕತೆ.

೪. **ವಿಶಿಷ್ಟಪ್ರಾವೀಣ್ಯ** (**Specialisation**)

ಇಂಗ್ಲಿಷ್‌ನಲ್ಲಿ He kicked his bucket ಎಂದರಾಗಲಿ ಕನ್ನಡದಲ್ಲಿ ಅವನು 'ನೆಗೆದುಬಿದ್ದ' ಎಂದರಾಗಲಿ 'ಅವನು ಸತ್ತ' ಎಂದೇ ಅರ್ಥ. ಇದನ್ನು ವಾಚ್ಯಾರ್ಥಕ್ಕಿಂತ ಭಿನ್ನವಾದ ವ್ಯಂಗ್ಯಾರ್ಥವನ್ನು ವ್ಯಂಜಿಸುತ್ತದೆ. ಪ್ರಯೋಗಗೊಂಡ ಮೇಲಿನ ವಾಕ್ಯಗಳಿಗೂ ಅರ್ಥಕ್ಕೂ ಯಾವ ಸಂಬಂಧವೂ ಇಲ್ಲ. ಆದರೆ ಪ್ರಯೋಗದ ವೇಳೆಯಲ್ಲಿ ವಿಶಿಷ್ಟ ಅರ್ಥಸ್ಫುರಣಕ್ಕೆ ಸಾಧನವಾಗುತ್ತದೆ. ಹೀಗೆ ಒಂದು ಪದವ್ಯಕ್ತವಾದ ಕೂಡಲೆ ಅನೇಕ ಅರ್ಥಪದರಗಳು ಬಿಚ್ಚಿಕೊಳ್ಳುತ್ತಾ ಹೊಸಹೊಸ ಅರ್ಥಗಳನ್ನು ಹಿಂಡುತ್ತಾ ಹೋಗುವ ಸಾಮರ್ಥ್ಯ ಭಾಷೆಗಿದೆ. ಇದು ಭಾಷೆಯ ವಿಶಿಷ್ಟ ಪ್ರಾವೀಣ್ಯ.

೫. **ವಿನಿಮಯಗುಣ** (**Inter changeability**)

ಸಾಮಾನ್ಯವಾಗಿ ಒಂದು ಭಾಷೆಯನ್ನಾಡುವವನು ಅದೇ ಭಾಷೆಯನ್ನು ಕೇಳುವವನೂ ಆಗಿರುತ್ತಾನೆ. ಸೈದ್ಧಾಂತಿಕವಾಗಿ ತಾನೇ ಹೇಳುವ, ತಾನೇ ಕೇಳುವ, ಕೇಳಿದ್ದನ್ನು ಅರ್ಥಮಾಡಿಕೊಂಡು ಪ್ರತಿಯಾಗಿ ಅರ್ಥವಾಗುವಂತೆ ಉಚ್ಚರಿಸುವ ಸಾಮರ್ಥ್ಯ ಆತನಿಗಿರುತ್ತದೆ. ಒಂದು ವೇಳೆ ಕನ್ನಡ ಮಾತನಾಡುವವನು ಮಧ್ಯೆ ಮಧ್ಯೆ 'ನಾನು ಸ್ಕೂಲ್ಗೆ ಹೋಗಿ ಬೇಗ ರೈಲ್ವೇ ಸ್ಟೇಷನ್ನಿಗೆ ಬರ್ತೀನಿ' ಅಂದರೆ ಆ ಭಾಷೆಯ ಕೇಳುಗ ಕನ್ನಡಿಗನಿಗೆ ಅರ್ಥವಾಗುತ್ತದೆ. ಕಾರಣ ಇಂಗ್ಲಿಷ್ ಬೆರೆಸಿದ ಮಾತು ರೂಢಿಯಲ್ಲಿರುವುದರಿಂದ. ಹೀಗೆ ಪರಸ್ಪರ ಧ್ವನಿ ಮತ್ತು ಅರ್ಥಗಳ ವಿನಿಮಯ ಗುಣ ಭಾಷೆಯದು.

**೬. ಸ್ಥಾನಪಲ್ಲಟತೆ (Displacement**)

ಭೀಷ್ಮ ಪ್ರತಿಜ್ಞೆ, ಲಕ್ಷ್ಮಣರೇಖೆ, ಪ್ರೂಕ್ರೂಷ್ಟಿಯನ್ ಬೆಡ್ ಮೊದಲಾದ ನುಡಿಗಟ್ಟುಗಳನ್ನೂ, ನಂದನವನ, ಕಿನ್ನರಿಯರು, ಸ್ವರ್ಗ, ನರಕ ಮೊದಲಾದ ಕಣ್ಣಿಂದ ನೋಡದ, ಕೈಯಿಂದ ಮುಟ್ಟದ ವಸ್ತುಗಳ ಹೆಸರುಗಳನ್ನು ನಾವಾಡಿದಾಗ ಭಾಷೆಯ ಜಾಯಮಾನ ತಿಳಿದವರಿಗೆ ಅವುಗಳ ಅರ್ಥ ಸ್ಪಷ್ಟವಾಗುತ್ತದೆ. ಹೀಗೆ ವ್ಯಕ್ತವನ್ನೂ ವ್ಯಕ್ತ ವಸ್ತುವೆಂಬಂತೆ ಅಂದರೆ ವಸ್ತು ಕಣ್ಣ ಮುಂದಿಲ್ಲದಿದ್ದರೂ ಇರುವಂತೆ, ಅರ್ಥಮಾಡಿಕೊಳ್ಳುವಂತೆಸಗುವ ಭಾಷಾಶಕ್ತಿಯೆ ಸ್ಥಾನಪಲ್ಲಟತೆ.

೭. **ಸಂಸ್ಕೃತಿವಾಹಕತೆ (Cultural Transmission**)

ಭಾಷೆ ಮೂಲತಃ ಕಲಿಕೆಯಿಂದ ಬಂದದ್ದು. ಬರುವಂಥದ್ದು. ಈ ಕಲಿಕೆ ಮಗುವಿಗೆ ಚಿಕ್ಕಂದಿನಿಂದ ಆಗುತ್ತದೆ. ತಂದೆ, ತಾಯಿ ಅಥವಾ ಅದರ ಪರಿಸರ. ಅವರಾಡುವ ಭಾಷೆ, ಭಾಷೆಯ ಅರ್ಥ ಮಹತ್ವಗಳನ್ನು ಅನಾಯಾಸವಾಗಿ ಕಲಿತು ಬಿಡುತ್ತದೆ. ಉದಾಹರಣೆಗೆ: ವೀರಶೈವರ ಮನೆಯ ಮಗು ಶರಣ ಎಂದರಾಗಲಿ, ಜೈನರ ಮನೆಯ ಮಗು ಶ್ರಾವಕ ಎಂದರಾಗಲಿ, ವೈದಿಕರ ಮನೆಯ ಮಗು ಶ್ರಾದ್ಧ ಎಂದರಾಗಲಿ ಗ್ರಹಿಸಲು ಕಷ್ಟಪಡಬೇಕಾಗಿಲ್ಲ. ಅದು ತನ್ನ ಹಿರಿಯರ ಸುಪರಿಚಿತ ಜ್ಞಾನದಿಂದ ಶೀಘ್ರವಾಗಿ ಅರ್ಥಮಾಡಿಕೊಳ್ಳಬಲ್ಲುದು. ಅದೇ ರೀತಿ ಮಗ ದೊಡ್ಡವನಾದ ಮೇಲೆ ತನ್ನ ಮಕ್ಕಳಿಗೆ ಅದೇ ಅರ್ಥಗ್ರಹಣ ಶಬ್ದಗಳನ್ನು ಕಲಿಸುತ್ತಾನೆ. ರೂಢಿಗೆ ತರುತ್ತಾನೆ. ಹೀಗೆ ಇದು ತಲತಲಾಂತರದವರೆಗೆ ರೂಢಿಗತವಾಗುತ್ತಾ ಹೋಗುತ್ತದೆ. ಭಾಷೆ ವಹಿಸುವ ಈ ಹೊಣೆಯನ್ನು 'ಸಂಸ್ಕೃತಿವಾಹಕತೆ' ಎನ್ನುತ್ತೇವೆ.

ಈ ಏಳೂ ಬಗೆಯ ಸಾಮರ್ಥ್ಯಗಳು ಮಾನವನಾಡುವ ಭಾಷೆಗೆ ಮಾತ್ರ ಇರಲು ಸಾಧ್ಯ. ಬೇರಾವ ಪ್ರಾಣಿಗೂ ಇಲ್ಲದ ಕೊಡುಗೆ ಮಾನವನಿಗಿದೆ. ಮಾನವ 'ಮಾನವ'ನಾದದ್ದು ಮಾತಿನಿಂದ. ಇಂದು ಭಾಷೆಯೇ ಇಲ್ಲದ ಮಾನವ ಸಮಾಜವನ್ನು

ಊಹಿಸಿಕೊಳ್ಳುವುದೂ ಕಷ್ಟ. ಮಾನವ ಜೀವನದಲ್ಲಿ ಭಾಷೆ ವಹಿಸುವ ಪಾತ್ರ ಅತ್ಯಂತ ಮಹತ್ವದ್ದು. ಅದು ಅವನ ಬದುಕಿನ ಮೇಲೆ ತುಂಬು ಪ್ರಭಾವ ಬೀರಿದ ಏಕೈಕ ಶಕ್ತಿ. ಅದು ಮೂಲತಃ ಒಂದು ಪ್ರಮುಖ ಸಾಮಾಜಿಕ ಕ್ರಿಯೆ. ಅದು ವ್ಯಕ್ತಿ–ವ್ಯಕ್ತಿಯನ್ನು, ವ್ಯಕ್ತಿ ಸಮಾಜವನ್ನೂ ಬೆಸೆಯುವ ಸಾಧನ. ವ್ಯಕ್ತಿಯು ತನ್ನ ವಿಶಿಷ್ಟ ವ್ಯಕ್ತಿತ್ವವನ್ನು ಪ್ರದರ್ಶಿಸಿ ಸಮಾಜವೊಂದರ ಕ್ರಿಯಾಶೀಲ ಸದಸ್ಯನಾಗಲು ಅವನಿಗೆ ನೆರವಾಗುವನೇ ಹೀಗೆ ನುಡಿಯ ರೂಪದಲ್ಲೋ ಲಿಪಿಯ ರೂಪದಲ್ಲೋ ಅಮೂರ್ತ ಭಾವಗಳಿಗೆ ಮೂರ್ತ ರೂಪಕೊಡುವುದರಿಂದ ಅದು ಸಮರ್ಥ ಸಂಸ್ಕೃತಿ ವಾಹನ. 'ಮಾತೇ ಮುತ್ತು ಮಾತೇ ಮೃತ್ಯು. ಎಂಬುದು ಗಾದೆ. ಮಾತಿನ ಮಹತ್ವವರಿತು ಅದನ್ನು ಪ್ರಯೋಗಿಸಬೇಕು ಎಂಬುದು ಅದರ ಅರ್ಥ. ಮಾತು ಮಾತಲ್ಲ 'ಮಾತು ಜ್ಯೋತಿರ್ಲಿಂಗ!

೩. **ಭಾಷಾ ವರ್ಗೀಕರಣ** (**The classification of Language**)

ಪ್ರಮುಖ–ಕ್ಷುಲ್ಲಕ, ಜೀವಂತ–ಮೃತ, ಲಿಪಿಯುಳ್ಳ–ಲಿಪಿಯಿರದ ಎಷ್ಟೆಷ್ಟೋ ಭಾಷೆಗಳಿವೆ. ಈ ಜಗತ್ತಿನಲ್ಲಿ, ಅವುಗಳಲ್ಲಿ ಗ್ರಂಥಗಳಲ್ಲಿ ಮಾತ್ರ ಉಳಿದು ವ್ಯವಹರಣೆಯಲ್ಲಿಲ್ಲದ ಸಂಸ್ಕೃತ, ಹೀಬ್ರೂ, ಗ್ರೀಕ್, ಲ್ಯಾಟಿನ್ ಮೊದಲಾದ ಮೃತ ಭಾಷೆಗಳೂ ಇವೆ. ತುಳು, ಲಂಬಾಣಿ, ಕೊಂಕಣಿ ಮೊದಲಾದ ಆಡುಭಾಷೆಗಳು ಕಾಲಚಕ್ರಕ್ಕೆ ಸಿಕ್ಕು ಹಲವು ಅಳಿದಿರುವುದೂ ಉಂಟು. ಉದಾಹರಣೆಗೆ ೧೭ನೆಯ ಶತಮಾನದಲ್ಲಿತ್ತೆಂದು ಹೇಳಲಾದ ಪರ್ಷಿಯನ್ ಭಾಷೆ; ೧೯ನೆಯ ಶತಮಾನದಲ್ಲಿದ್ದ ಡಾಲ್ಮಿಟಿಯನ್ ಭಾಷೆ. ಡಾಲ್ಮಟಿಯನ್ ಭಾಷೆಯನ್ನಾಡುತ್ತಿದ್ದ ಒಬ್ಬನೇ ಒಬ್ಬವ್ಯಕ್ತಿ ಇದ್ದನಂತೆ. ಅವನು ಆ ಭಾಷೆಯ ಕಟ್ಟಕಡೆಯ ವ್ಯಕ್ತಿಯಾಗಿದ್ದು ೧೮೯೮ರಲ್ಲಿ ಗಣಿ ಆಸ್ಫೋಟದಲ್ಲಿ ಕೊನೆಯುಸಿರೆಳೆದನಂತೆ. ಅವನ ಜೊತೆಯಲ್ಲಿ ಆ ಭಾಷೆಯೂ ಸತ್ತುಹೋಯಿತು. ರಾಜಕೀಯ ಕಾರಣದಿಂದಾಗಿ ಆಫ್ರಿಕ, ಉತ್ತರ ಅಮೇರಿಕೆಗಳ ಮೂಲನಿವಾಸಿಗಳಾಡುತ್ತಿದ್ದ ಭಾಷೆಗಳು, ಕೆಲವೇ ಜನ ದ್ರಾವಿಡರು ಹರಪ್ಪ–ಮೊಹೆಂಜಾರೋ ಭೂಭಾಗಗಳಲ್ಲಿದ್ದು ಇಂದು ಪಾಕೀಸ್ಥಾನಕ್ಕೆ ಸೇರಿರುವ ಬ್ರಾಹುಈ ಭಾಷೆ – ಇವು ಮಾಯವಾಗುತ್ತಿವೆ. ದ್ರಾವಿಡ ಭಾಷೆಯ ಮೂಲ ಸ್ವರೂಪಗಳನ್ನುಳ್ಳ ಈ ಬ್ರಾಹುಈ ಭಾಷೆಯನ್ನು ಉಚ್ಚರಿಸಿದರೆ ನಾಲಗೆ ಸೀಳುವುದಾಗಿ ಪಾಕೀಸ್ತಾನದ ಆಜ್ಞೆ ಇದೆಯಂತೆ. ಆ ಭಾಷಾ ಅಧ್ಯಯನಕ್ಕೆ ಹೊರಗಿನವರಿಗೆ ಅವಕಾಶವಿಲ್ಲವಂತೆ ಒಂದು ಭಾಷೆಯನ್ನು ನಾಶಪಡಿಸಿದರೆ ಒಂದು ಸಂಸ್ಕೃತಿ ಮತ್ತು ಜನಾಂಗ ನಾಶಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನ. ಏನೇ ಇರಲಿ ಪ್ರಪಂಚದಲ್ಲಿ ಭಾಷೆಗಳು ಸುಮಾರು ಮೂರು ಸಾವಿರಕ್ಕೂ ಮಿಕ್ಕು ಇವೆ ಎಂದು ಭಾಷಾ ವಿಜ್ಞಾನಿಗಳು ಹೇಳುತ್ತಾರೆ.

ಇಷ್ಟೂ ಸಂಖ್ಯೆಯ ಭಾಷೆಗಳು ಒಂದೇ ರೂಪದವುಗಳಲ್ಲ. ಒಂದೇ ಸ್ವರೂಪದವುಗಳೂ ಅಲ್ಲ. ಒಂದೊಂದರಲ್ಲೂ ಒಂದೊಂದು ವೈಶಿಷ್ಟ್ಯ ಇದ್ದೇ ಇರುತ್ತದೆ. ಅದನ್ನು ಗುರುತಿಸಿ, ವಿಭಜಿಸಿ, ವಿಶ್ಲೇಷಿಸಿ ತೋರಿಸಲು ಭಾಷೆಗಳನ್ನು ಕುರಿತ ಒಂದು ಸಮಗ್ರ ವೈಜ್ಞಾನಿಕ ಅಧ್ಯಯನದ ಅಗತ್ಯತೆ ಇತ್ತು. ಅದನ್ನು ಪೂರೈಸುವ ಸಲುವಾಗಿ ಭಾಷೆಯನ್ನು ಕುರಿತ ಆ ಅಧ್ಯಯನದ ಅನುಕೂಲಕ್ಕಾಗಿ ಭಾಷಾವಿಜ್ಞಾನಿಗಳು ಭಾಷೆಗಳ ವರ್ಗೀಕರಣ ಕಾರ್ಯವನ್ನು ಕೈಗೆತ್ತಿಕೊಂಡು ಕೆಲವು ಮಾಪನಗಳನ್ನು ಮುಂದಿಟ್ಟರು. ಅವುಗಳಲ್ಲಿ ಪ್ರಮುಖವಾದವುಗಳು ನಾಲ್ಕು.

೧. ಭೌಗೋಳಿಕ ವರ್ಗೀಕರಣ (Geographical Classification)

೨. ಜನಾಂಗಿಕ ವರ್ಗೀಕರಣ (Racial Classification)

೩. ಪ್ರಾರೂಪಕ ವರ್ಗೀಕರಣ (Typological Classification)

೪. ವಾಂಶಿಕ ವರ್ಗೀಕರಣ (Geneological Classification)

ಒಂದು ದೇಶ ಅಥವಾ ಒಂದು ರಾಷ್ಟ್ರದ ಜನರಾಡುವ ಭಾಷೆಗಳನ್ನು ಒಂದು ಗುಂಪಾಗಿ ಮಾಡುವುದು ಭೌಗೋಳಿಕ ಭಾಷಾ ವರ್ಗೀಕರಣ. ಇದು ಒಂದು ಬಗೆಯ ಕಲಸು ಮೇಲೋಗರ! ಏಕೆಂದರೆ ಒಂದು ದೇಶದಲ್ಲಿ ಜನರಾಡುವ ಹಲವು ಭಾಷೆಗಳು ಒಂದೇ ಜಾಯಮಾನಕ್ಕೆ ಸೇರಿದವುಗಳೇನಲ್ಲ. ಅಂಥವನ್ನು ಕೂಡಿಸಿ ಒಂದು ವೇದಿಕೆಯ ಮೇಲೆ ತಂದಿರಿಸುವುದು ವೈಜ್ಞಾನಿಕ ವಿಂಗಡಣೆ ಎಂದೆನಿಸುವುದಿಲ್ಲ. ರೂಪ ಸ್ವರೂಪಗಳಲ್ಲಿ ಒಂದೊಂದೂ ಒಂದೊಂದು ಜಾತಿ, ಒಂದೊಂದರದೂ ಒಂದೊಂದು ನೀತಿ. ಇಂತಹ ವಿಭಜನೆ ಸಾಧುವಲ್ಲ. ಭಾರತದಂತಹ ಸಂಕೀರ್ಣ ರಾಷ್ಟ್ರದಲ್ಲಿನ ಭಾಷೆಗಳೆಲ್ಲವನ್ನೂ ಒಂದು ವರ್ಗವಾಗಿ ಮಾಡುವುದರಲ್ಲಿ ಅರ್ಥವಿರುವುದಿಲ್ಲ. ಇದೇ ಸ್ಥಿತಿ ಆಫ್ರಿಕಾ ಖಂಡದ ಭಾಷೆಗಳಿಗೂ ಉತ್ತರ ಅಮೇರಿಕೆಯ

ಭಾಷೆಗಳಿಗೂ ಉಂಟು. ಅಲ್ಲಿನ ಭಾಷೆಗಳನೇಕವು ಭಿನ್ನಮೂಲಗಳುಳ್ಳವಾದ್ದರಿಂದ ಭೌಗೋಳಿಕವಾಗಿ ವಿಂಗಡಿಸಿಕೊಂಡು ಭಾಷೆಗಳನ್ನು ಅಧ್ಯಯನ ಮಾಡುವುದು ಅಸಮರ್ಪಕವೂ ಹೌದು, ಅಸಾಂಗತ್ಯವೂ ಹೌದು. ಒಂದು ವೇಳೆ ಮಾಡಿದರೆ ಅದು ದೋಷಪೂರ್ಣ ವಿಂಗಡಣೆಯಾಗುತ್ತದೆ.

೧. **ಜಾನಾಂಗಿಕ ವರ್ಗೀಕರಣ.**

ಆರ್ಯನ್ ಅಥವಾ ಇಂಡೋ–ಯೋರೋಪಿಯನ್ ಭಾಷೆ, ತುರೇನಿಯನ್ ಅಥವಾ ಸಿಥಿಯನ್ ಭಾಷೆ ಮತ್ತು ಸೆಮಿಟಿಕ್ ಭಾಷೆ ಎಂದು ಮೂರು ಜನಾಂಗದ ಆಧಾರದ ಮೇಲೆ ಮೂರು ವರ್ಗಗಳಾಗಿ ವಿಂಗಡಿಸಿದರು. ಆದರೆ ಇದೂ ಸಹ ಅಷ್ಟು ಸಮರ್ಪಕ ವರ್ಗೀಕರಣ ಆಗಲಿಲ್ಲ. ಏಕೆಂದರೆ ಈ ಮೂರು ಭಾಷಾವರ್ಗಗಳಿಗೆ ಸೇರದ ಭಾಷೆಗಳು ಎಷ್ಟೆಷ್ಟೋ ಇವೆ. ಅವುಗಳಿಗೆ ಮೇಲೆ ಹೇಳಿದ ಜನಾಂಗವೇ ಇಲ್ಲವಾದ್ದರಿಂದ ಜಾನಾಂಗಿಕ ವರ್ಗೀಕರಣ ಅರ್ಥಹೀನ. ಎರಡನೆಯದಾಗಿ, ಆಫ್ರಿಕದಲ್ಲೋ ಅಮೇರಿಕದಲ್ಲೋ ಇರುವ ಒಂದು ಜನಾಂಗ ಅಂದಿನಿಂದ ಇಂದಿನವರೆಗೂ ಅದೇ ಭಾಷೆಯನ್ನಾಡುತ್ತಿದ್ದಾರೆಂಬ ಭರವಸೆ ಇಲ್ಲ. ಅವರು ವಲಸೆ ಹೋದರೆ ಹೋದೆಡೆಯ ಭಾಷೆಯನ್ನು ಕಲಿತು ತಮ್ಮ ಮೂಲ ಭಾಷೆಯನ್ನು ಮರೆಯುತ್ತಾರೆ. ಇಲ್ಲವೆ ತಾವು ಇದ್ದೆಡೆಯಲ್ಲೇ ಇದ್ದರೂ ಪ್ರಬಲಶಕ್ತಿಗಳಾದ ಅನ್ಯಭಾಷೆಗಳ ಪ್ರಭಾವಕ್ಕೊಳಗಾದಾಗ ತಮ್ಮ ತಾಯಿ ನುಡಿಯನ್ನೇ ಸಂಪೂರ್ಣವಾಗಿ ಮರೆಯುವ ಸಂಭವ ಇದೆ. ಇಂದು ನೀಗ್ರೋ ಜನಾಂಗ ತಮ್ಮದಲ್ಲದ ಇಂಗ್ಲಿಷ್‌ಗೆ ಮಾರುಹೋಗಿರುವುದನ್ನು ಕಾಣಬಹುದು.

ಒಂದು ಭಾಷೆಗೆ ಬಾಹ್ಯ ಮತ್ತು ಆಂತರಿಕ ಎಂದು ಎರಡು ವಲಯಗಳಿರುತ್ತವೆ. ದಿನಬಳಕೆಯ ಪದಗಳು, ಶರೀರ ಅಂಗಾಂಗಗಳ ಹೆಸರುಗಳು, ಒಟ್ಟಿನಲ್ಲಿ ಭಾಷಾಕೋಶದ ಶಬ್ದಗಳನ್ನು ಎಣಿಸಿದರೆ ಅದು ಬಾಹ್ಯ (ಹೊರಮೈ) ಎನಿಸುತ್ತದೆ. ವ್ಯಾಕರಣಾಂಶಗಳನ್ನೊಳಗೊಂಡ ರಚನೆ ಆಂತರಿಕ (ಒಳಮೈ). ಇವೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ಎಫ್.ವಿ.ಷ್ಲೆಗಲ್, ಎಂ. ಡಬ್ಲ್ಯುಷ್ಲೆಗೆಲ್ ಮತ್ತು ಫ್ಲೀಷರ್ ವರ್ಗೀಕರಿಸಿದರು. ಅವರ ಪ್ರಕಾರ,

೧. ವಿವಿಕ್ತ (Isolating) ಭಾಷಾವರ್ಗ; ಚೀಣೀಭಾಷೆ

೨. ಅಂಟು (Agglutinative) ಭಾಷಾವರ್ಗ; ಟರ್ಕಿಷ್

೩. ಪ್ರಾತ್ಯಯಿಕ (Inflectional) ಭಾಷಾವರ್ಗ; ಇಂಡೋಯೋರೋಪಿಯನ್ ಮತ್ತು ಅರೇಬಿಕ್ ಮೊದಲಾದ ಸೆಮಿಟಿಕ್ ಭಾಷೆಗಳು

೪. ಬಹುಪದಯುಕ್ತ (Poly-synthetic) ಭಾಷಾವರ್ಗ: ಉತ್ತರ ಅಮೆರಿಕೆಯ ಭಾಷೆಗಳು.

೫. ಅಂತರ್ಗಮಕ ಭಾಷಾವರ್ಗ (Incorporating): ಬಾಸ್ಕ್ ಭಾಷೆ (Basque)

೩. **ಪ್ರಾರೂಪಕ ವರ್ಗೀಕರಣ**

ಮೊದಮೊದಲು ಈ ರಾಚನಿಕ ಅಥವಾ ಪ್ರಾರೂಪಕ ವರ್ಗೀಕರಣವು, ಕೆಲವು ವಿದ್ವಾಂಸರ ಆಸಕ್ತಿ ಕೆರಳಿಸಿದ್ದರೂ ಬಹುಕಾಲ ಭದ್ರವಾಗಿ ಉಳಿಯಲಿಲ್ಲ. ಪ್ರಪಂಚದ ಎಲ್ಲ ಭಾಷೆಗಳನ್ನೂ ಈ ಐದು ವರ್ಗಗಳಲ್ಲಿ ಅಳವಡಿಸಲು ಸಾಧ್ಯವಿಲ್ಲ ಎಂಬುದು ಅರಿವಿಗೆ ಬಂತು. ಮಿಗಿಲಾಗಿ ಒಂದು ಭಾಷೆಯ ರಚನಾ ಕ್ರಮ ಮತ್ತೊಂದು ಭಾಷೆಯಲ್ಲೂ ಇರುವ ಸಾಧ್ಯತೆಗಳಿವೆ. ಉದಾಹರಣೆಗೆ ಚೀಣೀ ಭಾಷೆಯ ಕೆಲವು ವೈಲಕ್ಷಣ್ಯಗಳು ಇಂಗ್ಲಿಷ್ ಭಾಷೆಯಲ್ಲೂ ಇವೆ. ಹಾಗೆಂದು ಅಂಟು ಭಾಷೆಯಾದ ಇಂಗ್ಲಿಷ್ ವಿವಿಕ್ತ ಭಾಷೆಯಾದ ಚೀಣಿಯೊಡನೆ ಸಮೀಕರಿಸಿ, ವರ್ಗರೂಪಿಸಲು ಬರುವುದಿಲ್ಲ. ಆದ್ದರಿಂದರ ರಾಚನಿಕ ಭಾಷಾವರ್ಗೀಕರಣವೂ ದೋಷಮುಕ್ತ ಅಲ್ಲ.

೪. **ವಾಂಶಿಕ ವರ್ಗೀಕರಣ.**

ಇದು ಹೆಚ್ಚು ಸಮರ್ಪಕ ಮತ್ತು ಬಹುಜನ ಸ್ವೀಕೃತ. ಸ್ಥೂಲ ಅವಲೋಕನಕ್ಕೆ ಹೊರನೋಟಕ್ಕೆ ಕೆಲವು ಭಾಷೆಗಳು ಭಿನ್ನವೆಂದು ತೋರಿದರೂ, ಮೂಲದಲ್ಲಿ ಒಂದೇ ಆಗಿರುವುದು ಕಂಡು ಬರುತ್ತದೆ. ಒಂದು ಕಾಲದಲ್ಲಿ ಒಂದು ಪ್ರದೇಶದಲ್ಲಿ ಒಂದು ಸಮುದಾಯ ಆಡುತ್ತಿದ್ದ ಭಾಷೆ, ಜನಸಂಖ್ಯೆ ಹೆಚ್ಚಿದ ಕಾರಣ ಬೇರೊಂದು ಪ್ರದೇಶಕ್ಕೆ ವಲಸೆ ಹೋಗಿ, ನೆಲೆಸಿ ತಮ್ಮ ಪೂರ್ವಜರು ಆಡುತ್ತಿದ್ದ ಭಾಷೆಯನ್ನು ಮರೆತು ಅಥವಾ ಆ ಭಾಷೆಗೆ ತಾವು ಹೊಸಾಹತುಗಳಲ್ಲಿ ಕಲಿತ ಸ್ಥಳೀಯ ಭಾಷೆಯನ್ನು

ಬೆರೆಸಿ, ಭಿನ್ನರೂಪೀ ಭಾಷೆಯನ್ನು ನಿರ್ಮಿಸಿಕೊಂಡಿರಬಹುದು. ಇಲ್ಲವೆ ಪ್ರಕೃತಿ ಕಾರಣದಿಂದಾಗಿ, ಅಂದರೆ ಒಂದು ದೊಡ್ಡನದಿ ಅಡ್ಡಬಂದರೆ, ಬೆಟ್ಟವೊಂದು ಅಡ್ಡಲಾಗಿ ಮಲಗಿದ್ದರೆ, ಅದರ ಆಚೆ–ಈಚೆ ಕಡೆಯ ಜನರಲ್ಲಿ ಸಂಪರ್ಕ ಏರ್ಪಡದೆ, ಪ್ರಾದೇಶಿಕ ಪ್ರಭಾವದಿಂದಾಗಿ, ಅವರಿಬ್ಬರೂ ಮೂಲ ನೆಲೆಯಲ್ಲಿ ಆಡುತ್ತಿದ್ದ ಮೂಲಭಾಷೆಯ ಸಂಪರ್ಕ ಕಳೆದುಕೊಂಡು, ತತ್ಪರಿಣಾಮವಾಗಿ ಭಿನ್ನಭಾಷೆಗಳಂತೆ ಬೆಳೆಯಬಹುದು. ಇಂಥವುಗಳಿಗೆ ಉಪಭಾಷೆಗಳು (Dialect) ಎಂದು ಕರೆಯುತ್ತಾರೆ. ಉದಾಹರಣೆಗೆ ಕನ್ನಡ, ತೆಲುಗು, ತಮಿಳು, ಮಲೆಯಾಳಂ, ತುಳು ಮೊದಲಾದ ಭಾಷೆಗಳು ಮೂಲತಃ ಒಂದು ತಾಯಿ ಭಾಷೆಯ ಮಕ್ಕಳಾಗಿದ್ದು ಕ್ರಮೇಣ ಘಟ್ಟ, ಪ್ರವಾಹ ಮೊದಲಾದವುಗಳಿಂದಾಗಿ ಅಥವಾ ರಾಜಕೀಯ ವಿಭಜನೆಯ ಕಾರಣದಿಂದಾಗಿ ಪ್ರತ್ಯೇಕಗೊಂಡು ಸ್ವತಂತ್ರಭಾಷೆಗಳಾದವು. ಈ ರೀತಿ ಉಪಭಾಷೆಗಳೇ ಕಾಲಾನುಕ್ರಮದಲ್ಲಿ ಸ್ವತಂತ್ರಭಾಷೆಗಳಾಗಿ ತಮ್ಮತಮ್ಮ ವೈಶಿಷ್ಟಗಳನ್ನು ಬೆಳೆಸಿಕೊಳ್ಳುವುದರಿಂದ ಸ್ಥೂಲನೋಟಕ್ಕೆ ಇವು ಒಂದು ಭಾಷೆಗೆ ಸೇರಿದವುಗಳೆಂದು ಹೇಳುವುದು ಕಷ್ಟವಾಗುತ್ತದೆ. ಆದರೆ ಇವುಗಳಿಗೆ ಮೂಲಭಾಷೆ (Proto Language) ಒಂದಿದೆ. ಅದು ಮಾತ–ಪಿತೃ  ಭಾಷೆ (Parent-Language) ಅದರ ಮಕ್ಕಳು, ಮೊಮ್ಮಕ್ಕಳು. ಮರಿಮಕ್ಕಳುಗಳ ರೂಪದಲ್ಲಿ ಹತ್ತಾರು ಉಪಭಾಷೆಗಳು ಹುಟ್ಟಿಕೊಳ್ಳುತ್ತವೆ. ಇಂತಹ ಜ್ಞಾತಿ ಭಾಷೆಗಳ ವರ್ಗವನ್ನು ಭಾಷಾವಂಶ, ಅಥವಾ ಭಾಷಾಕುಟುಂಬ ಅಥವಾ ಭಾಷಾ ಪರಿವಾರ ಎಂದು ಕರೆಯುತ್ತಾರೆ.

ಮನುಷ್ಯರಲ್ಲಿ ರಕ್ತಸಂಬಂಧೀ ಕುಟುಂಬವಿದ್ದಂತೆ ಈ ಸೋದರ ಭಾಷೆಗಳಲ್ಲೂ ಬಾಹ್ಯ ಮತ್ತು ಆಂತರಿಕ ಸಂಬಂಧಗಳಿರುತ್ತವೆ. ಪರಸ್ಪರ ಸಾಮ್ಯತೆಗಳಿರುತ್ತವೆ. ಈ ಭಾಷಾ ಪರಿವಾರ (Language Family) ವನ್ನು group of languages derive from the same parent language ಎಂದು ಸರಳವಾಗಿ ವ್ಯಾಖ್ಯಾನಿಸಿದ್ದಾರೆ ಮೆರಿಯೊ ಎ ಪೆಯ್ ಮತ್ತು ಫ್ರಾಂಕ್‌ಗೆಯಾರ್.

ಒಂದು ಮೂಲ ಭಾಷೆಯಿಂದ ಹುಟ್ಟಿ ಬೆಳೆದು ಬಂದ ಉಪಭಾಷೆಗಳು ಸಾವಿರಾರು ವರ್ಷಗಳು ಉರುಳಿದ ಮೇಲೆ ಸ್ವತಂತ್ರ ಭಾಷೆಗಳಾಗುತ್ತವಷ್ಟೆ. ಅಂತಾಗುವ ಹೊತ್ತಿಗೆ ಅವೆಲ್ಲವಕ್ಕೂ ತಮ್ಮ ತಾಯಿ ಭಾಷೆ ಮರೆತೇ ಹೋಗಿರುತ್ತದೆ. ಆದರೆ ಅವೆಲ್ಲವೂ ಆ ತಾಯಿಯ ಕೆಲವು ಕಲ್ಯಾಣ ಗುಣಗಳನ್ನು ತಮ್ಮಲ್ಲಿ ಉಳಿಸಿಕೊಂಡೇ ಇರುತ್ತವೆ. ಇದನ್ನು ಗುರುತಿಸಿ ಒಂದು ವರ್ಗವಾಗಿ ವಿಂಗಡಿಸುವುದೇ ವಾಂಶಿಕ ಭಾಷಾ ವರ್ಗೀಕರಣ.

ಒಂದೇ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳು ಬೇರೆಬೇರೆಡೆಗಳಲ್ಲಿ ಬೇರೆಬೇರೆ ರೂಪು ತಳೆದಿದ್ದರೂ ಅವುಗಳಲ್ಲಿ ಬಾಹ್ಯ ಮತ್ತು ಆಂತರಿಕ ಸಾಮ್ಯತೆ ಇದ್ದೇ ಇರುತ್ತದೆ. ಅಂದರೆ ಬಾಹ್ಯದಲ್ಲಿ ದಿನಬಳಕೆಯ ಶಬ್ದಗಳು, ಸಾಮಾನ್ಯಕ್ರಿಯೆಗೆ ಸಂಬಂಧಿಸಿದ ಪದಗಳು, ಸಂಖ್ಯೆ, ಸರ್ವನಾಮಗಳು, ಗುಣವಚನಗಳು, ಸಬಂಧ ಸೂಚಕ ಶಬ್ದಗಳು ಇತ್ಯಾದಿಗಳಲ್ಲಿ ಸಾಮ್ಯತೆ ಕಂಡು ಬಂದರೆ ಅವು ಒಂದು ಭಾಷಾಕುಟುಂಬಕ್ಕೆ ಸೇರಿದವು ಎಂದು ಹೇಳಬಹುದು.

೬) **A Dictionary of Linguistics**.

ಉದಾಹರಣೆಗೆ

| ಕನ್ನಡ | ತಮಿಳು | ಮಲೆಯಾಳಂ | ತೆಲುಗು |
|---|---|---|---|
| ಕೈ | ಕೈ | ಕೈ | ಚೈ |
| ಕಣ್ಣು | ಕಣ್ | ಕಣ್ | ಕನ್ನು |
| ಅಣ್ಣ | ಅಣ್ಣೈ | ಅಣ್ಣೆ | ಅನ್ನ |
| ತಮ್ಮ | ತಂಬಿ | ತಮ್ಮಿ | ತಮ್ಮುಡು |
| ಎರಡು | ಇರೆಂಡು | ರಂಡು | ರೆಡ್ಡು |
| ಅವರು | ಅವರ್ | ಅವರ್ | ವಾರು |

ಈ ಬಗೆಯ ವಾಂಶಿಕ ವರ್ಗೀಕರಣದ ಆಧಾರದ ಮೇಲೆ ಸುಮಾರು ಮೂವತ್ತೈದು ಭಾಷಾ ಪರಿವಾರಗಳನ್ನು ರೂಪಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳು ಹೀಗಿವೆ:

**೧. ಇಂಡೋ–ಯುರೋಪಿಯನ್ ಭಾಷಾವರ್ಗ**

ಇದು ಪ್ರಪಂಚದ ಬಹುದೊಡ್ಡ ಭಾಷಾ ಪರಿವಾರ ಇದರಲ್ಲಿ ಇಂಗ್ಲಿಷ್, ಜರ್ಮನ್, ಡಚ್, ಮೊದಲಾದ ಜರ್ಮನಿ ಭಾಷೆಗಳೂ, ಫ್ರೆಂಚ್, ಪೋರ್ಚುಗೀಸ್, ಸ್ಪಾನಿಷ್, ಇಟಾಲಿಯನ್ ಮೊದಲಾದ ರೋಮನ್ ಭಾಷೆಗಳೂ, ರೂಸಿ, ಪೋಲಿಷ್ ಮತ್ತು ಇಸ್ಲಾವಿಕ್ ಭಾಷೆಗಳೂ, ವೆಲ್ಷ್, ಐರಿಷ್ ಮೊದಲಾದ ಕೆಲ್ಟಿಕ್ ಭಾಷೆಗಳೂ ಪರ್ಷಿಯನ್, ಆಫ್ಗನ್ ಮೊದಲಾದ ಇರ್ಯಾನಿಯನ್ ಭಾಷೆಗಳೂ ಪ್ರಾಕೃತ, ಸಂಸ್ಕೃತ, ಪಾಲಿ, ಹಿಂದಿ, ಬಂಗಾಳಿ, ಮರಾಠಿ, ಅಸ್ಸಾಮಿ, ಗುಜರಾತಿ ಮೊದಲಾದ ಇಂಡೋ ಆರ್ಯನ್ ಭಾಷೆ ಮತ್ತು ಹಿಟ್ಟೈಟ್ ಭಾಷೆ ಮೊದಲಾದವು ಸೇರುತ್ತವೆ.

**೨. ಫಿನ್ನೋ–ಉಗ್ರಿಕ್ ಭಾಷಾವರ್ಗ:**

ಫಿನ್ನಿಷ್, ಹಂಗೇರಿಯನ್ ಭಾಷೆಗಳು.

**೩. ಅಲ್ಟೇಯಿಕ್ ಭಾಷಾವರ್ಗ:**

ಟರ್ಕಿಷ್, ಮಂಗೋಲಿಯನ್ ಮೊದಲಾದ ಭಾಷೆಗಳು

**೪. ಬಾಸ್, ಭಾಷಾವರ್ಗ**

ಫ್ರಾನ್ಸ್, ಸ್ಪೆಯಿನ್ ದೇಶಗಳ ಪಶ್ಚಿಮದಲ್ಲಿನ ಕೆಲವು ಜನರಾಡುವ ಭಾಷೆಗಳು.

**೫. ಆಫ್ರೋ–ಏಷಿಯಾಟಿಕ್ ಭಾಷಾವರ್ಗ:**

ಹೀಬ್ರು, ಅರೇಬಿಕ್ ಮೊದಲಾದ ಸೆಮಿಟಿಕ್ ಭಾಷೆಗಳೂ, ಈಜಿಪ್ಷಿಯನ್, ಬರ್ಬರ್ (ಉತ್ತರ ಆಫ್ರಿಕ, ಸಹರಾಗಳಲ್ಲಿ ಆಡುವ ಭಾಷೆ) ಮತ್ತು ಹೈಮೆಟಿಕ್ ಭಾಷೆಗಳು.

**೬. ನೈಜರ್ – ಕಾಂಗೊ ಭಾಷಾವರ್ಗ:**

ಆಫ್ರಿಕಾದ ಗೋಲ್ಡ್‌ಕೋಸ್ಟ್, ಐವರಿಕೋಸ್ಟ್, ನೈಜೀರಿಯಾದ ಶಾಖೆಯ ಭಾಷೆಗಳೂ, ದಕ್ಷಿಣ ಆಫ್ರಿಕಾದ ಸ್ವಹಿಲಿ, ಕೊಂಗೊ, ಲುಬ ಮೊದಲಾದ ಎಂಟು ಶಾಖೆಯ ಭಾಷೆಗಳು.

**೭. ಸೈನೊ–ಟಿಬೆಟಿಯನ್ ಭಾಷಾವರ್ಗ:**

ಟಿಬೆಟೊ – ಬರ್ಮನ್ ಭಾಷೆಗಳು, ಚೈನೀಸ್ ಮತ್ತು ಅದಕ್ಕೆ ಸಂಬಂಧಿಸಿದ ಹಲವು ಭಾಷೆಗಳು.

**೮. ದ್ರಾವಿಡ ಭಾಷಾವರ್ಗ:**

ಕನ್ನಡ, ತೆಲುಗು, ತಮಿಳು, ಮಲೆಯಾಳಂ ಎಂಬ ಗ್ರಾಂಥಿಕ ಭಾಷೆಗಳು (Cultivated languages) ಬ್ರಾಹುಈ, ಗದಬ, ಗೂಂಡಿ, ಕೋತ, ಕೊಡಗು, ಕೊಲಾಇ, ಕುರುಖ್, ಮಲ್ತೊ, ನಾಯ್ಕಿ, ಪರ್ಜಿ, ತೊದ, ತುಳು ಮೊದಲಾದ ಗ್ರಾಂಥಿಕ ಭಾಷೆಗಳು (Uncultivated languages).

**೯. ಮಲಯೋ–ಪಾಲಿನೇಷಿಯನ್ ಭಾಷಾವರ್ಗ**

ಮಲಯೊ, ಇಂಡೋನೇಷಿಯನ್, ಜಾವಾನೀಸ್, ಪಾಲಿನೇಷಿಯನ್ ಮೊದಲಾದ ಭಾಷೆಗಳು.

**೧೦. ಆಸ್ಟ್ರೇಲಿಯನ್ ಭಾಷಾವರ್ಗ:**

**೧೧. ಆಸ್ಟ್ರೋ–ಏಷಿಯಾಟಿಕ್ ಭಾಷಾ ವರ್ಗ:**

ಮಧ್ಯ ಭಾರತ ಮತ್ತು ಅಸ್ಸಾಮಿನ ಗಿರಿ ಪ್ರದೇಶಗಳಲ್ಲಿ ಆಡುವ ಸಾಂತಾಲಿ, ಖಸಿ, ನಿಕೋಬರ್ ದ್ವೀಪದ ನಿಕೋಬರಿಸ್ ಮೊದಲಾದ ಭಾಷೆಗಳು.

**೧೨. ಎಸ್ಕಿಮೊ–ಅಲೆಂಟಾ ಭಾಷಾವರ್ಗ**

ಎಸ್ಕಿಮೊಗಳ ಭಾಷೆ.

**ಲೇಖಕರ ಪರಿಚಯ:** ಡಾ. ಸಾ.ಶಿ. ಮರುಳಯ್ಯ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾಸಲು ಗ್ರಾಮದಲ್ಲಿ ೧೯೩೧ರಲ್ಲಿ ಜನಿಸಿದರು. ೧೯೫೬ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ ಪದವಿ ೧೯೭೧ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದಿಂದ **'ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ'** ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿ ಪಡೆದಿದ್ದಾರೆ. ಕಾವ್ಯ, ಪ್ರಹಸನ, ಜೀವನ ಚಿತ್ರಣ, ಕಾದಂಬರಿ, ಸಣ್ಣಕಥೆ, ನಾಟಕ. ವಿಮರ್ಶೆ, ಸಂಶೋಧನೆ, ಜಾನಪದ ಪ್ರಕಾರಗಳಲ್ಲಿ ೬೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ೧೯೯೫ರಿಂದ ೧೯೯೮ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಹಾಗೂ ಭಾಷಾ ಆಯೋಗದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

**ಪ್ರಶ್ನೆಗಳು:**

೧. ಭಾಷೆ ಎಂದರೇನು?

೨. ಭಾಷೆಯ ಬಗೆಗಿನ ಪ್ರಮುಖ ಭಾಷಾ ವಿಜ್ಞಾನಿಗಳ ವ್ಯಾಖ್ಯೆಗಳನ್ನು ವಿವರಿಸಿ.

೩. ಭಾಷೆಯ ಸ್ವರೂಪ ಮತ್ತು ಸಾಮರ್ಥ್ಯವನ್ನು ಪರಿಚಯಿಸಿ

೪. ಭಾಷಾ ವಿಜ್ಞಾನಿ ಹ್ಯಾಕೆಟ್ ಹೇಳುವ ಭಾಷೆಯ ಏಳು ವೈಶಿಷ್ಟ್ಯಗಳನ್ನು ಹೆಸರಿಸಿ, ಸಂಕ್ಷಿಪ್ತವಾಗಿ ವಿವರಿಸಿ

೫. ಪ್ರಪಂಚದ ಭಾಷೆಗಳನ್ನು ಎಷ್ಟು ವರ್ಗಗಳಾಗಿ ವಿಂಗಡಿಬಹುದು? ವಿವರಿಸಿ

## ಘಟಕ –೦೨
## ದ್ರಾವಿಡ ಭಾಷೆಗಳು

**ಆಶಯ:** ಕನ್ನಡ ಭಾಷೆ ಮೂಲದ್ರಾವಿಡದ ಮಗಳು. ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆ ತಾಯ ಮಡಿಲಿನಿಂದ ಕೆಳಗಿಳಿದು ಬಂದ ಈ ಶಿಶು ಈಗ ಪ್ರಬುದ್ಧಳಾಗಿದ್ದಾಳೆ. ಆಕೆಯ ಬೆಳವಣಿಗೆಯ ಸ್ತರಗಳನ್ನು ಅವುಗಳಲ್ಲಿನ ವೈಶಿಷ್ಟ್ಯಗಳನ್ನು ಗುರುತಿಸಿ ದಾಖಲಿಸುವ ಕಾರ್ಯ ಇಲ್ಲಿದೆ. ಭರತ ಖಂಡದಲ್ಲಿನ ಬಹು ದೊಡ್ಡ ಭಾಷಾ ಪರಿವಾರಗಳಲ್ಲಿ ದ್ರಾವಿಡ ಪದದ ನಿಷ್ಪತ್ತಿ, ಸ್ವರೂಪ, ಮೂಲ, ಅದರ ವೈಶಿಷ್ಟ್ಯಗಳನ್ನು ಪರಿಚಯಿಸಲಾಗಿದೆ.

### ೧. ದ್ರಾವಿಡರು

ಭಾರತ ಒಂದು ಮಿನಿ ಪ್ರಪಂಚ. ಇಲ್ಲಿ ವಿಭಿನ್ನ ಜಾತಿ, ಜನಾಂಗ, ಧರ್ಮ ಸಂಸ್ಕೃತಿಗಳಿರುವಂತೆ ವಿಶಿಷ್ಟ ಭಾಷಾ ಕುಟುಂಬಗಳಿವೆ. ಪ್ರಧಾನವಾಗಿ: ೧) ಇಂಡೋ–ಯುರೋಪಿಯನ್ ಪರಿವಾರದ ಇಂಡೋ–ಆರ್ಯನ್ ಗುಂಪು ೨) ಆಸ್ಟ್ರೋ–ಏಷಿಯಾಟಿಕ್, ೩) ಸೈನೋ–ಟಿಬೆಟನ್ ಪರಿವಾರದ ಟಿಬೆಟೋ–ಬರ್ಮನ್ ಗುಂಪು. ೪) ದ್ರಾವಿಡ ೫) ಅವರ್ಗೀಕೃತ ಭಾಷೆಗಳು.

ಇವುಗಳಲ್ಲಿ ದ್ರಾವಿಡ ನಮಗಿಂದು ಅಧ್ಯಯನ ಪಾತ್ರ. ಇದು ಭರತಖಂಡದಲ್ಲಿರುವ ಬಹುದೊಡ್ಡ ಭಾಷಾ ಪರಿವಾರ. ಇಂಡೋ–ಯುರೋಪಿಯ ಆರ್ಯನ್ ಭಾಷಾ ಕುಟುಂಬ ಮೊದಲನೆಯದಾದರೆ, ವ್ಯಾಪ್ತಿಯಲ್ಲಿ ದೀಪ್ತಿಯಲ್ಲಿ ದ್ರಾವಿಡ ಭಾಷಾ ಪರಿವಾರ ಎರಡನೆಯದು. ಸುಮಾರು ಇಪ್ಪತ್ತು ಕೋಟಿ ಜನರ ತಾಯಿನುಡಿ ಇದಾಗಿದೆ.

'ದ್ರಾವಿಡ' ಶಬ್ದವು ಜನಾಂಗವಾಚಿಯೆ? ಭಾಷಾ ವಾಚಿಯೆ? ಅಥವಾ ಪ್ರದೇಶ ವಾಚಿಯೆ? ಈ ಬಗ್ಗೆ ಇನ್ನೂ ನಿರ್ಧಾರ ಆಗಿಲ್ಲ. ಆದರೂ ಜನಾಂಗವಾಚಿ ಎನ್ನಲು ಹೆಚ್ಚು ಆಕ್ಷೇಪಣೆ ಇರಲಾರದು. ದ್ರಾವಿಡರಾಡುವ ಭಾಷೆ ದ್ರಾವಿಡ, ಹಾಗಾದರೆ ದ್ರಾವಿಡರು ಯಾರು? ಎಂಬ ಪ್ರಶ್ನೆ ತನ್ನ ಸೊಂಡಿಲೆತ್ತಿ ನಿಲ್ಲುತ್ತದೆ. ಇದಕ್ಕೆ ಸಮಂಜಸವಾದ ಉತ್ತರ ಸಿಕ್ಕಿಲ್ಲ. ದ್ರಾವಿಡರು ಭಾರತದ ಮೂಲನಿವಾಸಿಗಳೆ ಅಥವಾ ಬೇರೆಡೆಯಿಂದ ಭಾರತಕ್ಕೆ ವಲಸೆ ಬಂದವರೆ? ಈ ಪ್ರಶ್ನೆಗೆ ಬಹುತೇಕ ವಿದ್ವಾಂಸರ ಉತ್ತರ ವಲಸೆ ಬಂದವರು ಎಂದು. ಆದರೆ ದ್ರಾವಿಡರು ಭಾರತದ ಮೂಲನಿವಾಸಿಗಳು. ವಲಸೆ ಬಂದವರಲ್ಲ ಎಂಬ ವಾದವೂ ಇದೆ. ಸುಮಾರು ಕ್ರಿ. ಪೂ. ಐದು ಸಾವಿರ ವರ್ಷಗಳ ಹಿಂದೆಯೇ ದ್ರಾವಿಡರು ಮೆಡಿಟರೇನಿಯನ್ ತೀರದಿಂದ ಮೆಸಪಟೇಮಿಯ ಮಾರ್ಗವಾಗಿ ಅಂದರೆ ಇಂದಿನ ಇರಾನ್, ಇರಾಕ್ ಮಾರ್ಗವಾಗಿ ವಾಯುವ್ಯ ಕಣಿವೆಗಳ ಮೂಲಕ ಭಾರತಕ್ಕೆ ವಲಸೆ ಬಂದವರು ಎಂಬ ಊಹೆ ಸತ್ಯಕ್ಕೆ ಹೆಚ್ಚು ಹತ್ತಿರವಾದದ್ದು. ಹಾಗೆ ಬರುವಾಗ ತಮ್ಮ ಮಾತೃ ಸ್ಥಳದ ಅಂದರೆ ಮೆಡಿಟರೇನಿಯನ್ ದೇಶದ ಕೆಲವು ಕಲ್ಯಾಣ ಗುಣಗಳನ್ನೂ, ಮಾರ್ಗದಲ್ಲಿನ ಇರಾನ್, ಇರಾಕ್‌ಗಳ ಹಲವು ನಾಗರಿಕ ಅಂಶಗಳನ್ನೂ ಬಳುವಳಿಯಾಗಿ ಪಡೆದು ಬಂದಿರಬೇಕು. ಹಾಗೆ ಬಂದವರು ಕ್ರಿ.ಪೂ. ೧೫೦೦ ರಿಂದ ೫೦೦ ರವರೆಗಿನ ಅವಧಿಯಲ್ಲಿ ಸಿಂಧೂ ನದಿಯ ಬಯಲಿನಲ್ಲಿ ತಮ್ಮ ವೈಭವದ ಜೀವನ ಸಾಗಿಸಿದ್ದಿರಬೇಕು. ಅನಂತರ ಏಷ್ಯಾಮೈನರ್ ನಿಂದ ಬಂದ ಆರ್ಯರೊಡನೆ ದ್ರಾವಿಡರು ಸಂಪರ್ಕ ಪಡೆದರು. ಉಭಯರಲ್ಲೂ ಹೆಣ್ಣು, ಗಂಡಿನ ಕೊಳ್ಕೊಡುಗೆ ಆರಂಭವಾಗಿ ಒಂದು ವಿನೂತನ ಸಂಸ್ಕೃತಿ ರೂಪುಗೊಂಡಿತೆನ್ನಬಹುದು. ದ್ರಾವಿಡರ ಮೂಲಸಂಸ್ಕೃತಿಯ ಕುರುಹುಗಳು ಹರಪ್ಪ–ಮೊಹೆಂಜೊದಾರೊಗಳಲ್ಲಿ ದೊರೆತರೆ, ಆರ್ಯ–ದ್ರಾವಿಡ ಸಮ್ಮಿಶ್ರಣ ಸಂಸ್ಕೃತಿಯ ಅವಶೇಷಗಳು ಲಾಹೋರ್‌ನಲ್ಲಿ ದೊರೆಯುತ್ತವೆ.

ಇದು ಒಂದು ವಾದ. ಮತ್ತೊಂದು ವಾದ. ಒಂದಾನೊಂದು ಕಾಲದಲ್ಲಿ ಆಫ್ರಿಕಾ ಮತ್ತು ಇಂಡಿಯಾ ಅವಿಭಾಜ್ಯ ಭೂಭಾಗವಾಗಿದ್ದವು. ಕಾಲಾನಂತರ ಅವರೆಡರ ನಡುವೆ ಸಮುದ್ರ ಪ್ರವೇಶಿಸಿ ಆಫ್ರಿಕಾ, ಇಂಡಿಯಾ ಎಂದು ಎರಡು ಭಾಗಗಳನ್ನಾಗಿ ಮಾಡಿತು ಎಂದು ಭೂವಿಜ್ಞಾನಿಗಳು ಹೇಳುತ್ತಾರೆ. ಅದಕ್ಕೆ ಆಫ್ರಿಕಾ ಮತ್ತು ಭಾರತಗಳೆರಡರ ಮಣ್ಣು, ಸಸ್ಯವರ್ಗ,

ಆನೆ ಮೊದಲಾದ ಪ್ರಾಣಿಗಳು ಕಪ್ಪುಬಣ್ಣ, ದಪ್ಪತುಟಿ, ಗುಂಗರು ಕೂದಲಿನ ಚಹರೆಯುಳ್ಳ ಮನುಷ್ಯವರ್ಗ–ಇವೆಲ್ಲ ಸಾಮ್ಯತೆಗಳನ್ನು ಸೂಚಿಸುತ್ತಾರೆ. ಆದರೆ ದಕ್ಷಿಣ ಆಫ್ರಿಕಾದ ಮೂಲನಿವಾಸಿಗಳ ಭಾಷೆ ಮತ್ತು ಭಾರತದ ಮೂಲದ್ರಾವಿಡ (Proto Dravidian) ಭಾಷೆ–ಇವುಗಳಿಗಿರುವ ಸಾಮ್ಯತೆಯ ಬಗಗೆ ವಿಶೇಷ ಅಧ್ಯಯನ ನಡೆಯುತ್ತಿದೆ. ಅದು ಪೂರ್ಣಗೊಂಡಾಗ ದ್ರಾವಿಡ ಮತ್ತು ನೀಗ್ರೋಗಳ ಮೂಲ ಬಾಂಧವ್ಯ ಸ್ಪಷ್ಟವಾಗುತ್ತದೆ.

ಮೆಡಿಟರೇನಿಯನ್ ಭಾಗ, ಆಫ್ರಿಕಾ ಮತ್ತು ಭರತಖಂಡ – ಇವುಗಳಿಗೆ ಸಾಂಸ್ಕೃತಿಕ ಸಹಭಾಗಿತ್ವ ಇದ್ದಂತೆ ಭಾಷಾ ಬಾಂಧವ್ಯವೂ ಇದ್ದುದು ರುಜುವಾತಾದರೆ ದ್ರಾವಿಡರು ಹೊರಗಿನಿಂದ ಬಂದವರಾಗುವುದಿಲ್ಲ. ಇಲ್ಲಿಯೇ ಇದ್ದ ಸಮುದ್ರದ ಕಾರಣದಿಂದಾಗಿ ಆಫ್ರಿಕಾ ಬೇರ್ಪಟ್ಟ ಮೇಲೆ ಉಳಿದ ಭೂಭಾಗವಾದ ಭರತಖಂಡದ ಮೂಲನಿವಾಸಿಗಳಾಗಿ ಇದ್ದಿರಬಹುದು. ಆಗ ಭಾರತಕ್ಕೆ ವಲಸೆ ಬಂದವರೆಂದು ಹೇಳುವ ೧) ನೀಗ್ರೋಜನಾಂಗ, ೨) ಆಸ್ಟ್ರಿಕ್ ಜನಾಂಗ, ೩) ದ್ರಾವಿಡ ಜನಾಂಗ, ೪) ಆರ್ಯಜನಾಂಗ, ೫) ಮಂಗೋಲಿಯನ್ ಜನಾಂಗ – ಈ ಪೈಕಿ ನೀಗ್ರೋ ಮತ್ತು ದ್ರಾವಿಡರು ಬೇರೆಯಾಗುತ್ತಾರೆ. ಅವರೇ ಇಂಡಿಯಾ ಮತ್ತು ಆಫ್ರಿಕಾಗಳು ಕೂಡಿದ್ದ ವಿಶಾಲ ಭೂಭಾಗದ ಆದಿವಾಸಿಗಳಾಗುತ್ತಾರೆ. ಆಸ್ಟ್ರಿಕ್, ಆರ್ಯ ಮತ್ತು ಮಂಗೋಲಿಯನ್ನರು ಭಾರತಕ್ಕೆ ಹೊರಗಿನಿಂದ ವಲಸೆ ಬಂದವರಾಗುತ್ತಾರೆ. ಅನಾದಿ ಕಾಲದಿಂದಲೂ ಅಸೇತು ಹಿಮಾಚಲದವರೆಗೆ ವ್ಯಾಪಕವಾಗಿ ಬದುಕು ಮಾಡಿದ ಜನ ನೀಗ್ರೋ ಮಾದರಿಯ ದ್ರಾವಿಡರು. ಹರಪ್ಪ ಮೊಹಂಜದಾರೊಳಗಲ್ಲಿನ ಸೈಂಧವ ಸಂಸ್ಕೃತಿ ಇವರದು.

ಅಸ್ಸಾಂ ಮಾರ್ಗವಾಗಿ ಭಾರತಕ್ಕೆ ವಲಸೆ ಬಂದವರು ಆಸ್ಟ್ರಿಕ್ ಜನರು. ಮುಂಡಾ ಅಥವಾ ಕೋಲ್ ಗುಂಪಿನ ಜನರಾದ ಇವರು ಮುಂಡಾ ಅಥವಾ ಕೋಲ್ ವರ್ಗದ ಭಾಷೆಗಳನ್ನಾಡುತ್ತಾರೆ. ವೇದಗಳಲ್ಲಿ ಇವರನ್ನು 'ನಿಷಾದ'ರೆಂದು ಕರೆಯಲಾಗಿದೆ. ಮಧ್ಯ ಹಾಗೂ ಪೂರ್ವ ಭಾರತದ ಗುಡ್ಡಗಾಡುಗಳಲ್ಲಿರುವ ಇವರು ಸಂತಾಲಿ, ಮುಂಡಾರಿ, ಹೊ, ಖಿರ್ ಹಲ್, ಶಬರ, ನಿಕೋಬಾರಿ, ಭೂಮಿಜ್ ಖಾಸಿ, ಕೊರ್ಗು ಮೊದಲಾದ ಭಾಷೆಗಳನ್ನಾಡುತ್ತಾರೆ. ಇವರಾದ ಮೇಲೆ, ಸುಮಾರು ಕ್ರಿ.ಪೂ. ೨೦೦೦ ವರ್ಷಗಳ ಹಿಂದೆ ಆರ್ಯರು ಏಷ್ಯಾ **ಟಿಪ್ಪಣಿ: ಡಾ॥ ಯು.ಪಿ ಉಪಾಧ್ಯಾಯರ Dravidian and Negro-African, International Journal of Dravidian Linguistics. Vol V. no. 1. January 1976 p. p. 62-64.**

ಮೈನರ್‌ನಿಂದ ವಾಯುವ್ಯ ಕಣಿವೆಗಳ ಮಾರ್ಗವಾಗಿ ಬಂದು ಸಿಂಧೂ ನದಿಯ ಬಯಲಿನಲ್ಲಿದ್ದ ದ್ರಾವಿಡರನ್ನು ಓಡಿಸಿ ಕಡೆಗೆ, ಅವರೊಡನೆ ರಕ್ತಸಂಬಂಧ ಬೆಳೆಸಿ ಭಾರತದಲ್ಲಿ ಉಳಿದರು. ಮುಂದೆ ಕ್ರಿ.ಪೂ. ಅಥವಾ ಕ್ರಿ.ಶಕ ದ ಆದಿಯಲ್ಲಿ ಬಂದವರು. ಮಂಗೋಲಿಯನ್ ಬುಡಕಟ್ಟಿನವರು. ಇವರು ಭಾರತದ ಈಶಾನ್ಯ ದಿಕ್ಕಿನಿಂದ ಇಳಿದು ಅಲ್ಲಿನ ಗುಡ್ಡಗಾಡುಗಳಲ್ಲಿ ನೆಲೆನಿಂತರು. ಬಂಗಾಳ, ನೇಪಾಳ, ಅಸ್ಸಾಂ ಬಿಹಾರ್ ಪ್ರದೇಶಗಳಲ್ಲಿ ವಾಸಿಸುತ್ತಿರುವವರು ಇವರೆ. ಇಷ್ಟಾದರೂ ಆರ್ಯ ಮತ್ತು ದ್ರಾವಿಡ ಎರಡೇ ಭಾರತದ ಬಹುವ್ಯಾಪಕ ಜನಾಂಗಗಳು. ಸಂಸ್ಕೃತ ಮತ್ತು ಸಂಸ್ಕೃತ ಜನ್ಯ ಭಾಷೆಗಳು, ದ್ರಾವಿಡ ಮತ್ತು ದ್ರಾವಿಡ ಜನ್ಯ ಭಾಷೆಗಳು ಅವರಾಡುವ ಬಹುದೊಡ್ಡ ಭಾಷಾ ಪರಿವಾರಗಳು.

'ದ್ರಾವಿಡ' ಎಂಬುದು ಆರ್ಯರು ಕೊಟ್ಟ ಹೆಸರು. ಜನ ದ್ರಾವಿಡರಾದರೂ 'ದ್ರಾವಿಡ' ಎಂಬ ಪದ ದ್ರಾವಿಡ ಅಲ್ಲ. ಅದು ಸಂಸ್ಕೃತ ಶಬ್ದ. ಹಾಗಾದರೆ ಇದರ ಮೂಲರೂಪ ಯಾವುದಿದ್ದರಬಹುದು ಎಂಬ ಬಗ್ಗೆ ಊಹೆಗಳು ಉರುಳಿವೆ. ತಮಿಳಿನ ತಿರಮಿಡ–ತಿರವಿಡ–ದ್ರವಿಡ–ದ್ರವಿಡ–ದ್ರಾವಿಡ ಆಗಿರಬಹುದು ಎನ್ನುತ್ತಾರೆ ಭಾಷಾ ವಿಜ್ಞಾನಿಗಳು. ಅಂತೆಯೇ ಗ್ರೀಕರು ದಮಿಝ್, ತಮಿಝ್, ಎನ್ನುತ್ತಾರೆ. ಇಂದಿನ ತಮಿಳ್. ಈ ತಮಿಳ್ ಸಂಕುಚಿತಾರ್ಥದಲ್ಲಿ 'ತಮಿಳು' ಎಂತಲೂ ವಿಶಾಲಾರ್ಥದಲ್ಲಿ ಇಡೀ ದ್ರಾವಿಡ ಭಾಷಾವರ್ಗವನ್ನೊಳಗೊಂಡುದೆಂತಲೂ ಹೇಳುತ್ತಾರೆ. ಬ್ರಿಟಿಷರು ಭಾರತಕ್ಕೆ ಬಂದು ನೆಲೆಸಿ ಭಾಷಾಭ್ಯಾಸ ಮಾಡಿದ ಮೇಲೆ 'ದ್ರಾವಿಡ' ಭರತಖಂಡದ 'ಮೂಲದ್ರಾವಿಡ' ಭಾಷೆಯೆಂಬ ವಿಶಾಲಾರ್ಥದಲ್ಲಿ ಉಳಿಯಿತು.

ದ್ರಾವಿಡ ಜನಾಂಗ ಸಿಂಧೂ ನದಿಯ ಬಯಲಿನಲ್ಲಿದ್ದಾಗ ಆಡುತ್ತಿದ್ದ ಭಾಷೆಯನ್ನು ಮೂಲ ದ್ರಾವಿಡ (Proto-Dravidian) ಎಂದು ಕರೆದರು. ಜನಸಂಖ್ಯೆ ಹೆಚ್ಚಿ ಉತ್ತರದಿಂದ ದಕ್ಷಿಣ ಭಾರತದ ಕಡೆಗೆ ಬಂದಾಗ ಹಲವು ಉಪ ಭಾಷೆಗಳಾಗಿ (Dialect) ಒಡೆಯಿತು. ಆ ಉಪ ಭಾಷೆಗಳೇ ಕಾಲಕ್ರಮೇಣ ಸ್ವತಂತ್ರ ಭಾಷೆಗಳಾಗಿ ಇಂದು ಅಧ್ಯಯನ ಯೋಗ್ಯವಾದವುಗಳಾಗಿವೆ. ಈ ದ್ರಾವಿಡಭಾಷೆಗಳು ಸುಮಾರು ಎಪ್ಪತ್ತೈದು ಇವೆ ಎಂದು ಅಂದಾಜು ಮಾಡಲಾಗಿದೆ. ಅವುಗಳಲ್ಲಿ

ಇಪ್ಪತ್ತೈದು ಪ್ರಮುಖ ಭಾಷೆಗಳು (Major Language) ಐವತ್ತು ಕ್ಷುಲ್ಲಕ ಭಾಷೆಗಳು (Minor Languages) ಸಧ್ಯಕ್ಕೆ ಎಪ್ಪತ್ತಮೂರು ದ್ರಾವಿಡ ಭಾಷೆಗಳ ಹೆಸರುಗಳನ್ನು ಕೊಡಲಾಗಿದೆ. ಆದರೂ ಇನ್ನೂ ಸಂಶೋಧನೆಗೆ ಸಿಗಬಹುದಾದ ಸಾಧ್ಯತೆಗಳೂ ಇವೆ. ಇವುಗಳಲ್ಲಿ ಬ್ರಾಹುಈ ಒಂದು ಮಾತ್ರ ಪಾಕೀಸ್ತಾನದಲ್ಲಿದೆ. ಉಳಿದೆಲ್ಲವೂ ಭಾರತೀಯ ಭಾಷೆಗಳು.

## ೨. ದ್ರಾವಿಡ ಭಾಷೆಗಳು.

೧. ಕನ್ನಡ, ೨. ತೆಲುಗು, ೩. ತಮಿಳು, ೪. ಮಲೆಯಾಳಂ, ೫. ತುಳು, ೬. ಕೊಡವ, ೭. ತೊದ, ೮. ಕೋತ, ೯. ಇರುಳ, ೧೦. ಕೊರಗ, ೧೧. ಗೋಂಡಿ, ೧೨. ಕೊಂಡ, ೧೩. ಕುಇ, ೧೪. ಕುವಿ, ೧೫. ಕುಬಿ, ೧೬. ಪೆಂಗೂ, ೧೭. ಮಂಡ, ೧೮. ಗೋಂದಿ ೧೯. ಕೋಲಾಮಿ, ೨೦. ನಾಯ್ಕಿ, ೨೧. ಪರ್ಜಿ, ೨೨. ಗದಬ, ೨೩. ಕುರುಖ್, ೨೪. ಮಾಲ್ಟೊ, ೨೫. ಬ್ರಾಹುಈ.

**ಆ. ಕ್ಷುಲ್ಲಕ ಉಪಭಾಷೆಗಳು –೫೦**

೧. ಕಸಬ, ೨. ಜೇನುಕುಱುಂಬ, ೩. ಕಾಡ, ೪. ಬೆಳಾರಿ, ೫. ಜುರಯ್, ೬. ಮುಡುಗ, ೭. ಕೈಕಾಡಿ. ೮. ಬುರಗಂಡಿ, ೯. ಸಂಕೇತಿ, ೧೦. ಯರಕುಲ, ೧೧. ಯರವ, ೧೨. ಕುಬುಂಬ, ೧೩. ಕೊರವ, ೧೪. ಸೋಲಿಗ, ೧೫. ಹವ್ಯಕ ೧೬. ಬಡಗ, ೧೭. ದೀವರ, ೧೮. ಆಲುಕುಱುಂಬ, ೧೯. ಮುಳ್ಳುಕುಱುಂಬ, ೨೦. ಪಣಿಯ, ೨೧. ಪಾಲುಕ್ಕುಱುಂಬ, ೨೨. ಬೆಟ್ಟಕುಱುಂಬ (ಊರಲಿಕುಱುಂಬ), ೨೩. ಚೋಳನಾಯ್ಕ, ೨೪. ಕಾಟನಾಯ್ಕ (ತೇನ್ ಕುಱುಂಬ), ೨೫. ಪದಿನಾಯ್ಕ, ೨೬. ಕವರ, ೨೭. ಅದಿಯ, ೨೮. ಮಲಮುತ್ತ, ೨೯. ಧಂಗರ್ ಕುರುಖ್, ೩೦. ಚಂದದಾಯ್ಕ, ೩೧. ಬಲ್ಲಾರಿ, ೩೨. ಕೊನೆಕೊರ್ ಗದಬ, ೩೩. ದೊರ್ಪಾ, ೩೪. ಮಡಿಯ, ೩೫. ಮರಿಯ, ೩೬. ಸಲೂರ (ಪೊಉ), ೩೭. ಪೊತ್ತಂಗಿ, ೩೮. ಪರಂಗಿ, ೩೯. ಗೊಮ್ಮು, ೪೦. ಸವುರ, ೪೧. ಕೊಯ, ೪೨. ರಾಜಗೊಂಡಿ, ೪೩. ಮಲೆನಾಡು ಇರುಳ, ೪೪. ಬೆಟ್ಟಕಾಡು ಇರುಳ ೪೫. ಕೊಮ್ಮಾವು, ೪೬. ದಾಸರಿ, ೪೭. ಬೇರಡಿ. ೪೮. ವಡರಿ ಇತ್ಯಾದಿ.

ಇವುಗಳಲ್ಲಿ ಕನ್ನಡ, ತೆಲುಗು, ತಮಿಳು ಮತ್ತು ಮಲೆಯಾಳಂ ಈ ನಾಲ್ಕೇ ಗ್ರಂಥಸ್ಥ ಭಾಷೆಗಳು. ಉಳಿದೆಲ್ಲವೂ ನಿಗ್ರಾಂಥಿಕ ಭಾಷೆಗಳು. ಆದರೆ ನಿತ್ಯ ಚಲಾವಣೆಯಲ್ಲಿರುವ ಜೀವಂತ ಭಾಷೆಗಳು.

ಅಸೇತು ಹಿಮಾಚಲದ ಪರಿಯಂತ ಜೀವಂತವಿರುವ ಈ ಭಾಷೆಗಳನ್ನು ಅಧ್ಯಯನದ ಅನುಕೂಲಕ್ಕಾಗಿ ೧) ಉತ್ತರ ದ್ರಾವಿಡ, ೨) ಮಧ್ಯ ದ್ರಾವಿಡ ಮತ್ತು ೩) ದಕ್ಷಿಣ ದ್ರಾವಿಡ ಎಂದು ಮೂರು ಗುಂಪುಗಳಾಗಿ ವಿಭಜಿಸಿದ್ದಾರೆ.

೧) ಬ್ರಾಹುಈ ಮಾಲ್ಟೊ ಮತ್ತು ಕುರುಖ್–ಇವು ಉತ್ತರ ದ್ರಾವಿಡ ಗುಂಪಿಗೆ ಸೇರಿದ ಭಾಷೆಗಳು. ಬಲೂಚಿಸ್ತಾನದ ಸರವಾನ್ ಮತ್ತು ಝುಲವಾರ್ ಪ್ರದೇಶಗಳಲ್ಲಿ ಮತ್ತು ಸಿಂಧ್ ಪ್ರದೇಶದ ಕೆಲವು ಭಾಗಗಳಲ್ಲಿ ಬ್ರಾಹುಈ ಅನ್ನು ಆಡುವ ಜನರಿದ್ದಾರೆ. ಭಾರತ ಇಬ್ಭಾಗವಾದ ಮೇಲೆ ಇವರ ನೆಲೆಗಳು ಪಾಕೀಸ್ತಾನಕ್ಕೆ ಸೇರಿಹೋದವು. ಇಂದು ಪಾಕೀಸ್ತಾನದ ಕಲತ್, ಹರಿಪುರ, ಹೈದರಾಬಾದ್ ಜಿಲ್ಲೆಗಳಲ್ಲಿ, ದಕ್ಷಿಣ ಆಫ್ಘಾನಿಸ್ತಾನದ ಪ್ರದೇಶದಲ್ಲಿ ಜೀವಂತ ಇದೆ. ಇದನ್ನಾಡುವ ಜನರ ಸಂಖ್ಯೆ ಎರಡೂವರೆ ಲಕ್ಷ. ಈ ಬ್ರಾಹುಈ ಭಾಷೆಯನ್ನು ಕುರಿತಂತೆ ಡೆನಿಸ್ ಬ್ರೇವ್ ಎಂಬುವನು ೧೯೦೯ ರಲ್ಲಿ ಅಧ್ಯಯನ ನಡೆಸಿ, ಅದಕ್ಕೆ ಸಂಬಂಧಿಸಿದ ಒಂದು ವ್ಯಾಕರಣ ಗ್ರಂಥವನ್ನು ಬರೆದಿದ್ದಾರೆ. ಕುರುಖ್ ಭಾಷೆಯನ್ನು ಬಿಹಾರದ ಭಾಗಲ್ಪುರ ಛೋಟಾ ನಾಗಪುರ, ಒರಿಸ್ಸಾದ ಸುಂಧರಗಡ್, ಮಧ್ಯಪ್ರದೇಶದ ರಾಯಗಡ್ ಜಿಲ್ಲೆಗಳಲ್ಲಿ ಮಾತನಾಡುತ್ತಾರೆ. ೧೯೦೯ ರಲ್ಲಿ ಎಫ್.ಹನ್ ಎಂಬಾತನೂ ೧೯೨೪ರಲ್ಲಿ ಎ ಗ್ರಿಗ್ ನಾರ್ಡ್ ಎಂಬಾತನೂ ಈ ಭಾಷೆಯನ್ನು ಕುರಿತ ವ್ಯಾಕರಣ ಗ್ರಂಥಗಳನ್ನು ರಚಿಸಿದ್ದಾರೆ. ಮಾಲ್ಟೊ ಆಡುವವರು ಮಲೆಯರ್ ಎಂಬ ಜನಾಂಗ. ಈ ಭಾಷೆಯನ್ನು ರಾಜಮಹಾಲಿ ಎಂದೂ ಕರೆಯುತ್ತಾರೆ. ಇದು ಬಿಹಾರದ ಸಂತಾಲ್ ಮತ್ತು ರಾಜಮಹಾಲಿ ಪರ್ವತ ಪ್ರದೇಶಗಳಲ್ಲಿ ಜೀವಂತವಿದೆ. ಅರ್ನೆಸ್ಟ್‌ದ್ರೋಸಿ ಎಂಬುವನು ಇದನ್ನು ಕುರಿತು ಒಂದು ವ್ಯಾಕರಣ ಗ್ರಂಥ ಬರೆದಿದ್ದಾನೆ.

೨) ಉತ್ತರ ದ್ರಾವಿಡ ಅತಿ ಚಿಕ್ಕ ದ್ರಾವಿಡ ಭಾಷಾ ಗುಂಪಾದರೆ, ಮಧ್ಯದ್ರಾವಿಡ ಅತಿ ದೊಡ್ಡ ಗುಂಪು. ಇದರಲ್ಲಿ ತೆಲುಗು, ಕೋಲಾಮಿ, ನಾಯಕಿ, ಪೆಂಗೊ, ಮಂಡ, ಒಲ್ಲಾರಿ, ಗದಬ, ಪರ್ಜಿ, ಗೋಂದಿ, ಕೋಯ, ಕೊಂಡ, ಕುವಿ, ಕುಇ, ಎಂಬ ಹದಿಮೂರು ಪ್ರಮುಖ ಭಾಷೆಗಳೂ ಅವುಗಳ ಉಪಭಾಷೆಗಳೂ ಸೇರುತ್ತವೆ. ತೆಲುಗನ್ನುಳಿದು ಮಿಕ್ಕವಕ್ಕೆ ಲಿಪಿ ಇಲ್ಲ.

ಸಾಹಿತ್ಯ ಸಂಪದ ಗ್ರಾಂಥಿಕವಾಗಿ ಅವಕ್ಕಿಲ್ಲ. ಈ ಭಾಷಾ ವರ್ಗವು ಈಗಿನ ಆಂಧ್ರದ ಅದಿಲಾಬಾದ್, ಓರಂಗಲ್, ವಿಶಾಖಪಟ್ಟಣ, ಶ್ರೀಕಾಕುಲಂ, ಕರೀಂನಗರ ಮೊದಲಾದ ಜಿಲ್ಲೆಗಳಲ್ಲಿ ಮಹಾರಾಷ್ಟ್ರದ ಚಂದವಾಡ, ರಾಯಘಡ, ವಾರ್ಧಾ, ಮಧ್ಯಪ್ರದೇಶದ ಎಟಮಾಲ್, ಬಸ್ತರ್, ಉತ್ತರಪ್ರದೇಶದ ಜಗಿದಾಲ್‌ಪುರ ಮೊದಲಾದ ಜಿಲ್ಲೆಗಳಲ್ಲಿ ಒರಿಸ್ಸಾದ ಸುಂದರ್ ಘಡ್, ಗಂಜಾಂ, ಕಲಹಂದಿ. ಕೋರಾಪುಟ್ ಜಿಲ್ಲೆಗಳಲ್ಲಿ ಪ್ರಚಲಿತವಿದೆ. ಭ. ಕೃಷ್ಣಮೂರ್ತಿ, ಎಮಿನೊಬರೋ ಮೊದಲಾದ ವಿದ್ವಾಂಸರು ಇವುಗಳ ಅಧ್ಯಯನ ಮಾಡಿದ್ದಾರೆ.

೩) ದಕ್ಷಿಣ ದ್ರಾವಿಡ ಗುಂಪಿಗೆ ಕನ್ನಡ, ತಮಿಳು, ಮಲೆಯಾಳಂ, ತುಳು, ಕೊಡಗು, ತೊದ, ಕೋತ, ಇರುಳ, ಕೊರಗ ಮುಂತಾದ ಒಂಬತ್ತು ಪ್ರಮುಖ ಭಾಷೆಗಳೂ ಅವುಗಳಿಗೆ ಸಂಬಂಧಿಸಿದ ಉಪಭಾಷೆಗಳೂ ಸೇರುತ್ತವೆ. ಕನ್ನಡ, ತಮಿಳು, ಮಲೆಯಾಳಂಗಳನ್ನು ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳ ಆದಿವಾಸಿಗಳಾಡುತ್ತಾರೆ. ತುಳು ದಕ್ಷಣ ಕನ್ನಡ ಜಿಲ್ಲೆಯದು. ಕೊಡಗು ಕೊಡಗಿನ ಕೊಡವರದು. ಕನ್ನಡ, ತಮಿಳು, ಮಲೆಯಾಳಂಗಳಲ್ಲಿ ಪ್ರಾಚೀನ ಕಾಲದಿಂದಲೂ ರಚಿತವಾದ ಅನೇಕ ವ್ಯಾಕರಣ ಗ್ರಂಥಗಳಿಗೆ ಬ್ರಿಗೇಲ್, ಎಮಿನೊ, ಶಂಕರಭಟ್ಟ ಮೊದಲಾದ ಆಧುನಿಕ ಭಾಷಾ ವಿಜ್ಞಾನಿಗಳು ವ್ಯಾಕರಣ ಗ್ರಂಥಗಳನ್ನು ಬರೆದಿದ್ದಾರೆ.

## ದ್ರಾವಿಡ ಭಾಷಾ ವೈಶಿಷ್ಟ್ಯಗಳು:

**(ವಿಶೇಷವಾಗಿ ಕನ್ನಡಕ್ಕೆ ಸಂಬಂಧಿಸಿದಂತೆ)**

ಭರತಖಂಡದ ಬಹುದೊಡ್ಡ ಭಾಷಾ ಪರಿವಾರವೆನಿಸಿದ ದ್ರಾವಿಡ ತನ್ನದೇ ಆದ ಹಲವು ವೈಲಕ್ಷಣ್ಯಗಳನ್ನು ಪಡೆದಿದೆ. ವಿವೇಚನೆ ತನ್ನಲ್ಲಿಯೇ ಅಂದರೆ ತನ್ನ ಸೋದರ ಭಾಷೆಗಳೊಡನೆ ನಡೆದಾಗ ಅವು ಸಾಮಾನ್ಯ ಲಕ್ಷಣಗಳೆನಿಸಿದರೆ ಇಂಡೋ–ಯೋರೋಪಿಯನ್ ಮೊದಲಾದ ಅನ್ಯಭಾಷಾ ಪರಿವಾರಗಳೊಡನೆ ಹೋಲಿಸಿ ನೋಡಿದಾಗ ಅವು ಅಸಾಮಾನ್ಯ ಹಾಗೂ ವಿಶಿಷ್ಟಗುಣಗಳಾಗಿ ಗೋಚರಿಸುತ್ತವೆ. ಈ ವಿಶ್ಲೇಷಣೆಯ ಸಂದರ್ಭದಲ್ಲಿ ಧ್ವನಿಮಾ (Phoneme) ಅಕೃತಿಮಾ (Morpheme) ಮತ್ತು ವಾಕ್ಯ ವಿನ್ಯಾಸ ಅಥವಾ ಶಿಲ್ಪ (Composition and structure) ಇವುಗಳನ್ನು ಆಧರಿಸುವುದು ಸಾಧಾರಣಾ.

ಧ್ವನಿಮಾ ಅಂದರೆ ನಾವು ಉಚ್ಚರಿಸುವ ಧ್ವನಿಯ ಶಬ್ದರೂಪ. ಉದಾಹರಣೆಗೆ: ಕನ್ನಡಿಗರು. ಅ, ಬ, ಕ, ಟ, ಡ, ವ, ಯ, ಳ ಇತ್ಯಾದಿಗಳನ್ನು ಧ್ವನಿಗೈದಂತೆ, ಇಂಗ್ಲಿಷರು ಎಫ್, ಜಡ್ ಇತ್ಯಾದಿಗಳನ್ನೂ, ಅರೇಬಿಯನ್ನರು ಪರ್ಷಿಯನ್ನರು ಮೊದಲಾದವರು ಜೀಮ್, ಹೈ ಇತ್ಯಾದಿಗಳನ್ನೂ ಶಬ್ದಿಸುತ್ತಾರೆ. ಭಾಷಾ ರಚನೆಯ ಸಂದರ್ಭದಲ್ಲಿ ಈ ದ್ವನಿಗಳು ಸಕ್ರಿಯ ಪಾತ್ರವಹಿಸುವುದರಿಂದ ತಾವು ನಿರ್ದಿಷ್ಟ ಬೆಲೆಪಡೆದುಕೊಳ್ಳುತ್ತವೆ. ಇಂತಹ ಬಾಯಿಂದ ಬರುವ ಕೇವಲ ಶಬ್ದಸ್ವರೂಪಗಳನ್ನು 'ಧ್ವನಿಮಾ' ಎಂದು ಕರೆಯುತ್ತಾರೆ.

ಧ್ವನಿಯಿಂದಾದ ಧ್ವನಿಮಾಗಳು ಎರಡು ಅಥವಾ ಹೆಚ್ಚು ಸೇರಿ ಒಂದು ಆಕೃತಿಮಾ ಆಗುತ್ತದೆ. ಉದಾಹರಣೆಗೆ: 'ಮ' ಒಂದು ಧ್ವನಿಮಾ 'ರ' ಇನ್ನೊಂದು ಧ್ವನಿಮಾ ಎರಡೂ ಕೂಡಿದಾಗ 'ಮರ ಎಂಬ ಅಕೃತಿಮಾ ಆಗುತ್ತದೆ.

ಹೀಗೆ ಕ್ರಮಬದ್ಧವಾಗಿ ಕೂಡಿ, ಅರ್ಥ ಕೊಡುವ ಧ್ವನಿಮಾಗಳ ಮೊತ್ತವೆ ಅಕೃತಿಮಾ. ಅದು ಅರ್ಥಯುಕ್ತ ಕನಿಷ್ಟತಮ ಘಟಕವೂ ಹೌದು (A Morpheme is the smallest meaningful unit).

ಆಕೃತಿಮಾಗಳಲ್ಲಿ ಮುಕ್ತ (free) ಮತ್ತು ಬದ್ಧ (Bound) ಎಂದು ಎರಡು ಬಗೆಯುಂಟು. 'ಮರ' ಮುಕ್ತ ಆಕೃತಿಮಾ. ಅನ್ನು, ಇಂದ, ಕ, ಇತ್ಯಾದಿ ವಿಭಕ್ತಿ ಪ್ರತ್ಯಯಗಳು ಬದ್ಧ ಆಕೃತಿಮಾಗಳು. ಬದ್ಧ ಆಕೃತಿಮಾಗಳಿಗೆ ಸ್ವತಂತ್ರ ಅಸ್ತಿತ್ವ ಇಲ್ಲ. ಅವು ಮುಕ್ತ ಆಕೃತಿಮಾಗಳೊಡನೆ ಸೇರಿ ವ್ಯವಹರಿಸುತ್ತವೆ. ಮರ+ ಅನ್ನು= ಮರವನ್ನು ಮೊದಲಾದ ರೂಪ ಪರಿವರ್ತಿತ ಶಬ್ದಗಳು ಸಿದ್ದವಾಗುತ್ತವೆ. ಇಂತಹ ಮುಕ್ತ ಮತ್ತು ಬದ್ಧ ಆಕೃತಿಮಾಗಳು ಕೇಶಿರಾಜ ಹೇಳುವಂತೆ ನಾಮರೂಢಿ ಅಳಿಯದೆ ಇದ್ದಲ್ಲಿ ಅಂದರೆ ಭಾಷಾ ಮರ್ಯಾದೆಗನುಗುಣವಾಗಿ ಬಳಕೆಗೊಂಡಾಗ, ಅವು ಅರ್ಥಕೊಡುವ ವಾಕ್ಯಗಳಾಗುತ್ತವೆ.

ಈ ಬಗೆಯ ಧ್ವನಿಮಾ, ಆಕೃತಿಮಾ ಮತ್ತು ವಾಕ್ಯವಿನ್ಯಾಸಗಳ ಆಧಾರದ ಮೇಲೆ ದ್ರಾವಿಡಾ ಭಾಷಾಪರಿವಾರದ ವೈಶಿಷ್ಟ್ಯಗಳನ್ನು ಗುರುತಿಸಬಹುದು.

## ೩. ಕನ್ನಡ ಭಾಷಾವೈಶಿಷ್ಟ್ಯಗಳು

ಸುಮಾರು ಎರಡೂವರೆ ಸಾವಿರ ವರ್ಷಗಳಷ್ಟು ಪ್ರಾಚೀನತೆಯನ್ನು ಪಡೆದಿರುವ ಕನ್ನಡ ಸ್ವತಂತ್ರ ಶಾಖೆಯಾಗಿ ಅಭಿವೃದ್ಧಿ ಹೊಂದುವ ವೇಳೆಯಲ್ಲಿ ಮೂಲ ದ್ರಾವಿಡದಿಂದ ಬೇರೆಯಾದಂತೆ, ಸೋದರ ಭಾಷೆಗಳಿಂದಲೂ ಭಿನ್ನತೆ ಪಡೆಯಿತು. ಹಲವು ಅಂಶಗಳಲ್ಲಿ ತನ್ನ ವೈಶಿಷ್ಟ್ಯವನ್ನು ಮೆರೆಯಿತು. ಇಂಡೋ–ಯೂರೋಪಿಯನ್ ಮೊದಲಾದ ದ್ರಾವಿಡೇತರ ಭಾಷಾ ಪರಿವಾರಗಳೊಡನೆ ಹೋಲಿಸಿದಾಗ ಗೋಚರಿಸಿದ ದ್ರಾವಿಡ ಭಾಷಾ ವೈಶಿಷ್ಟ್ಯಗಳು ಕನ್ನಡದ ವೈಶಿಷ್ಟ್ಯಗಳೂ ಹೌದು. ತಮಿಳು, ತೆಲುಗು ಮೊದಲಾದ ಸೋದರ ಭಾಷೆಗಳೊಂದಿಗಿನ ಸಾಮ್ಯ ಲಕ್ಷಣಗಳೂ ಹೌದು. ಆದರೆ ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳ ನಡುವಣ ಸಾಮ್ಯಗಳು ಹಲವು ವೈಷಮ್ಯಗಳು ಕೆಲವು. ಅವುಗಳೆಲ್ಲವನ್ನು ಅವಲೋಕಿಸೋಣ.

ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳಲ್ಲಿ ಸ್ವರಗಳು ಸಮಾನ. ಆದರೆ ಮೂಲ ದ್ರಾವಿಡದ ಇ ಕಾರ ಉ ಕಾರಗಳು ಕ್ರಮವಾಗಿ ಎ ಕಾರ ಒ ಕಾರಗಳಾಗಿ ಪರಿವರ್ತನೆಗೊಂಡಿರುವುದು ಕೆಲವು ದ್ರಾವಿಡ ಭಾಷೆಗಳಲ್ಲಿ ಕಂಡು ಬರುತ್ತದೆ. ಮುಖ್ಯವಾಗಿ ಕನ್ನಡ ತೆಲುಗು ಭಾಷೆಗಳು ಇ>ಎ ಮತ್ತು ಉ>ಒ – ಈ ಪರಿವರ್ತಿತ ರೂಪಗಳನ್ನು ಇಂದಿಗೂ ಉಳಿಸಿಕೊಂಡಿವೆ. ಆದರೆ ತಮಿಳು, ಮಲೆಯಾಳಂ ಭಾಷೆಗಳು ಮೂಲ ದ್ರಾವಿಡದ ಮೂಲರೂಪವನ್ನೇ ಪಡೆದುಕೊಂಡಿವೆ.

ಉದಾಹರಣೆಗೆ

| ಮೂಲದ್ರಾವಿಡ | ತಮಿಳು | ಮಲೆಯಾಳಂ | ತೆಲುಗು | ಕನ್ನಡ |
|---|---|---|---|---|
| ತಿರೈ | ತಿರೈ | ತಿರ | ತೆರೆ | ತೆರೆ |
| ಪುಗೈ | ಪುಗೈ | ಪುಗ | ಪೊಗೆ | ಪೊಗೆ |

ತಮಿಳಿನಲ್ಲಿ ಕ ಚ ಟ ತ ಪ ಎಂಬ ಅಘೋಷ ಧ್ವನಿಮಾಗಳು ಮಾತ್ರ ಇವೆ. ಗ ಜ, ಡ , ದ ಬ ಎಂಬ ಘೋಷ ಧ್ವನಿಮಾಗಳಿಲ್ಲ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಎರಡೂ ಇವೆ. ಅವುಗಳ ಅರ್ಥವ್ಯತ್ಯಾಸವೂ ಉಂಟು.

ಉದಾಹರಣೆ: ಕಲ್ಲು–ಗಲ್ಲು, ಕೊಂಬೆ–ಗೊಂಬೆ

ಘೋಷ ವರ್ಣಗಳಿಂದ ಆರಂಭವಾಗುವ ಆಕೃತಿಮಾಗಳು ತೆಲುಗಿನಲ್ಲಿದ್ದಂತೆ ಕನ್ನಡದಲ್ಲೂ ಇವೆ. ಆದರೆ ದ್ರಾವಿಡದ ಅನೇಕ ಭಾಷೆಗಳಲ್ಲಿ ಇಲ್ಲ. ಘೋಷ ವರ್ಣಗಳೇ ಇಲ್ಲದಿರುವುದರಿಂದ ತಮಿಳಿನಲ್ಲಿ ಆರಂಭದಲ್ಲಿ ಎಲ್ಲೂ ಬರಲು ಸಾಧ್ಯವಿಲ್ಲ. ಆದ್ದರಿಂದಲೇ ಕನ್ನಡದ ಗಣಪತಿ ತಮಿಳಿನಲ್ಲಿ ಕಣಪತಿ ಎಂದು ಕರೆಸಿಕೊಳ್ಳುತ್ತಾನೆ.

'ಇ' ಕನ್ನಡದಲ್ಲಿ ಉಪ ಧ್ವನಿಮಾ. ಆದರೆ ಮಲೆಯಾಳಂ ಮತ್ತು ತುಳುಗಳಲ್ಲಿ ಪ್ರಧಾನ ಧ್ವನಿಮಾ.

ತಾಲವ್ಯೀಕರಣ (ಕಕಾರ ಚಕಾರ ಆಗುವುದು) ಕನ್ನಡದಲ್ಲಿ ಕಡಿಮೆ. ತಮಿಳು, ಮಲೆಯಾಳಂಗಳಲ್ಲಿ ವಿಪುಲ. ಕನ್ನಡದಲ್ಲಿ ಚೆಂದಳಿರು, ಚೆಂದುಟಿ ಮೊದಲಾದ ತಾಲವ್ಯೀಕರಣಕ್ಕೆ ತೆಲುಗು ಪ್ರಭಾವ ಇದ್ದಿರಬೇಕು. ಅದು ಕನ್ನಡದಲ್ಲಿ ಸ್ವಾಭಾವಿಕ ಅಲ್ಲ ಎನ್ನುತ್ತಾರೆ ಭಾಷಾ ವಿಜ್ಞಾನಿಗಳು. ಅಂತೆಯೇ ಮೂಲದ್ರಾವಿಡದ ಪುನರ್ರಚನೆಯ ಸಂದರ್ಭದಲ್ಲಿ 'ಕ'ಕಾರವೇ ಮೂಲ ರೂಪವೆಂದು ನಿರ್ಧರಿಸಲು ಕನ್ನಡ ಸಹಾಯಕವಾಗುತ್ತದೆ ಎಂದು ತಿಳಿಸುತ್ತಾರೆ.

ಚ>ಜ ಬದಲಾವಣೆ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿದೆ. ಆದರೆ ತಮಿಳು, ಮೊದಲಾದ ದ್ರಾವಿಡ ಭಾಷೆಗಳಲಿಲ್ಲ. ತಮಿಳಿನಲ್ಲಿ ಘೋಷವರ್ಣವೇ ಇಲ್ಲದಿರುವುದಿಂದ ಪರಿವರ್ತನೆ ಪ್ರಶ್ನೆ ಏಳುವುದಿಲ್ಲ.

ತಮಿಳು ಕನ್ನಡ ತೆಲುಗು
ಜೋಡು ಜೋಡು ಜೋಡು
ಜೋಳಿಗೈಜೋಳಿಗೆ ಜೋಳಿಯ

ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಮೂಲ ದ್ರಾವಿಡ ಧ್ವನಿಮಾಗಳಾದ ಱ, ೞ ಗಳನ್ನು ೧೨ ನೆಯ ಶತಮಾನದಿಂದೀಚೆಗೆ ಕೈಬಿಡಲಾಗಿದೆ. ಆದರೆ ತಮಿಳು ಮತ್ತು ಮಲೆಯಾಳಂಗಳು ಅವುಗಳನ್ನು ಇಂದಿಗೂ ಉಳಿಸಿಕೊಂಡಿವೆ.

ಸಂಸ್ಕೃತದ 'ಲ' ಕಾರಕ್ಕೆ ಬದಲಾಗಿ ಬಳಸುವ 'ಳ' ಕಾರವನ್ನು 'ಕ್ಷಳ' ಎಂದು ಕರೆದಿದ್ದಾನೆ ಕೇಶಿರಾಜ.

ಉದಾಹರಣೆ: ಕಮಲ>ಕಮಳ
ಕಾಲಿದಾಸ>ಕಾಳಿದಾಸ
ಜಲ>ಜಳ ಇತ್ಯಾದಿ

ಈ ಕ್ಷಳ 'ಳ' ಕಾರರೂ ಕನ್ನಡೇತರ ದ್ರಾವಿಡ ಭಾಷೆಗಳಲ್ಲಿ ಇಲ್ಲ. ಅಂತೆಯೇ ಇದು ಕೇಶಿರಾಜನ ಸ್ವಕಪೋಲ ಕಲ್ಪಿತವಿದ್ದರೂ ಇರಬಹುದು. ಅಂತೂ ಇದು ಕನ್ನಡದ ವೈಶಿಷ್ಟಗಳಲ್ಲಿ ಒಂದು.

ಏ) ಕನ್ನಡವನ್ನುಳಿದು ಪ ಕಾರಾದಿಯಾದ ಶಬ್ದಗಳು ಎಲ್ಲ ದ್ರಾವಿಡ ಭಾಷೆಗಳಲ್ಲೂ ಹಾಗೆಯೇ ಉಳಿದು ಬರುತ್ತವೆ. ಹಳಗನ್ನಡದ ಪ ಕಾರ ನಡುಗನ್ನಡದಲ್ಲಿ ಹ ಕಾರವಾಗಿದೆ.

ಉದಾಹರಣೆ: ಪಸು>ಹಸು
ಪಸುಳೆ > ಹಸುಳೆ ಇತ್ಯಾದಿ

ಕೇಶಿರಾಜ ಕನ್ನಡದ ಒಂಬತ್ತು ಅಸಾಧಾರಣ ಲಕ್ಷಣಗಳನ್ನು ತನ್ನ ಶಬ್ದಮಣಿದರ್ಪಣದ ಸಮಾಪ್ತಿ ಸಂದರ್ಭದಲ್ಲಿ ಹೇಳಿ, ಒಂದು ಪಟ್ಟಿಕೊಡುತ್ತಾನೆ. ವೃತ್ತ ಹೀಗಿದೆ:

ಗಮಕ ಸಮಾಸದಿಂ ೞ ಱ ಕುಳಕ್ಷಳದಿಂ ಶ್ರತಿಸಹ್ಯಸಂಧಿಯಿಂ
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ
ವಮಹಪ ಭೇದದಿಂದ ವಿರಹಿತಾವ್ಯಯ ಸಂಸ್ಕೃತಲಿಂಗದಿಂ ಪದೋ
ತ್ತಮ ಶಿಥಿಲದ್ವಿತ್ವದಿಂ ಯತಿವಿಲಂಘನದಿಂದಱದಲ್ತೆ ಕನ್ನಡಂ॥

(೧) ಗಮಕಸಮಾಸ (೨) ಱ ೞ ಕುಳಕ್ಷಳ (೩) ಶ್ರುತಿಸಹ್ಯಸಂಧಿ (೪) ಸತಿಸಪ್ತಮಿ (೫) ಸಮಸಂಸ್ಕೃತೋಕ್ತಿ (೬) ವ<ಮ ಹ<ಪ ಭೇದ (೭) ಅವ್ಯಯಲಿಂಗ (೮) ಶಿಥಿಲದ್ವಿತ್ವ (೯) ಯತಿವಿಲಂಘನ – ಇವು ಒಂಬತ್ತು ಕನ್ನಡದ ಅಸಾಧಾರಣ ಲಕ್ಷಣಗಳು ಎಂದಿದ್ದಾನೆ.

ಆದರೆ ಭಾಷಾವಿಜ್ಞಾನದ ದೃಷ್ಟಿಯಿಂದ ಇವು ಮಹತ್ವದವುಗಳೇನಲ್ಲ. ಕೇಶಿರಾಜ ಬಹು ದೊಡ್ಡ ವೈಯಾಕರಣಿ, ಆದರೆ ಭಾಷಾ ವಿಜ್ಞಾನಿ ಅಲ್ಲ. ಅವನ ತಲೆತುಂಬ ತುಂಬಿರುವುದು ಸಂಸ್ಕೃತವೇ ಹೊರತು ದ್ರಾವಿಡ ಭಾಷೆಗಳಲ್ಲ. ಸದ್ಯ ವ್ಯಾಕರಣವನ್ನು ಆದರ್ಶವಾಗಿ ಅಥವಾ ಮೂಲ ಆಕರವಾಗಿ ಇಟ್ಟುಕೊಂಡು ಸೂತ್ರಗಳನ್ನು ಅವಕ್ಕನುಗುಣವಾಗಿ ನೆಯ್ದು, ಕನ್ನಡದಲ್ಲೂ ಅವು ಉಂಟೆಂದು ಹೇಳಿ ಉದಾಹರಣೆಗಳನ್ನು ಬಹು ಕಷ್ಟಪಟ್ಟು ಹುಡುಕಿ ಹೊಸೆಯುತ್ತಾನೆ.

ಉದಾಹರಣೆಗೆ : (೧) ಸಮುಚಿತವಾಗಿ ಬರ್ಪ ಸತಿಸಪ್ತಮಿ (೨) ಸಂಸ್ಕೃತೋಕ್ತಿ (೩) ಮ > ವ ಭೇದ (೪) ವಿರಹಿತಾವ್ಯಯ ಸಂಸ್ಕೃತಲಿಂಗ ಅದೇ ರೀತಿ (೫) ಶಿಥಿಲದ್ವಿತ್ವ (೬) ಯತಿವಿಲಂಘನಗಳು ಛಂದಸ್ಸು ಸಂಬಂಧಿಸಿದ ವಿಷಯಗಳು (೭) ಱ ೞ ಕುಳಗಳು ಮೂಲದ್ರಾವಿಡ ಧ್ವನಿಮಾಗಳು. ಅವುಗಳ ಮೇಲೆ ಇಪ್ಪತ್ತೈದು ಪ್ರಧಾನ ದ್ರಾವಿಡ ಭಾಷೆಗಳ ಅಧಿಕಾರ ಇದೆ. ಅದು ಕನ್ನಡಕ್ಕಷ್ಟೇ ಮೀಸಲಿಲ್ಲ. (೮) ಪ>ಹ ಭೇದ ಮತ್ತು (೯) ಕ್ಷಳ ವಿಚಾರಗಳು ಹಾಗೂ (೧೦) ಗಮಕ ಸಮಾಸ ಮತ್ತು (೧೧) ಶ್ರುತಿಸಹ್ಯಸಂಧಿ – ಇವು ತುಂಬು ಅನಿವಾರ್ಯಗಳಲ್ಲದಿದ್ದರೆ ವಿಚಾರಯೋಗ್ಯ.

**ಪ್ರಶ್ನೆಗಳು:**

೧. ದ್ರಾವಿಡ ಶಬ್ದವು ಜನಾಂಗವಾಚಿಯೇ? ಭಾಷಾ ವಾಚಿಯೇ ವಿವರಿಸಿ
೨. ದ್ರಾವಿಡ ಭಾಷಾ ವರ್ಗದ ವೈಶಿಷ್ಟ್ಯಗಳನ್ನು ವಿಶೇಷವಾಗಿ ಕನ್ನಡಕ್ಕೆ ಸಂಬಂಧಿಸಿದಂತೆ ವಿವರಿಸಿ
೩. ದ್ರಾವಿಡ ಭಾಷೆಗಳು, ಆರ್ಯನ್ ಭಾಷೆಗಳಿಂದ ಭಿನ್ನವಾಗಿವೆಯೆಂದು ನಿರ್ಧರಿಸಲು ಇರುವ ಆಧಾರಗಳಾವುವು? ವಿವರಿಸಿ
೪. ಕನ್ನಡ ಭಾಷೆಯ ವೈಶಿಷ್ಟ್ಯಗಳನ್ನು ವಿವರಿಸಿ
೫. ಪ್ರಮುಖ ದ್ರಾವಿಡ ಭಾಷೆಗಳನ್ನು ಪಟ್ಟಿಮಾಡಿ

# ಘಟಕ –೦೩

# (ಸಂವಹನ ಕೌಶಲವಾಗಿ ಭಾಷೆ)

## ೧) ಔಪಚಾರಿಕ ಮತ್ತು ಅನೌಪಚಾರಿಕ ಅಭಿವ್ಯಕ್ತಿಯ ಸ್ವರೂಪ

ವ್ಯಾವಹಾರಿಕ ಪತ್ರಗಳು ಹೆಚ್ಚಾಗಿ ಔಪಚಾರಿಕ ಸನ್ನಿವೇಶಕ್ಕೆ ಸೇರಿದ ಪತ್ರಗಳು. ಇದರಿಂದಾಗಿಯೇ ಅವು 'ವ್ಯಕ್ತಿನಿರಪೇಕ್ಷ' ಕೂಡ. ವ್ಯಾವಹಾರಿಕ ಪತ್ರಗಳ ರಚನೆಯನ್ನು ವೈಯಕ್ತಿಕ ಬೇಕು ಬೇಡಗಳಿಗಿಂತ ಹೆಚ್ಚಾಗಿ ನಿಯಮಾವಳಿಗಳು ಅಥವಾ ಕಾನೂನಿನ ಚೌಕಟ್ಟು ನಿರ್ಧರಿಸುತ್ತಿರುತ್ತದೆ. ಇದೇ ಅಂಶವೇ ಪತ್ರಗಳು ಲಿಖಿತ ರೂಪದಲ್ಲಿರುವುದನ್ನೂ ಒತ್ತಾಯಿಸುತ್ತದೆ. ಏಕೆಂದರೆ ಇಂತಹ ಪತ್ರಗಳು ಎರಡು ಬಗೆಯ ಕೆಲಸ ಅಥವಾ ನಿಯೋಗ(funcition)ವನ್ನು ನಿರ್ವಹಿಸುತ್ತಿರುತ್ತವೆ. ಮೊದಲನೆಯದು, ಮಾಹಿತಿ ಅಥವಾ ಸಂವಹನ. ಎರಡನೆಯದು, ನಡೆದಿರುವ ವ್ಯವಹಾರದ ಕಾನೂನು ಬದ್ಧ ದಾಖಲೆ, ಉದ್ಯೋಗಿಯೊಬ್ಬ ತನ್ನ ಮೇಲಧಿ ಕಾರಿಯಿಂದ ಒಂದು ದಿನದ ರಜೆಗೆ ಅನುಮತಿಯನ್ನು 'ಮೌಖಿಕ'ವಾಗಿ (ಬಾಯಿಮಾತಿನಲ್ಲಿ) ಪಡೆಯಬಹುದು. ಹಾಗೆಂದು ಆತ ರಜೆಗಾಗಿ ಲಿಖಿತ ಅರ್ಜಿಯನ್ನು ನೀಡದೆ ಇರುವಂತಿಲ್ಲ ಏಕೆಂದರೆ ಅದು ವ್ಯವಹಾರದ ದಾಖಲೆಯಾಗಿ ಅಗತ್ಯವಾಗುತ್ತದೆ.

ಇನ್ನು ವಾಣಿಜ್ಯ ಜಗತ್ತಿಗೆ ಬಂದರೆ, ವ್ಯವಹಾರವೆಂದರೆ ಅಲ್ಲಿ ಲಾಭನಷ್ಟಗಳ ವಿಚಾರವೂ ಇದ್ದೇ ಇರುತ್ತದೆ. ಯಾವುದೇ ವ್ಯಾಪಾರ ಸಂಸ್ಥೆ ತನ್ನ ವ್ಯವಹಾರ ನಿರ್ವಹಣೆಗಾಗಿ ಇನ್ನಿತರ ಹತ್ತು ಹಲವು ಬಗೆಯ ಸಂಸ್ಥೆಗಳನ್ನು ಅವಲಂಬಿಸುವುದು, ಅವುಗಳೊಂದಿಗೆ ಸಂಬಂಧವನ್ನಿರಿಸಿಕೊಳ್ಳುವುದು ಅನಿವಾರ್ಯವೇ ಆಗುತ್ತದೆ. ಹೀಗಾಗಿ ಇಂತಹ ಯಾವುದೇ ಎರಡು ಸಂಸ್ಥೆಗಳ ನಡುವೆ ನಡೆಯುವ ಪತ್ರವ್ಯವಹಾರ ಅವೆರಡರ ನಡುವೆ ಪರಸ್ಪರ ಮಾಹಿತಿಯನ್ನು ವಿನಿಯೋಗ ಮಾಡುವುದರೊಂದಿಗೆ, ಅವೆರಡರ ನಡುವೆ ಏರ್ಪಟ್ಟ ಒಪ್ಪಂದದ ದಾಖಲೆಗಳೂ ಆಗಿರುತ್ತದೆ. "ಸರಕುಗಳು ತಲುಪಿದ ಒಂದು ತಿಂಗಳ ಒಳಗಾಗಿ ಅವುಗಳ ವೆಚ್ಚವನ್ನು ಪಾವತಿಸಲಾಗುವುದು" ಎಂದು ಲಿಖಿತವಾಗಿ ಒಪ್ಪಿಕೊಂಡ ವ್ಯಾಪಾರಿ ಅದಕ್ಕೆ ತಪ್ಪಿದಲ್ಲಿ ಆಗ ಆ ಪತ್ರವನ್ನು ಕೋರ್ಟಿನ ದಾಖಲೆಯಾಗಿ ಹಾಜರುಪಡಿಸಬಹುದು. ಈ ಹಿನ್ನೆಲೆಯಲ್ಲಿ ವ್ಯವಹಾರ ಪತ್ರಗಳ ವಿವಿಧ ಅಂಗಗಳು ಪರಸ್ಪರ ಸಂವಹನದ ಅಗತ್ಯವನ್ನು ಪೂರೈಸುತ್ತಿರುತ್ತವೆ; ವ್ಯವಹಾರಕ್ಕೊಂದು ಕ್ರಮಬದ್ಧತೆಯನ್ನು ತಂದುಕೊಡುತ್ತವೆ; ಜೊತೆಗೆ ಕಾನೂನು ಬದ್ಧ ದಾಖಲೆಗಳೂ ಆಗಿರುತ್ತವೆ. ವ್ಯವಹಾರಪತ್ರದ ವಿವಿಧ ಅಂಗಗಳನ್ನು ಗಮನದಲ್ಲಿರಿಸಿಕೊಂಡು ಈ ಅಂಶಗಳನ್ನು ಪರಿಶೀಲಿಸೋಣ.

ವ್ಯವಹಾರ ಪತ್ರದ ಅಂಗಗಳಾಗಿ ಈ ಕೆಳಕಂಡ ಅಂಶಗಳನ್ನು ಸಾಮಾನ್ಯವಾಗಿ ಗುರುತಿಸುವುದುಂಟು.

| | |
|---|---|
| ೧. ಶಿರೋನಾಮೆ | ೫. ಗೌರವ ಸಂಭೋದನೆ |
| ೨. ದಿನಾಂಕ | ೬. ವಿಷಯ |
| ೩. ಪತ್ರ ಸಂಖ್ಯೆ | ೭. ಉಲ್ಲೇಖ |
| ೪. ಒಳವಿಳಾಸ | ೮. ಪತ್ರದ ಒಡಲು ಅಥವಾ ಒಕ್ಕಣೆ |
| ೯. ಔಪಚಾರಿಕ ಮುಕ್ತಾಯ | ೧೦. ಸಹಿ, ಪದನಾಮ ಇತ್ಯಾದಿ |
| ೧೧. ಅಡಕಗಳು | ೧೨. ಪ್ರತಿಗಳು |

**ಶಿರೋನಾಮೆ**: ಪತ್ರವನ್ನು ಕಳಿಸುವ ವ್ಯಕ್ತಿ ಅಥವಾ ಸಂಸ್ಥೆಯ ವಿವರಗಳೇ ಶಿರೋನಾಮೆ. ಸಾಮಾನ್ಯವಾಗಿ ಇದು ಮುದ್ರಿತರೂಪದಲ್ಲಿ "ಶಿರೋನಾಮೆ ಪತ್ರ' (letter head) ಎಂದೇ ಇದನ್ನು ಕರೆಯುವುದು ರೂಢಿ. ಇದನ್ನು ಹಲವು ವಿನ್ಯಾಸಗಳಲ್ಲಿ, ಬಣ್ಣಗಳಲ್ಲಿ ಕಲಾತ್ಮಕವಾಗಿ ಮುದ್ರಿಸಲಾಗುತ್ತದೆ. ಕೆಲವೊಮ್ಮೆ ಇದನ್ನು ಸಂಸ್ಥೆಯ ಪ್ರತಿಷ್ಠೆಯಾಗಿಯೂ ಪರಿಗಣಿಸುವುದುಂಟು. ಇದರಲ್ಲಿ ಸಂಸ್ಥೆಯ ಲಾಂಛನ, ವಿಳಾಸ, ದೂರವಾಣಿ ಮೊದಲಾದ ವಿವರಗಳಿರುತ್ತವೆ. ಶಿರೋನಾಮೆ ಪತ್ರವು ಪತ್ರದ ಅಧಿಕೃತತೆಗೂ ಸಾಕ್ಷಿಯಾಗುತ್ತದೆ.

**ದಿನಾಂಕ:** ಪತ್ರದಲ್ಲಿ ಬರೆಯಲಾದ ದಿನಾಂಕವು ಪತ್ರವನ್ನು ಸಕಾಲದಲ್ಲಿ ಬರೆಯಲಾಯಿತೇ ಅಥವಾ ವಿಳಂಬವಾಯಿತೇ ಎನ್ನುವ ಸೂಚನೆಯನ್ನೂ ನೀಡುತ್ತಿದೆ.

**ಪತ್ರಸಂಖ್ಯೆ:** ಪತ್ರಗಳಿಗೆ ಕ್ರಮಬದ್ಧವಾಗಿ ಸಂಖ್ಯೆಯನ್ನು ನೀಡುವುದರಿಂದ ಹಲವು ಪ್ರಯೋಜನಗಳಿವೆ. ಮೊದಲನೆಯದಾಗಿ ಇದು ಪತ್ರಗಳನ್ನು ವ್ಯವಸ್ಥಿತವಾಗಿ ಕಡತಗಳಲ್ಲಿ (files) ಜೋಡಿಸಿಡಲು ಸಹಾಯಕಾರಿ, ಅಲ್ಲದೆ ಈ ಪತ್ರಕ್ಕೆ ಇನ್ನೊಂದು ಸಂಸ್ಥೆ ಉತ್ತರಿಸುವಾಗ, ಈ ಪತ್ರಸಂಖ್ಯೆ ಅಲ್ಲಿನ ಉಲ್ಲೇಖದ ಸ್ಥಾನದಲ್ಲಿ ಕಾಣಿಸಿಕೊಳ್ಳುತ್ತದೆ. ಇದರಿಂದ ಯಾವ ಪತ್ರಕ್ಕೆ ಉತ್ತರವಾಗಿ ಈ ಇನ್ನೊಂದು ಪತ್ರ ಬಂದಿದೆಯೆಂಬುದನ್ನು ಗುರುತಿಸಬಹುದು, ಇದು ಹೀಗೇ ಮುಂದುವರಿದರೆ, ಪತ್ರ ಸಂಖ್ಯೆಗಳು ವ್ಯವಹಾರದ ಮುಂದುವರಿಕೆಯನ್ನು ಗುರುತಿಸಲು ಸಹಾಯಕಾರಿಯಾಗುತ್ತವೆ.

**ಒಳವಿಳಾಸ:** ಪತ್ರವನ್ನು ಅಂಚೆಯ ಮೂಲಕ ಕಳಿಸುವಾಗ ಲಕೋಟೆಯ ಮೇಲೆ ಬರೆಯುವ ವಿಳಾಸ ಅಂಚೆ ಇಲಾಖೆಯ ಉಪಯೋಗಕ್ಕಾಗಿ, ಆದರೆ ಪತ್ರದ ಒಳಗೆ ಬರೆಯುವ ವಿಳಾಸ (ಒಳವಿಳಾಸ) ಯಾವ ವಿಳಾಸಕ್ಕೆ ಪತ್ರವನ್ನು ಕಳಿಸಲಾಯಿತು ಎಂಬುದರ ದಾಖಲೆಯಾಗುತ್ತದೆ. ಪತ್ರ ತಲುಪದಿದ್ದಾಗ ಅಥವಾ ವಿಳಂಬವಾಗಿ ತಲುಪಿದಾಗ ಏಳುವ ತಕರಾರುಗಳ ಹಿನ್ನೆಲೆಯಲ್ಲಿ ಒಂದು ದಾಖಲೆಯಾಗಿ ಒಳವಿಳಾಸದ ಪ್ರಯೋಜನವನ್ನು ಅರಿಯಬಹುದು.

**ಗೌರವ ಸಂಭೋದನೆ:** ವಿಳಾಸದ ಕೆಳಗೆ ಎರಡು ಸಾಲುಗಳಷ್ಟು ಸ್ಥಳ ಬಿಟ್ಟು ಗೌರವ ಸಂಬೋಧನೆ ಬರೆಯಬೇಕು. ಒಬ್ಬರು ಇನ್ನೊಬ್ಬರನ್ನು ಸಂಧಿಸಿದಾಗ ವಂದನೆ ಮಾಡುವಂತೆ ಪತ್ರವನ್ನು ಆರಂಭಿಸುವಾಗ ವಿಳಾಸದಾರರಿಗೆ ಸಲ್ಲಿಸುವ ವಂದನೆಯೇ ಗೌರವ ಸಂಬೋಧನೆ.

**ಉದಾ: ಮಾನ್ಯರೇ,**

**ವಿಷಯ ಶೀರ್ಷಿಕೆ:** ಪತ್ರದಲ್ಲಿ ಚರ್ಚಿತವಾಗಲಿರುವ ವಿಷಯದ ಶೀರ್ಷಿಕೆ (Subject heading) ಇದು ಪತ್ರದ ಬಲು ಮುಖ್ಯವಾದ ಭಾಗ. ಪತ್ರ ಬರೆದವರು ಏನನ್ನು ತಿಳಿಸಬೇಕೆಂದಿರುವರೋ ಆ ವಿಷಯ ಸ್ಪಷ್ಟವಾಗುವುದು ಇಲ್ಲೇ.

**ಪತ್ರದ ಒಡಲು:** (Content or Body of the Letter) ಪತ್ರದ ವಿಷಯ (Subject)ವು ಇಲ್ಲಿ ಚರ್ಚಿಸಲ್ಪಡುತ್ತದೆ. ಒಂದು ಪತ್ರದಲ್ಲಿ ಒಂದು ವಿಷಯಕ್ಕೆ ಸಂಬಂದಪಟ್ಟಂತೆ ಚರ್ಚಿಸಿದರೆ ಒಳ್ಳೆಯದು. ಒಂದಕ್ಕಿಂತ ಹೆಚ್ಚಿನ ವಿಷಯಗಳಿದ್ದಾಗ ಒಂದೊಂದನ್ನು ಪ್ರತ್ಯೇಕ ಪ್ಯಾರಾಗಳಲ್ಲಿ ಚರ್ಚಿಸಬೇಕು.

**ಔಪಚಾರಿಕ ಮುಕ್ತಾಯ:** ಪತ್ರದ ಕೊನೆಯಲ್ಲಿ ಅಭಿನಂದನೆಯೊಡನೆ ಮುಗಿಸತಕ್ಕದ್ದು.

ಉದಾ: ತಮ್ಮ ವಿಶ್ವಾಸದ.

**ಸಹಿ ಪದನಾಮ:** ಔಪಚಾರಿಕ ಮುಕ್ತಾಯದ ನಂತರ ಪತ್ರವನ್ನು ಬರೆದವರು ತಮ್ಮ ಪದನಾಮ ಸಹಿತ ಸಹಿಯನ್ನು ಹಾಕತಕ್ಕದ್ದು.( Sign with designation)

ಉದಾ : ತಮ್ಮ ವಿಶ್ವಾಸದ<br>
ಭಟ್ಟಾಚಾರ್ಯ<br>
ವ್ಯವಸ್ಥಾಪಕ<br>
ಸಂಸ್ಕೃತಿ ಮುದ್ರಣಾಲಯ

**ಅಡಕಗಳು:** (**Enclosers)** ವ್ಯವಹಾರಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಲಗತ್ತಿಸಿವುದಕ್ಕೆ ಅಡಕ ಅಥವಾ ಲಗತ್ತುಗಳು ಎನ್ನುತ್ತಾರೆ.

ಉದಾ: **ಲಗತ್ತು–೦೧ ಟೆಂಡರ್ ಪ್ರತಿ**<br>
**ಲಗತ್ತು–೦೨ ಖರೀದಿಸಿದ ಮುದ್ರಣ ಕಾಗದದ ರಸೀತಿ ಇತ್ಯಾದಿ**

**ಪ್ರತಿಗಳು:** ಪತ್ರದ ಪ್ರತಿಗಳನ್ನು (Copies) ಯಾರ ಯಾರ ಹೆಸರಿಗೆ ಕಳಿಸಲಾಗಿದೆ ಎಂಬುದರ ವಿವರ

ಉದಾ

**ಪ್ರತಿ–೧ – ಅಧ್ಯಕ್ಷರು**. ಕರ್ನಾಟಕ ಸರ್ಕಾರಿ ಮುದ್ರಣಾಲಯ.

**ಪ್ರತಿ–೨ – ಉಪಾಧ್ಯಕ್ಷರು**. ಕರ್ನಾಟಕ ಸರ್ಕಾರಿ ಮುದ್ರಣಾಲಯ.

ಇವು ಈ ಪತ್ರದ ಮುಖ್ಯವಾದ ಅಂಗಗಳು. ಇವನ್ನು ಸ್ಥೂಲವಾಗಿ ಹೀಗೆ ನಿರೂಪಿಸಬಹುದು.

೧. ತಲೆಬರಹ (ಕಾಗದ ಬರೆದ ಸಂಸ್ಥೆಯ ಹೆಸರು, ವಿಳಾಸ, ತಂತಿ ವಿಳಾಸ, ಇತ್ಯಾದಿ)
೨. ತಾರೀಖು
೩. ಒಳವಿಳಾಸ (ಯಾರಿಗೆ ಕಾಗದ ಬರೆದಿದೆಯೋ ಅವರ ಹೆಸರು, ವಿಳಾಸ)
೪. ಗೌರವ ಸಂಬೋಧನೆ (ಮಾನ್ಯರೇ, ಇತ್ಯಾದಿ)
೫. ಪತ್ರದ ಒಡಲು
೬. ವಂದನಾಪೂರ್ವಕ ಮುಕ್ತಾಯ (ತಮ್ಮ ವಿಶ್ವಾಸ)
೭. ಪತ್ರವನ್ನು ತಯಾರಿಸಿದವರ (ಶೀಘ್ರಲಿಪಿಗಾರರ) ಹಾಗೂ ಬೆರಳಚ್ಚು ಮಾಡಿದವರ ಅಧ್ಯಕ್ಷರ (ಇನಿಷಿಯಲ್ಸ್).

**ಮಾದರಿ ಪತ್ರದ ಅಂಗಗಳನ್ನು ಹೀಗೆ ತೋರಿಸಬಹುದು:**

೧)........................................................

..........................................................

........................ .................. **ತಲೆಬರಹ**

.................... ..................

..................

೨) .................. **ತಾರೀಖು**

೩) .................................

................................. **ಒಳವಿಳಾಸ**

.................................

೪) ............................... **ಗೌರವ ಸಂಬೋಧನೆ**

೫) .........................................................................

.................................................................................

.................................................................................

.................................................................................

.................................................................................

.................................................................................

.................................................................................

೬) **ವಂದನಪೂರ್ವಕ ಮುಕ್ತಾಯ**

೭) ...................................................................................................... **ಸಹಿ**

೮) ............................................................................ **ಪತ್ರ ರಚಿಸಿದವರ ಅಧ್ಯಕ್ಷರ**

ಹೀಗೆಯೇ ಪತ್ರವನ್ನು ಯಾವ ಧಾಟಿಯಲ್ಲಿ ಬರೆಯಲಾಗಿದೆ, ಅದಕ್ಕೆ ಸಹಿ ಮಾಡಿರುವವರು ಯಾರು, ಸಂಬಂಧಿಸಿದ ಅಡಕಗಳನ್ನು ಪತ್ರವು ಹೊಂದಿದೆಯೇ, ಪತ್ರದ ಪ್ರತಿಗಳನ್ನು ಯಾರು ಯಾರಿಗೆ ನೀಡಲಾಗಿದೆ ಇವೆಲ್ಲವೂ ಒಂದಿಲ್ಲೊಂದು ರೀತಿಯಲ್ಲಿ ವ್ಯವಹಾರದ ದಾಖಲೆಗಳಾಗಿ ನೆರವಾಗುತ್ತವೆ. ಈ ದೃಷ್ಟಿಕೋನದಿಂದ ಮಾಡುವ ಪತ್ರಗಳ ಸ್ವರೂಪದ ಅಧ್ಯಯನ ನಮಗೆ ಕುತೂಹಲಕರ ಸಂಗತಿಗಳನ್ನು ತಿಳಿಸಬಲ್ಲುದು.

## ಸಂಘ ಸಂಸ್ಥೆಗಳ ಸಭೆಗಳು / ಕಾರ್ಯಕ್ರಮಗಳು

**(ಅ) ಸಭೆಯ ತಿಳಿವಳಿಕೆ ಪತ್ರ ಮತ್ತು ಕಾರ್ಯಸೂಚಿ**

**(ಆ). ಆಹ್ವಾನಪತ್ರಿಕೆಯ ಸ್ವರೂಪ**

**(ಇ) ಕಾರ್ಯಕ್ರಮ ಪಟ್ಟಿ**

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಂಬಿಕೆ ಇರುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹಿತಾಸಕ್ತಿ ಅಥವಾ ದ್ಯೇಯೋದ್ದೇಶದ ಈಡೇರಿಕೆಗಾಗಿ ಏಕಾಂಗಿಯಾಗಿ ಕಾರ್ಯಮಗ್ನನಾಗಲಾರ, ಒಂದೇ ಉದ್ದೇಶ ಮತ್ತು ದ್ಯೇಯೋದ್ದೇಶವುಳ್ಳ ತನ್ನಂತಹ ಹಲವರಿಂದ ಒಗ್ಗೂಡಿದ ಒಂದು ಪ್ರಜಾಸತ್ತಾತ್ಮಕ ಸಂಘಟನೆ ಅಥವಾ ವ್ಯವಸ್ಥೆಯೊಂದಿಗೆ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಆ ಮೂಲಕ ತನ್ನ ದ್ಯೇಯೋದ್ದೇಶವನ್ನು ಸುಲಭವಾಗಿ ಈಡೇರಿಸಿಕೊಳ್ಳುತ್ತಾನೆ. ಇಂತಹ ಒಂದು ಸಂಘಟನಾತ್ಮಕ ವ್ಯವಸ್ಥೆಯೇ ಸಂಘ ಅಥವಾ ಸಂಸ್ಥೆ.

ಹೀಗೆ ಏಕೋದ್ದೇಶದಿಂದ ಸಂಘಟಿತರಾಗಿ ದುಡಿಯುವ ಸಂಘಸಂಸ್ಥೆಗಳ ಕಾರ್ಯವೈಖರಿಯ ಬಹುಮುಖ್ಯವಾದ ಸ್ವರೂಪವೇ ಸಭೆಗಳು. 'ಸಭೆಯ ಉದ್ದೇಶ ಸೇರುವುದು, ಒಗ್ಗೂಡುವುದು, ಒಗ್ಗೂಡುವುದರ ಉದ್ದೇಶ ಚರ್ಚೆ, ತೀರ್ಮಾನ, ಕಾರ್ಯಸಾಧನೆ, ಕಾರ್ಯಸಾಧನೆಯ ಸಾಧನವೇ ಸಭೆ.

'ಸಭೆ'ಗೆ ಸಂಘ/ಸಂಸ್ಥೆಯ ಮುಖ್ಯಸ್ಥರೇ ಅಧ್ಯಕ್ಷ. ಅವರ ಅಧ್ಯಕ್ಷತೆಯಲ್ಲೇ ಸಭೆ ನಡೆಯುತ್ತದೆ, ಉಳಿದವರೆಲ್ಲರೂ ಸದಸ್ಯರು, ಯಾವುದೇ ಸಭೆಯ ಸೇರುವಿಕೆಗೆ ಒಂದು ಉದ್ದೇಶ ಅಥವಾ ಗುರಿ ಇರಬೇಕಾಗುತ್ತದೆ. ಉದ್ದೇಶವೇ ಇಲ್ಲದ ಸೇರುವಿಕೆ ಜನರ ದೊಂಬಿ. ಹೀಗೆ ಒಂದು ಉದ್ದೇಶ, ಅದರ ಈಡೇರಿಕೆಗಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಸಭೆಯಿಂದ ಸಲಹೆ, ಸೂಚನೆ, ಅಭಿಪ್ರಾಯ, ಆಕ್ಷೇಪಣೆ, ಅನುಮೋದನೆ ಇತ್ಯಾದಿಗಳನ್ನು ಸ್ವೀಕರಿಸಿ, ನಂತರ ಸಭಾಧ್ಯಕ್ಷರ ಸಮ್ಮುಖದಲ್ಲಿ ಚರ್ಚೆ, ಸಮಾಲೋಚನೆಗಳ ಮೂಲಕ ಅಂತಿಮ ಬಹುಮತದ ಅಥವಾ ಸರ್ವಾನುಮತದ ತೀರ್ಮಾನದ ಮೂಲಕ ನಿರ್ಣಯಗಳನ್ನು ಅಂಗೀಕರಿಸಲಾಗುತ್ತದೆ. ಇದಿಷ್ಟು ಸ್ಥೂಲವಾಗಿ ಸಭೆಯ ಕಾರ್ಯಸ್ವರೂಪ ವೈಖರಿಯಾಗಿದೆ.

ಗ್ರಾಮ ಅಥವಾ ನಗರ ಪಂಚಾಯಿತಿಯ ಸಭೆಯಿಂದ ಹಿಡಿದು, ಕೂಡು ಬಂಡವಾಳ ಸಂಸ್ಥೆ (joint stock Company)ಯ ಸಭೆಗಳ ಕಾರ್ಯವೈಖರಿಯವರೆಗೆ ವಿವಿಧ ರೀತಿಯ ಸಭೆಗಳನ್ನು ಗಮನಿಸಬಹುದು. ಅಷ್ಟೇ ಏಕೆ, ತೀರಾ ಪ್ರಾಥಮಿಕ ಹಂತದಲ್ಲಿ ಸಭೆಗಳ ಕಾರ್ಯವೈಖರಿಯನ್ನು ಅರಿಯಲು ಶಾಲಾ ಕಾಲೇಜುಗಳಲ್ಲಿ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಕಾರ್ಯನಿರ್ವಹಿಸುವ ಸಂಘಗಳ ಸಭೆಗಳ ಮೂಲಕವೇ ಸಭೆಗಳ ಸ್ವರೂಪವನ್ನು ತಿಳಿಯಲು ಪ್ರಯತ್ನಿಸಬಹುದು.

ಉದಾಹರಣೆಗೆ: ತಮ್ಮ ತಮ್ಮ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿ ಇರಬಹುದಾದ ಸಾಂಸ್ಕೃತಿಕ ಸಂಘ, ಕನ್ನಡ ಸಂಘ, ಕ್ರೀಡಾಸಂಘ, ಅಧ್ಯಾಪಕರ ಸಂಘ, ವಿದ್ಯಾರ್ಥಿ ಸಂಘ, ಶಿಸ್ತುಪಾಲನಾ ಸಭೆ, ಪೋಷಕರ ಸಭೆ ಇತ್ಯಾದಿಗಳು,

**(ಅ) ಸಭೆಯ ತಿಳಿವಳಿಕೆ ಪತ್ರ ಮತ್ತು ಕಾರ್ಯಸೂಚಿ**

ಈಗ ಸಂಘದ ಸಭೆಯೊಂದನ್ನು ಕರೆಯಬೇಕಾಗಿದೆ ಎಂದು ಭಾವಿಸೋಣ. ಹಾಗಾದರೆ ಸಭೆಯ ಪೂರ್ವ ಸಿದ್ಧತೆಗಳೇನು? ಕೇವಲ ಒಂದು ಫೋನ್ ಮಾಡಿ, ಮದುವೆಗೆ ಬನ್ನಿ ಎಂದು ಕರೆಯುವಂತೆ ಕರೆಯಲಾಗದು. ಸಭೆ ನಡೆಯಲಿರುವ ದಿನಾಂಕಕ್ಕಿಂತ ಬಹಳಷ್ಟು ಮುಂಚಿತವಾಗಿಯೇ, ಕಾರ್ಯದರ್ಶಿಯಾದವನು ಸಭಾಧ್ಯಕ್ಷರ ಸೂಚನೆ ಮತ್ತು ನಿರ್ದೇಶನದ ಮೇರೆಗೆ ಸಭೆಯ ವಿವರಗಳನ್ನು ಒಳಗೊಂಡ 'ತಿಳುವಳಿಕೆ' ಪತ್ರವನ್ನು ಬರೆಯಬೇಕಾಗುತ್ತದೆ. ಅದರಲ್ಲಿ ಸಭೆಯನ್ನು ಕರೆಯಲಾಗಿರುವ ಉದ್ದೇಶ, ಸಭೆ ನಡೆಯುವ ದಿನಾಂಕ, ಸ್ಥಳ, ಸಮಯ ಮತ್ತು ಸಭೆಯಲ್ಲಿ ಚರ್ಚೆಯಾಗಲಿರುವ ವಿಷಯಗಳ 'ಕಾರ್ಯಸೂಚಿ'ಯನ್ನು ಬರೆದು ಸಂಘದ ಎಲ್ಲಾ ಸದಸ್ಯರ ಗಮನಕ್ಕೆ ತಂದು (ತಲುಪಿಸಿ) ಸಹಿಯನ್ನು ಪಡೆಯಬೇಕಾಗುತ್ತದೆ.

**ಒಂದು ಮಾದರಿಯನ್ನು ನೋಡಿ**

**ಸಭೆಯ ತಿಳುವಳಿಕೆ ಮತ್ತು ಕಾರ್ಯಸೂಚಿ**

ಈ ಮೂಲಕ ಸಾಂಸ್ಕೃತಿಕ ಸಂಘದ ಎಲ್ಲಾ ಸದಸ್ಯರಿಗೆ ಅಧಿಕೃತವಾಗಿ ತಿಳಿಯಪಡಿಸುವುದೇನೆಂದರೆ, ಮುಂಬರುವ ಕಾಲೇಜು ವಾರ್ಷಿಕೋತ್ಸವದ ಪೂರ್ವ ತಯಾರಿಯ ಬಗೆಗೆ ಚರ್ಚಿಸುವ ಸಲುವಾಗಿ ಕಾಲೇಜು 'ಸಭಾ ಭವನ'ದಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ದಿನಾಂಕ ೧-೦೧-೨೦೨೨ ರಂದು ಸಂಜೆ ನಾಲ್ಕು ಗಂಟೆಗೆ ಸಭೆಯನ್ನು ಕರೆಯಲಾಗಿದೆ. ಸಾಂಸ್ಕೃತಿಕ ಸಂಘದ ಎಲ್ಲಾ ಸದಸ್ಯರು ತಪ್ಪದೆ ಸಭೆಗೆ ಹಾಜರಾಗತಕ್ಕದ್ದು.

ಕಾರ್ಯಸೂಚಿ :

೧, ಸ್ವಾಗತ : ಕನ್ನಡ ಅಧ್ಯಾಪಕರಾದ ಪ್ರಭಂಜನಾಚಾರ್ಯ ಅವರಿಂದ
೨, ಪ್ರಾಸ್ತವಿಕ: ಪ್ರಾಂಶುಪಾಲರಾದ ಪ್ರೊ॥ ಮೂಲಿಮನಿ ಅವರಿಂದ
೩. ಕಾಲೇಜು ವಾರ್ಷಿಕೋತ್ಸವದ ಸಲುವಾಗಿ ಕೈಗೊಳ್ಳಬೇಕಾದ ಪೂರ್ವತಯಾರಿ ಬಗ್ಗೆ ಸಮಾಲೋಚನೆ
೪. ಸಂಘದ ಸಂಚಾಲಕರು ಹಾಗೂ ಸದಸ್ಯರ ಅಭಿಪ್ರಾಯ ಮಂಡನೆ
೫. ನಿರ್ಣಯಗಳು
೬. ವಂದನಾರ್ಪಣೆ

ಸಂಚಾಲಕ / ಕಾರ್ಯದರ್ಶಿ
ಸಾಂಸ್ಕೃತಿಕ ಸಂಘ

**(ಆ) ಆಹ್ವಾನ ಪತ್ರಿಕೆಯ ಸ್ವರೂಪ**

ಆತ್ಮೀಯ ಸ್ನೇಹಿತರನ್ನು ನಮಗೆ ಬೇಕಾದ ಬಂಧುಗಳನ್ನು ನಮ್ಮ ಮನೆಗೆ ಆಮಂತ್ರಿಸುವ ವಿಧಾನ ಎಲ್ಲರಿಗೂ ತಿಳಿದದ್ದು. ಅದು ಬಹುಪಾಲು ಸಂದರ್ಭಗಳಲ್ಲಿ ಬಾಯಿಮಾತಿನ ಅಥವಾ ಒಂದು ಫೋನ್ ಕರೆಯ ಮೂಲಕ ನಡೆದು ಹೋಗುತ್ತದೆ. ಅವರು ಈ ಒಂದು ಅನೌಪಚಾರಿಕವಾದ ಕರೆಯ ಮುಖಾಂತರ ಬಂದು ಹೋಗಲೂಬಹುದು. ಆದರೆ ಎಲ್ಲ ಸಂದರ್ಭಗಳಲ್ಲೂ ಈ ರೀತಿಯಲ್ಲೇ ಸ್ನೇಹಿತರು ಬಂಧುಗಳನ್ನಾದರೂ ಬರಮಾಡಿಕೊಳ್ಳಲು ಆಗದು ಎಂಬುದು ವಾಸ್ತವವಾದ ಸಂಗತಿ.

ಮನೆಯಲ್ಲಿಯ ಮದುವೆ, ಮುಂಜಿ, ನಾಮಕರಣ, ನಿಶ್ಚಿತಾರ್ಥ ಇಂತಹ ಕೌಟುಂಬಿಕ ಸಮಾರಂಭಗಳಿಗೆ ಹಿಂದಿನಿಂದಲೂ ಬಾಯಿಮಾತಿನ ಮೂಲಕ, ನೇರವಾಗಿ ಮುಖತಃ ಭೇಟಿಯಾಗಿ ಆಹ್ವಾನಿಸುವುದರಲ್ಲಿ ಇದ್ದ ಆತ್ಮೀಯತೆ ಈಗ ಕಡಿಮೆಯಾಗುತ್ತಿದೆ. ಸಂಬಂಧಗಳೂ ವ್ಯಾವಹಾರಿಕವಾಗುತ್ತಿರುವುದರ ಸೂಚಕವಾಗಿಯೋ, ಅಥವಾ ಆಧುನಿಕ ಜೀವನದ ಜಂಜಡ, ಒತ್ತಡ, ದಾವಂತಗಳ ಕಾರಣದಿಂದಾಗಿಯೋ, ಯಾವ ಸಮಾರಂಭಗಳಿಗೂ ಇಂದು ಖುದ್ದಾಗಿ ಕರೆಯುವಷ್ಟು ಪುರುಸೊತ್ತಿಲ್ಲವಾಗಿದೆ. ಖುದ್ದಾಗಿ ಹೋಗಿ ಕರೆಯುವುದಕ್ಕೆ ಆಗುವ ಅಧಿಕ ಸಮಯದ ವ್ಯಯ, ಶ್ರಮ ಹಾಗೂ ಖರ್ಚುಗಳಿಗೆ ಹೋಲಿಸಿದರೆ, ಆಮಂತ್ರಣವನ್ನು ಮುದ್ರಿತ ಆಹ್ವಾನಪತ್ರಿಕೆಯ ರೂಪದಲ್ಲಿ ನೀಡುವ ವೆಚ್ಚ ಕಡಿಮೆ ಆಗಿದ್ದು, ಅಂಚೆಯ ಮೂಲಕ ಆಹ್ವಾನ ಪತ್ರಿಕೆ ಕಳುಹಿಸಿ ಅತಿಥಿ, ಸ್ನೇಹಿತರು ಬಂಧುಗಳನ್ನು ಕರೆಯುವುದೇ ಇಂದು ವಾಡಿಕೆ ಆಗಿಬಿಟ್ಟಿದೆ.

ಹಳೆಯ ಪದ್ಧತಿಗೆ ಅಂಟಿಕೊಂಡವರು ಈಗಲೂ ಅಂಚೆಯಲ್ಲಿ ಬಂದ ಆಹ್ವಾನಗಳನ್ನು ಅಲ್ಲಗಳೆದು ಗೊಣಗುತ್ತಾರೆ. ಆಹ್ವಾನ ಪತ್ರಿಕೆಯನ್ನು ಖುದ್ದಾಗಿ ತಂದುಕೊಡಬೇಕೆಂದು ನಿರೀಕ್ಷಿಸುವ ಜನ ಇಂದಿಗೂ ಇದ್ದಾರೆ.

**ಆಹ್ವಾನ ಪತ್ರಿಕೆಯ ಮುಖ್ಯ ಲಕ್ಷಣಗಳು**

ಆಹ್ವಾನದ ಉದ್ದೇಶ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಆಹ್ವಾನಪತ್ರಿಕೆಯ ಸ್ವರೂಪವೂ ಸಿದ್ಧವಾಗುತ್ತದೆ. ಕೌಟುಂಬಿಕ ಸಮಾರಂಭಗಳಿಗೆ ಸಂಬಂಧಿಸಿದ ಆಹ್ವಾನಪತ್ರಿಕೆಗಳಿಗೂ ಸಂಘ/ಸಂಸ್ಥೆಯ ಸಮಾರಂಭಗಳಿಗೆ, ಕಾರ್ಯಕ್ರಮಗಳಿಗೆ ಸಂಬಂಧಿಸಿದ ಆಹ್ವಾನ ಪತ್ರಿಕೆಗಳ ಸ್ವರೂಪಕ್ಕೂ ವ್ಯತ್ಯಾಸವಿರುತ್ತದೆ.

ಕಾರ್ಯಕ್ರಮವೊಂದು ಕೌಟುಂಬಿಕ ಸ್ವರೂಪದ್ದಾಗಿದ್ದಾಗ ಆಹ್ವಾನ ಪತ್ರಿಕೆಯಲ್ಲಿ ಬಂಧುಮಿತ್ರರ, ಹಿತೈಷಿಗಳ ಹೆಸರುಗಳನ್ನು ಬೇಕುಬೇಕಾದಂತೆ ಮುದ್ರಿಸಿಕೊಳ್ಳುವ ಸ್ವಾತಂತ್ರ್ಯ ವ್ಯಕ್ತಿ ಅಥವಾ ಕುಟುಂಬಕ್ಕೆ ಇರುತ್ತದೆ. ಉದಾಹರಣೆಗೆ ಯಾವುದೇ ಲಗ್ನಪತ್ರಿಕೆಯನ್ನು ಗಮನಿಸಿ, ಅದರಲ್ಲಿ ತಮ್ಮ ಸುಖಾಗಮನ ಬಯಸುವ ಬಂಧು ಮಿತ್ರರ ಒಂದು ದೊಡ್ಡ ಪಟ್ಟಿಯೇ ಇರುತ್ತದೆ.

ಆದರೆ ಸಂಘಸಂಸ್ಥೆಗಳ ಸಮಾರಂಭ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಒಂದು 'ವೈಧಾನಿಕತೆ' (Methodology) ಇದ್ದು ಅದನ್ನು ಅನುಸರಿಸಬೇಕಾಗುತ್ತದೆ.

**ಆಹ್ವಾನ ಪತ್ರಿಕೆಯ ಕೆಲವು ಮುಖ್ಯ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಹೀಗೆ ಗುರುತಿಸಬಹುದು.**

೧. ಸಮಾರಂಭವನ್ನು ಆಯೋಜಿಸಿರುವ ಸಂಘ/ಸಂಸ್ಥೆಯ ಹೆಸರು, ವಿಳಾಸ ಮೊದಲಾದ ವಿವರಗಳು, ಲಾಂಛನ(ಇದ್ದರೆ)

೨. ಸಮಾರಂಭದ ಶೀರ್ಷಿಕೆ,

೩. ಸಮಾರಂಭದ ದಿನಾಂಕ, ವಾರ, ಸಮಯ ಮತ್ತು ಸ್ಥಳ,

೪. ಭಾಗವಹಿಸಲಿರುವ ವ್ಯಕ್ತಿಗಳು – ಮುಖ್ಯ ಅತಿಥಿಗಳು, ಉದ್ಘಾಟನೆ, ಅಧ್ಯಕ್ಷತೆ ಇತ್ಯಾದಿ,

೫. ಸ್ವಾಗತದ ನುಡಿ ('ತಮಗೆ ಆತ್ಮೀಯ ಸ್ವಾಗತ', 'ನೀವೂ ಬನ್ನಿ, ಸ್ನೇಹಿತರನ್ನೂ ಕರೆತನ್ನಿ', 'ಸರ್ವರಿಗೂ ಸ್ವಾಗತ' ಇತ್ಯಾದಿ)

೬. ಆಹ್ವಾನಿಸುತ್ತಿರುವವರು – ಸಂಘ/ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕರು ಅಥವಾ ಅಧಿಕಾರಿಗಳು ಮೊದಲಾದ ವಿವರಗಳು.

ಆಹ್ವಾನಪತ್ರಿಕೆಯ ತಯಾರಿಯಲ್ಲಿ ಕಲಾತ್ಮಕವಾಗಿ ಹಲವು ಬಗೆಯ ವಿನ್ಯಾಸಗಳನ್ನು ಕಾಣಬಹುದು.

**(ಇ) ಕಾರ್ಯಕ್ರಮ ಪಟ್ಟಿ**

ಸಮಾರಂಭವೊಂದು ವ್ಯವಸ್ಥಿತವಾಗಿ ನಡೆಯಲು ಕಾರ್ಯಕ್ರಮ ಪಟ್ಟಿಯ ಅಗತ್ಯವಿದೆ. ಇದರ ಕೆಲವು ಉದ್ದೇಶಗಳನ್ನು ಸೂಚಿಸಬಹುದಾದರೆ :

೧. ಸಮಾರಂಭವು ಕ್ರಮಬದ್ಧವಾಗಿರುವಂತೆ ನೋಡಿಕೊಳ್ಳುವುದು; ಲೋಪದೋಷಗಳನ್ನು ತಡೆಯುವುದು, ಏರುಪೇರುಗಳಾಗದಂತೆ ತಡೆಯುವುದು.
೨. ಸಮಾರಂಭದಲ್ಲಿ ಯಾವುದಕ್ಕೆ ಎಷ್ಟು ಸಮಯವನ್ನು ಕೊಡಬೇಕು ಎಂದು ನಿರ್ಧರಿಸುವ ಮೂಲಕ ನಿಗದಿತ ಅವಧಿ ಎಷ್ಟು ಎಂಬುದನ್ನು ತಿಳಿದುಕೊಳ್ಳಲೂ ಅದು ಸಹಾಯಕವಾಗುತ್ತದೆ.
೩. ಸಮಾರಂಭದಲ್ಲಿ ಪಾಲ್ಗೊಳ್ಳುವ ಅತಿಥಿಗಳಿಗೆ / ಅಧ್ಯಕ್ಷರಿಗೆ ಸಮಾರಂಭದಲ್ಲಿ ತಮ್ಮ ಪಾತ್ರವೇನು, ತಮಗೆ ನೀಡಿರುವ ಅವಧಿ ಎಷ್ಟು ಎಂಬುದನ್ನು ತಿಳಿದುಕೊಳ್ಳಲೂ ಅದು ಸಹಾಯಕವಾಗುತ್ತದೆ.

ಕಾರ್ಯಕ್ರಮ ಪಟ್ಟಿಯ ಕೆಲವು ಪ್ರತಿಗಳನ್ನು ಸಮಾರಂಭದ ವೇದಿಕೆಯ ಮೇಜಿನ ಮೇಲೆ ಅತಿಥಿಗಳ ಅವಗಾಹನೆಗಾಗಿ 'ಇಡುವುದುಂಟು. ಕಾರ್ಯಕ್ರಮ ಪಟ್ಟಿಯಲ್ಲಿ ಪ್ರತಿಯೊಂದು ಅಂಶಕ್ಕೆ ನಿಗದಿಪಡಿಸಿರುವ ಸಮಯವನ್ನೂ ಕೊಡುವುದುಂಟು. ಕಾರ್ಯಕ್ರಮ ಸ್ವಲ್ಪ ಸಡಿಲ ಸ್ವರೂಪದ್ದಾದರೆ, ಅತಿಥಿಗಳಿಗೆ/ಅಧ್ಯಕ್ಷರಿಗೆ ಅವರವರ ಅವಧಿಯನ್ನು ಮೊದಲೇ ತಿಳಿಸಿ, ಪಟ್ಟಿಯಲ್ಲಿ ಸಮಯವನ್ನು ನಮೂದಿಸದೆಯೂ ಇರಬಹುದು.

**ಮಾದರಿ ಕಾರ್ಯಕ್ರಮ ಪಟ್ಟಿ :**

**ರಾಷ್ಟ್ರೀಯ ಮಹಿಳಾ ಪದವಿ ಕಾಲೇಜು**

ಬಸವನಗುಡಿ, ಬೆಂಗಳೂರು

**ವಿದ್ಯಾರ್ಥಿ ಸಾಂಸ್ಕೃತಿಕ ಸಂಘದ ಉದ್ಘಾಟನಾ ಸಮಾರಂಭ**

**ಕಾರ್ಯಕ್ರಮ**

೧. ಬೆಳಿಗ್ಗೆ ೯.೦೦ : ನಾಡಗೀತೆ –ವಿದ್ಯಾರ್ಥಿನಿಯರಿಂದ

೨. ೯.೦೫ : ಪ್ರಾರ್ಥನೆ –ಕು. ಶ್ವೇತಾ. ಅಂತಿಮ ಬಿ.ಎ

೩. ೯.೧೦ : ಸ್ವಾಗತ ಮತ್ತು ಪರಿಚಯ –ಕು. ಸ್ಮಿತಾ, ಅಂತಿಮ ಬಿ.ಕಾಂ., ವಿದ್ಯಾರ್ಥಿ ಸಂಘದ ಅಧ್ಯಕ್ಷೆ

೪. ಜ್ಯೋತಿ ಬೆಳಗುವುದರ ಮೂಲಕ ಅಥಿತಿಗಳಿಂದ
ವಿದ್ಯಾರ್ಥಿ ಸಾಂಸ್ಕೃತಿಕ ಸಂಘದ ಉದ್ಘಾಟನೆ

೫. ೯.೨೫ ಪ್ರಾಸ್ತಾವಿಕ ನುಡಿ

೬. ೯.೩೫ : ಮುಖ್ಯ ಅತಿಥಿಗಳ ಭಾಷಣ

೭. ೯.೪೫: ಅಧ್ಯಕ್ಷಭಾಷಣ

೮. ವಂದನಾರ್ಪಣೆ –ಕು. ಜೇಮ್, ಪ್ರಥಮಬಿ.ಎ. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ

೯. ೧೦.೧೦–೧೦.೪೫ –ಸಾಂಸ್ಕೃತಿಕ ಕಾರ್ಯಕ್ರಮಗಳು

---

**ಕಾರ್ಯಕ್ರಮ ನಿರೂಪಣೆ ಕು. ವಿದ್ಯಾ, ದ್ವಿತೀಯ ಬಿ.ಎ.**

## ೨. ಅಭ್ಯರ್ಥನ ಪತ್ರ/ ಸಂಕ್ಷಿಪ್ತ ವ್ಯಕ್ತಿ ವಿವರ

ಅರ್ಜಿಯನ್ನು ಬರೆಯುವ ಅಭ್ಯರ್ಥಿಯ ಉದ್ದೇಶ, ಅಗತ್ಯ ಹಾಗೂ ಅವನು ಹೊಂದಬಯಸುವ ಹುದ್ದೆಯ ಸ್ವರೂಪಕ್ಕೆ ಅನುಗುಣವಾಗಿ ಅರ್ಜಿಯ ಸ್ವರೂಪವೂ ನಿರ್ಧರಿತವಾಗುವುದರಿಂದ, ಅರ್ಜಿಗೆ ನಿಗದಿತ ಸ್ವರೂಪದ ವ್ಯಾಖ್ಯೆಯನ್ನು ಹೇಳಲಾಗದು.

ಉದಾಹರಣೆಗೆ ವಿದ್ಯಾವಂತ ನಿರುದ್ಯೋಗಿ ಪದವೀಧರನೊಬ್ಬ ಬರೆಯುವ ಅರ್ಜಿಯ ಸ್ವರೂಪಕ್ಕೂ, ಈಗಾಗಲೇ ಉದ್ಯೋಗದಲ್ಲಿರುವ ಅಭ್ಯರ್ಥಿ ಇನ್ನೂ ಉನ್ನತವಾದ ಹುದ್ದೆಯನ್ನು ಹೊಂದುವ ಸಲುವಾಗಿ ಬರೆದುಕೊಂಡ ಅರ್ಜಿಯ ಸ್ವರೂಪಕ್ಕೂ ಸಹಜವಾಗಿಯೇ ವ್ಯತ್ಯಾಸವಿರುತ್ತದೆ. ಕೆಲವೊಮ್ಮೆ ಪತ್ರಿಕೆಯೊಂದರಲ್ಲಿ ಪ್ರಕಟವಾದ ಔದ್ಯೋಗಿಕ ಜಾಹೀರಾತಿಗೆ ಅದನ್ನು ಪ್ರಕಟಪಡಿಸಿದ ಸಂಸ್ಥೆಯ ಸೂಚನೆಗಳಿಗೆ ಅನುಗುಣವಾಗಿ ಅರ್ಜಿಯ ಸ್ವರೂಪ ರೂಪುಗೊಳ್ಳುತ್ತದೆ.

ಔದ್ಯೋಗಿಕ ಜಾಹೀರಾತನ್ನು ಅನುಸರಿಸಿ, ಅಥವಾ ಖಾಲಿ ಇರುವ ಕೆಲಸದ ಸ್ವರೂಪಕ್ಕೆ ಅನುಗುಣವಾಗಿ, ಹುದ್ದೆಗೆ ಬೇಕಾದ ಮಾಹಿತಿಯನ್ನು ಒದಗಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ ಸಾಮರ್ಥ್ಯ ಹಾಗೂ ಅನನ್ಯತೆಗಳು ವ್ಯಕ್ತವಾಗುವಂತೆ ನೋಡಿಕೊಳ್ಳಬೇಕು. ಆಧುನಿಕ ಯುಗದ ಸ್ಪರ್ಧೆ ಹಾಗೂ ಪೈಪೋಟಿಗಳ ನಡುವೆಯೂ ಅಭ್ಯರ್ಥಿ ತನ್ನ ಅರ್ಜಿಯನ್ನು ಗಮನ ಸೆಳೆಯುವಂತೆ, ತಾನೇ ಆ ಹುದ್ದೆಯನ್ನು ಹೊಂದುವಂತೆ ಬರೆಯುವ ಕೌಶಲವನ್ನು ರೂಢಿಸಿಕೊಳ್ಳಬೇಕು.

ಒಂದು ಒಳ್ಳೆಯ ಅರ್ಜಿ, ಬರೆದವನ ಸಾಮರ್ಥ್ಯ, ಅನುಭವ, ನಡತೆ, ಇವೆಲ್ಲವನ್ನೂ ಒಟ್ಟಿಗೆ ತಿಳಿಸುವಂತಿರಬೇಕು. ಅಭ್ಯರ್ಥಿಯ ಯೋಗ್ಯತೆ, ಗುಣಮಟ್ಟಗಳನ್ನು ಅಭ್ಯರ್ಥಿಯ ಅರ್ಜಿಯೇ ತಿಳಿಯಪಡಿಸುವುದು ಎಂಬುದನ್ನು ಗಮನದಲ್ಲಿಡಬೇಕು.

ಅರ್ಜಿ ಉದ್ಯೋಗದ ಸಲುವಾಗಿಯೇ ಬರೆದದ್ದಾಗಿದ್ದಲ್ಲಿ ಅದು

೧. ಓದುಗರ ಗಮನವನ್ನು ಸೆಳೆಯುವಂತಿರಬೇಕು.

೨. ಇದೇ ಅಭ್ಯರ್ಥಿಗೇ ಉದ್ಯೋಗವನ್ನು ನೀಡಬೇಕೆಂಬ ಇಚ್ಛೆಯನ್ನು ಉಂಟಾಗುವಂತೆ ಮಾಡಬೇಕು.

೩. ಈ ಇಚ್ಛೆ ಸ್ಥಿರವಾಗುವಂತೆ ಅಭ್ಯರ್ಥಿಯ ಯೋಗ್ಯತೆಯನ್ನು ಉದ್ಯೋಗದಾತನಿಗೆ/ಸಂಸ್ಥೆಗೆ ಮನವರಿಕೆ ಮಾಡಿಕೊಡುವಂತೆ ಇರಬೇಕು.

೪. ಉದ್ಯೋಗ ನೀಡಲು ತೀರ್ಮಾನಿಸುವಂತೆ ಅಥವಾ ಅದಕ್ಕಾಗಿ ಸಂಬಂಧಿಸಿದ ಕ್ರಮ ಕೈಗೊಳ್ಳುವಂತೆ ಮಾಡಲು ಬೇಕಾದ ಪ್ರೇರಣೆಯನ್ನು ಅರ್ಜಿ ಒದಗಿಸುವಂತಿರಬೇಕು.

ಉದ್ಯೋಗಕ್ಕೆ ಸಂಬಂಧಿಸಿದ ಅಭ್ಯರ್ಥನ ಪತ್ರದಲ್ಲಿ ಹಲವು ವಿಧಗಳನ್ನು ಗುರುತಿಸುವುದುಂಟು. ಉದ್ಯೋಗ ಜಾಹಿರಾತಿಗೆ ಉತ್ತರವಾಗಿ ಸಲ್ಲಿಸಿರುವುದನ್ನು 'ಜಾಹಿರಾತು ಆಧಾರಿತ ಅಭ್ಯರ್ಥನಗಳು' ಎನ್ನಬಹುದು. ಹಾಗೂ ಅಭ್ಯರ್ಥಿ ತಾನೇ ಸ್ವಯಂ ಪ್ರೇರಣೆಯಿಂದ ಸಲ್ಲಿಸಿದ ಅಭ್ಯರ್ಥನ 'ಸ್ವಯಂ ನಿವೇಧಿತ ಅಭ್ಯರ್ಥನ'ವಾಗುತ್ತದೆ. ಇನ್ನು ಸ್ವರೂಪದ ದೃಷ್ಟಿಯಿಂದ ಗಮನಿಸುವುದಾದರೆ, ಪತ್ರರೂಪದ ಅಭ್ಯರ್ಥನಗಳನ್ನು ಬರೆಯುವುದುಂಟು; ಅಭ್ಯರ್ಥಿ ಈ ಮೊದಲೇ ಪ್ರತ್ಯೇಕವಾಗಿ ಸಿದ್ಧಪಡಿಸಿಕೊಂಡಿರುವ 'ಸಂಕ್ಷಿಪ್ತ ವ್ಯಕ್ತಿ ವಿವರಗಳನ್ನು' (Resume) ಜೊತೆ ಪತ್ರದೊಂದಿಗೆ (Covering Latter) ಲಗತ್ತಿಸಿ ಸಲ್ಲಿಸುವುದು ಇನ್ನೊಂದು ಬಗೆ. ಕೆಲವೊಮ್ಮೆ ಉದ್ಯೋಗವಕಾಶಕ್ಕಾಗಿ ಜಾಹೀರಾತನ್ನು ನೀಡಿದ ಸಂಸ್ಥೆ ನಿಗಧಿತ ಅರ್ಜಿಯ ನಮೂನೆಯಲ್ಲಿ ಅಭ್ಯರ್ಥನವನ್ನು ಸಲ್ಲಿಸಬೇಕೆಂದು ಸೂಚಿಸುವುದುಂಟು.

ಅಭ್ಯರ್ಥನದ ಒಂದೆರಡು ಮಾದರಿಗಳನ್ನು ಮುಂದೆ ಕೊಡಲಾಗಿದೆ.

**೧. ಉದ್ಯೋಗ ಜಾಹೀರಾತಿಗೆ ಉತ್ತರವಾಗಿ ಖಾಸಗಿಯಾಗಿ ಸಲ್ಲಿಸಿದ ಪತ್ರರೂಪದ ಅಭ್ಯರ್ಥನ**

ದೃಢಾಂಗರಾವ್
೯೫, ೪ನೇ ರಸ್ತೆ
ಕೋಟಿ ಬಡಾವಣೆ
ನವದುರ್ಗ
ದಿನಾಂಕ : ೧೦-೭-೨೦೦೮

ವ್ಯವಸ್ಥಾಪಕರು
ಶ್ರೀ ಮಾರ್ಕಂಡೇಯ ಔಷಧಿ ತಯಾರಕರು
ಶಾಶ್ವತ ನಿಲಯ, ಅಮೃತನಗರ
ದೇವನೂರು.

— ಇವರಿಗೆ

ಮಾನ್ಯರೆ,

ವಿಷಯ : ಮಾರಾಟ ಪ್ರತಿನಿಧಿ ಹುದ್ದೆಗೆ ಅರ್ಜಿ

ಉಲ್ಲೇಖ : ದಿನಾಂಕ ೯-೭-೨೦೦೮ ರಂದು 'ಜನವಾಣಿ'ಯಲ್ಲಿ ಪ್ರಕಟವಾದ ತಮ್ಮ ಜಾಹೀರಾತು,

'ಜನವಾಣಿ ಪತ್ರಿಕೆ' ಯಲ್ಲಿ ತಮ್ಮ ಸಂಸ್ಥೆಯ ಔಷಧಿಗಳನ್ನು ಮಾರಾಟ ಮಾಡಲು ಮಾರಾಟದ ಪ್ರತಿನಿಧಿಗಳು ಸಂಬಳದ ಮೇಲೆ ಅಥವಾ ಕಮೀಷನ್ ಆಧಾರದ ಮೇಲೆ ಬೇಕಾಗಿದ್ದಾರೆ ಎಂಬ ಮೇಲ್ಕಂಡ ಉಲ್ಲೇಖಕ್ಕೆ ಅನುಗುಣವಾಗಿ ಈ ಅರ್ಜಿಯನ್ನು ಬರೆಯುತ್ತಿದ್ದೇನೆ.

ಬಿ.ಎಸ್ಸಿ, ಪದವಿ ಪಡೆದ ನಂತರ ಡಿ. ಫಾರ್ಮ ಪರೀಕ್ಷೆಯಲ್ಲಿ ಉತ್ತೀರ್ಣನಾದ ನಾನು ಕಳೆದ ಮೂರು ವರ್ಷಗಳಿಂದ 'ಆರೋಗ್ಯ ಮೆಡಿಕಲ್ ಸ್ಟೋರ್‌ನಲ್ಲಿ ಒಪ್ಪೊತ್ತಿನ ಮಾರಾಟ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಬಿಡುವಿನ ವೇಳೆಯಲ್ಲಿ 'ದಿವ್ಯ ಸಂಜೀವಿನಿ' ಮಾತ್ರೆ ಮತ್ತು ದೀರ್ಘಾಯು ಟಾನಿಕ್ ತಯಾರಿಕೆಗಳ ಚಿರಂಜೀವಿ ಔಷಧಿ ಕಂಪನಿ ಪ್ರತಿನಿಧಿಯಾಗಿ ನಮ್ಮ ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಾರಾಟ ಪ್ರತಿನಿಧಿಯಾಗಿಯೂ ಕಾರ್ಯನಿರ್ವಹಿಸಿದ್ದೇನೆ. ಪ್ರಸಿದ್ಧ ಔಷಧಿ ತಯಾರಿಕಾ ಸಂಸ್ಥೆಯ ಮಾರಾಟ ಪ್ರತಿನಿಧಿಯಾಗಿ ದೇಶಾದ್ಯಂತ ಸಂಚರಿಸಿ ಅನುಭವ ಪಡೆಯಲು ಉತ್ಸುಕನಾಗಿದ್ದೇನೆ.

ತಮ್ಮ ಕಂಪನಿಯಲ್ಲಿ ಅಂಥ ಅವಕಾಶವಿದೆ ಎಂದು ತಿಳಿದು ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ. ಹಿಂದಿ, ಇಂಗ್ಲೀಷ್, ಕನ್ನಡ, ತಮಿಳು, ತೆಲುಗು ಭಾಷೆಗಳನ್ನು ಓದಲು ಬರೆಯಲು ಮಾತನಾಡಲು ಬಲ್ಲೆ. ಮೇಲೆ ತಿಳಿಸಿದಂತೆ ಮೆಡಿಕಲ್ಸ್ ಸ್ಟೋರ್ಸ್‌ನಲ್ಲಿ ಮತ್ತು ಕಂಪನಿ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿರುವುದರಿಂದ ತಮ್ಮ ಸಂಸ್ಥೆಯಲ್ಲಿ ಮಾರಾಟ ಪ್ರತಿನಿಧಿಯಾಗಲು ಸಾಕಷ್ಟು ಅರ್ಹತೆ ಅನುಭವಗಳಿವೆ ಎಂದು ಭಾವಿಸಿದ್ದೇನೆ. ಚಿರಂಜೀವಿ ಔಷಧಿ ಮುಚ್ಚಿರುವುದರಿಂದಲೂ, ಮೆಡಿಕಲ್ ಸ್ಟೋರ್ಸ್ ನಲ್ಲಿ ಪೂರ್ಣೋದ್ಯೋಗಕ್ಕೆ ಬೇರೆಯವರನ್ನು ನೀಮಿಸಿಕೊಂಡಿರುವುದರಿಂದಲೂ ಈಗ ನಾನು ಪೂರ್ಣ ಮಾರಾಟಗಾರನಾಗಿ ಕಾರ್ಯನಿರ್ವಹಿಸಲು ಸಿದ್ದನಾಗಿದ್ದೇನೆ. ಮತ್ತೊಂದು ವಿಷಯ ಲೋಕಾನುಭವ ರೈಲು ಯಾತ್ರಾ ಕಂಪನಿಯಲ್ಲಿ ಮಾರ್ಗದರ್ಶಕನಾಗಿ ಅಖಿಲ ಭಾರತ ಪ್ರವಾಸವನ್ನು ಹಲವಾರು ಬಾರಿ ಕೈಗೊಂಡಿರುವುದರಿಂದ ಜನಸಂಪರ್ಕ ಹಾಗೂ ಸ್ಥಳಗಳ ಪರಿಚಯ ನನಗೆ ಚೆನ್ನಾಗಿ ಆಗಿದೆ. ನನ್ನ ಪೂರ್ವಾನುಭವದ ಪ್ರಮಾಣ ಪತ್ರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದೇನೆ.

ತಮ್ಮ ಜಗತ್ಪ್ರಸಿದ್ಧ ಸಂಸ್ಥೆಯಲ್ಲಿ ಸೇವೆ ಸಲ್ಲಿಸಲು ಅವಕಾಶ ನೀಡುವುದರಿಂದ ಶ್ರೇಷ್ಠ ಮಾರಾಟಗಾರ ಪ್ರತಿನಿಧಿಯೆನಿಸಿಕೊಳ್ಳುವ, ಆ ಮೂಲಕ ತಮಗೆ ಕೀರ್ತಿ ತರುವ ಅವಕಾಶವನ್ನು ಒದಗಿಸುವಿರೆಂದು ನಂಬಿದ್ದೇನೆ.

ವಂದನೆಗಳೊಡನೆ,

ತಮ್ಮ ಸೇವಾಕಾಂಕ್ಷಿ
ದೃಢಾಂಗರಾವ್.

❖ **ಆಕರ : ಎಂ.ಆರ್. ಲಕ್ಷ್ಮಿದೇವಿ ಮತ್ತು ಜಿ.ಅಬ್ದುಲ್ ಬಷೀರ್: ವಾಣಿಜ್ಯ ಕನ್ನಡ ಪರಿಚಯ. ಪು.೧೪೬**

## ಸಂಕ್ಷಿಪ್ತ ವ್ಯಕ್ತಿವಿವರ (Resume)

ಸಂಕ್ಷಿಪ್ತ ವ್ಯಕ್ತಿ ವಿವರದ ವಿಚಾರವನ್ನು ಹಿಂದೆ ಪ್ರಸ್ತಾಪಿಸಿದೆ. ಇದು ಇಂದು ಹೆಚ್ಚಾಗಿ ಚಾಲ್ತಿಯಲ್ಲಿರುವ ಕ್ರಮವಾಗಿದ್ದು ಸ್ವರೂಪ ಹಾಗೂ ವಸ್ತುಗಳ ದೃಷ್ಟಿಯಿಂದ ಸಾಕಷ್ಟು ವೈವಿಧ್ಯಗಳನ್ನು ಹೊಂದಿದೆ, ಆದರೆ ಇಲ್ಲಿ ಹೆಚ್ಚಾಗಿ ಅಂಗೀಕೃತವಾಗಿರುವ ಮಾದರಿಯೊಂದರ ಸ್ಥೂಲ ಲಕ್ಷಣಗಳನ್ನು ನೀಡಲಾಗಿದೆ. ಸಂಕ್ಷಿಪ್ತ ವ್ಯಕ್ತಿವಿವರದ ಮುಖ್ಯಾಂಶಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. **ಶೀರ್ಷಿಕೆ :** ಇದು 'ಸಂಕ್ಷಿಪ್ತ ವ್ಯಕ್ತಿವಿವರ' ಎಂಬ ಶಿರೋನಾಮೆಯೊಂದಿಗೆ ಅಭ್ಯರ್ಥಿಯ ವಿಳಾಸವೇ ಮೊದಲಾದ ವಿವರಗಳನ್ನು ಒಳಗೊಂಡಿರುತ್ತದೆ.

೨. **ಲಭ್ಯತೆಯ ದಿನಾಂಕ** : ತಾನು ಯಾವ ದಿನಾಂಕದಿಂದ ಉದ್ಯೋಗಕ್ಕೆ ಲಭ್ಯವಿದ್ದೇನೆ ಎಂಬುದನ್ನು ಅಭ್ಯರ್ಥಿ ಇಲ್ಲಿ ತಿಳಿಸಬೇಕು.

ಉದಾ: 'ಜುಲೈ ೧, ೨೦೦೮' ಅಥವಾ 'ತಕ್ಷಣ'

೩. **ಧ್ಯೇಯ** : ಸಂಪಾದನೆಗಾಗಿ ಉದ್ಯೋಗ ಎಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಬಹುದಾದರೂ ಒಬ್ಬ ಅಭ್ಯರ್ಥಿ ತನ್ನ ಉದ್ಯೋಗದ ಹಿನ್ನೆಲೆಯಲ್ಲಿ ಹೊಂದಿರುವ ವಿಶಾಲ ದೃಷ್ಟಿಕೋನ ಉದ್ಯೋಗದಾತನಿಗೆ ಮುಖ್ಯವಾಗುತ್ತದೆ. ಅದನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಉದಾಹರಣೆಗೆ, ಕನ್ನಡ ಉಪನ್ಯಾಸಕ ಹುದ್ದೆಯ ಅಭ್ಯರ್ಥಿಯೊಬ್ಬ ಬರೆಯಬಹುದಾದ ಮಾತು : 'ಕನ್ನಡ ಸಾಹಿತ್ಯದ ಬೋಧನೆ ಮತ್ತು ಸಂಶೋಧನೆಗಳಲ್ಲಿ ಹೊಸ ಆಯಾಮಗಳ ಅನ್ವೇಷಣೆ'

೪. **ಶಿಕ್ಷಣದ ವಿವರಗಳು** : ಇವನ್ನು ಸಾಮಾನ್ಯವಾಗಿ ಕಾಲಾನುಕ್ರಮದಲ್ಲಿ ಕೊಡುವುದು ರೂಢಿ. ಅಧ್ಯಯನದ ವಿಶೇಷ ಕ್ಷೇತ್ರವನ್ನು ನಮೂದಿಸುವುದು ಅಪೇಕ್ಷಣೀಯ.

೫. **ಉದ್ಯೋಗದ ಅನುಭವ :** ಅಭ್ಯರ್ಥಿ ತನಗೆ ಯಾವ ಉದ್ಯೋಗದ ಬಗೆಗೆ ವಿಶೇಷ ಪರಿಣತಿ ಮತ್ತು ಅನುಭವಗಳಿವೆ ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಬೇಕು.

**೬. ಚಟುವಟಿಕೆಗಳು** : ಇದನ್ನು ಸಂಕ್ಷಿಪ್ತ ವ್ಯಕ್ತಿ ವಿವರದ ಮುಖ್ಯ ಭಾಗವೆಂದು ಪರಿಗಣಿಸುವುದುಂಟು. ವಿದ್ಯಾರ್ಹತೆಯೊಂದನ್ನು ಪಡೆದ ವ್ಯಕ್ತಿ ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ತನ್ನನ್ನು ಯಾವ ರೀತಿ ತೊಡಗಿಸಿಕೊಂಡಿದ್ದಾನೆ ಎಂಬ ಸಂಗತಿ ಉದ್ಯೋಗದಾತನ ಮೇಲೆ ಪ್ರಭಾವ ಬೀರುವ ಸಂಗತಿಯಾಗಿದೆ.

**೭. ವಿಶೇಷ ಸಾಧನೆ / ಪಡದ ಗೌರವ ಅಥವಾ ಪ್ರಶಸ್ತಿಗಳು.**

**೮. ಆಸಕ್ತಿಗಳು** : ಖಾಸಗಿಯಾದ ಆಸಕ್ತಿಗಳಿಗೂ ಉದ್ಯೋಗಕ್ಕೂ ಏನು ಸಂಬಂಧ ಎಂದು ಕೇಳಬಹುದು. ಆದರೆ–ಅಭ್ಯರ್ಥಿಯ ಆಸಕ್ತಿಗಳೇನು ಎನ್ನುವುದರ ಮೂಲಕ ಉದ್ಯೋಗ ಸಂದರ್ಶಕರು ಆತನ ಮನೋಧರ್ಮ ಹಾಗೂ ವ್ಯಕ್ತಿತ್ವ ಅರಿಯಲು ಪ್ರಯತ್ನಿಸುವುದುಂಟು, ಆಸಕ್ತಿಗಳಲ್ಲೂ ಕೆಲವು ಸ್ವ–ಕೇಂದ್ರಿತ (ಉದಾ, ಪುಸ್ತಕ ಓದುವುದು) : ಕೆಲವು ಸಮುದಾಯ ಕೇಂದ್ರಿತ (ಉದಾ : ಪುಟ್ಬಾಲ್), ಈ ಎರಡೂ ಬಗೆಯ ಆಸಕ್ತಿಗಳಲ್ಲಿ ಸಮತೋಲನವನ್ನು ಹೊಂದಿರುವವರು ಆದರ್ಶ ಉದ್ಯೋಗಿಯಾಗಬಲ್ಲರೆಂದು ಕೆಲವರು ಭಾವಿಸುವುದುಂಟು.

**೯. ವೈಯಕ್ತಿಕ** : ಇಲ್ಲಿ ಅಭ್ಯರ್ಥಿಯ ವಯಸ್ಸು ಪುರುಷ/ಸ್ತ್ರೀ, ವಿವಾಹಿತ/ಅವಿವಾಹಿತ, ಆರೋಗ್ಯ ಮೊದಲಾದವನ್ನು ನಮೂದಿಸುವುದುಂಟು.

**೧೦. ಪರಾಮರ್ಶನ :** ಅಭ್ಯರ್ಥಿಯ ಸಾಮರ್ಥ್ಯ–ವ್ಯಕ್ತಿತ್ವಗಳ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ನೀಡಬಲ್ಲ ಒಬ್ಬರು ಅಥವಾ ಇಬ್ಬರು ಗಣ್ಯ ವ್ಯಕ್ತಿಗಳ ಹೆಸರನ್ನು ಇಲ್ಲಿ ಸೂಚಿಸುವುದು ವಾಡಿಕೆ. ಈ ವ್ಯಕ್ತಿಗಳು ಅಭ್ಯರ್ಥಿಯ ಸಂಬಂಧಿಕರಾಗಿರಬಾರದು, ಅಭ್ಯರ್ಥಿಯ ಶಿಕ್ಷಣ / ಉದ್ಯೋಗ ತರಬೇತಿಗೆ ಸಂಬಂಧಿಸಿದ್ದರೆ ಒಳ್ಳೆಯದು. ಆ ವ್ಯಕ್ತಿಗಳ ಅನುಮತಿಯನ್ನು ಪಡೆದ ಬಳಿಕವೇ ಅವರ ಹೆಸರನ್ನು ಪರಾಮರ್ಶನೆಯಲ್ಲಿ ಸೇರಿಸಬೇಕು.

ಈ ಮೇಲೆ ಹೇಳಿರುವ ಅಂಶಗಳು ಸಂಕ್ಷಿಪ್ತ ವ್ಯಕ್ತಿವಿವರದ ಪ್ರಾಥಮಿಕ ಅಗತ್ಯಗಳು. ಇವಲ್ಲದೆ ನಿರ್ದಿಷ್ಟ ಉದ್ಯೋಗಳಿಗೆ ಸಂಬಂಧಿಸಿದಂತೆ ಕೆಲವು ನಿರ್ದಿಷ್ಟ ಬಗೆಯ ಮಾಹಿತಿಗಳನ್ನು ಒದಗಿಸಬೇಕಾಗಿ ಬರಬಹುದು. ಉದಾಹರಣೆಗೆ – ವಿಶೇಷ ಕೌಶಲಗಳು, ತರಬೇತಿ, ಸಂಸ್ಥೆಗಳ ಸದಸ್ಯತ್ವ ಇವೇ ಮೊದಲಾದವು. ಔಚಿತ್ಯಕ್ಕೆ ಅನುಗುಣವಾಗಿ ಅಗತ್ಯವಿರುವ ಸಂಗತಿಗಳನ್ನು ಸೇರಿಸಬೇಕಾಗುತ್ತದೆ.

ಕನ್ನಡ ಉಪನ್ಯಾಸಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಬಯಸುವ ಅಭ್ಯರ್ಥಿಯೊಬ್ಬರ ಸಂಕ್ಷಿಪ್ತ ವ್ಯಕ್ತಿವಿವರ ಮಾದರಿಯೊಂದನ್ನು ಕೆಳಗೆ ಕೊಟ್ಟಿದೆ.

**ಸಂಕ್ಷಿಪ್ತ ವ್ಯಕ್ತಿವಿವರ**

**ಎಂ.ವಿದ್ಯಾ**

**೯೯೬, ೧೫ನೇ ಕ್ರಾಸ್, ಕುಮಾರಸ್ವಾಮಿ ಲೇಔಟ್, ಬೆಂಗಳೂರು–೫೬೦ ೦೭೮**

**ದೂರವಾಣಿ: ೦೮೦–೨೬೬೬೭೨೦೦,೯೮೪೪೯೦೬೭೮೦**

**ಇ–ಅಂಚೆ-** mvidya@gmail.com

————————————————————————

**ಲಭ್ಯತೆ** : ಜುಲೈ ೧, ೨೦೦೮

**ಧ್ಯೇಯ** : ಕನ್ನಡ ಸಾಹಿತ್ಯದ ಬೋಧನೆ ಮತ್ತು ಸಂಶೋಧನೆಗಳಲ್ಲಿ ಹೊಸ ಆಯಾಮಗಳ ಅನ್ವೇಷಣೆ

**ಶಿಕ್ಷಣ** : ೨೦೦೨–೨೦೦೫: ಬಿ.ಎ. – ಇತಿಹಾಸ, ಅರ್ಥಶಾಸ್ತ್ರ, ಕನ್ನಡ : ಎ.ಪಿಎಸ್, ಕಲೆ ಮತ್ತು ವಿಜ್ಞಾನ ಕಾಲೇಜು, ಬೆಂಗಳೂರು; ಪ್ರಥಮ ದರ್ಜೆ. ೨೦೦೫–೨೦೦೭ : ಎಂ.ಎ.– ಕನ್ನಡ ; ಸಾಹಿತ್ಯಕ ಅಧ್ಯಯನ ಮತ್ತು ಭಾಷಾ ವಿಜ್ಞಾನ ವಿಶೇಷ ವಿಷಯಗಳು. ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ಪ್ರಥಮ ದರ್ಜೆ. ೨೦೦೫ : ಪತ್ರಿಕೋದ್ಯಮದಲ್ಲಿ ಪಿ.ಯು.ಸಿ ಅನಂತರದ ಡಿಪ್ಲೋಮ; ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ. ದ್ವಿತೀಯ ದರ್ಜೆ.

**ಉದ್ಯೋಗದ ಅನುಭವ** : ಜ್ಞಾನದೀಪ ಪದವಿ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕಿ (೨೦೦೭–೨೦೦೮)

**ಚಟುವಟಿಕೆಗಳು** :
೧. ವಿದ್ಯಾರ್ಥಿ– ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡನೆ
೨. ಅಂತರ ಕಾಲೇಜು ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವಿಕೆ,

**ವಿಶೇಷ ಸಾಧನೆ / ಪ್ರಶಸ್ತಿ** :
೧. ಉದಯೋನ್ಮುಖ ಲೇಖಕಿ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೩೦೦೨
‘
೨. ಉಮೇಶ, ರುದ್ರ ಉತ್ತಮ ನಟನಾ ಪ್ರಶಸ್ತಿ, ಅಂತರ ಕಾಲೇಜು ನಾಟಕ ಸ್ಪರ್ಧೆ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೪
೩. ಅಂತರ ಕಾಲೇಜು ಕವನ, ವಿಮರ್ಶೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಎ.ಪಿ.ಎಸ್. ಕಲೆ ಮತ್ತು ವಿಜ್ಞಾನ ಕಾಲೇಜು, ಬೆಂಗಳೂರು, ೨೦೦೩,

**ಆಸಕ್ತಿಗಳು** : ಸಾಹಿತ್ಯ, ಸಂಗೀತ, ನಾಟಕ, ಚೆಸ್

**ವೈಯಕ್ತಿಕ** : ವಯಸ್ಸು ೨೪ ವರ್ಷ, ಸ್ತ್ರೀ, ಅವಿವಾಹಿತೆ, ಉತ್ತಮ ಆರೋಗ್ಯ

**ಪರಾಮರ್ಶನ** :
೧. ಪ್ರೊ.ಕೆ.ಎಸ್. ಮಧುಸೂದನ,
ನಿವೃತ್ತ ಪ್ರಾಂಶುಪಾಲರು, ಎ.ಪಿ.ಎಸ್. ಕಲೆ ಮತ್ತು ವಿಜ್ಞಾನ ಕಾಲೇಜು, ಬೆಂಗಳೂರು
೨. ಡಾ. ಬಸವರಾಜ ಕಲ್ಗುಡಿ
ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಪ್ರಶ್ನೆಗಳು:**

೧. ಕೆಳಗಿನ ವಿದ್ಯಾರ್ಹತೆ ಹಾಗೂ ಹುದ್ದೆಗಳನ್ನು ಗಮನದಲ್ಲಿರಿಸಿಕೊಂಡು ಅಭ್ಯರ್ಥನ ಪತ್ರ – ಸಂಕ್ಷಿಪ್ತ ವ್ಯಕ್ತಿ ವಿವರ– ಜೊತೆ ಪತ್ರಗಳು – ಇವನ್ನು ಸಿದ್ಧಪಡಿಸಿ

| | |
|---|---|
| – ಬಿ.ಎ.ಪದವಿ | : ಆಡಳಿತ ಸಹಾಯಕರು |
| – ಬಿ.ಕಾಂ ಪದವಿ | : ಕಛೇರಿ ಸಹಾಯಕರು |
| – ಬಿ.ಕಾಂ ಪದವಿ | : ಸಹಾಯಕ ಲೆಕ್ಕಾಧಿಕಾರಿ |
| – ಪದವಿ ಮತ್ತು ಬಿ.ಇಡಿ | : ಶಿಕ್ಷಕರು |
| – ಎಂ.ಎ. / ಎಂ.ಕಾಂ / ಎಂ.ಎಸ್ಸಿ | : ಕಾಲೇಜು ಉಪನ್ಯಾಸಕರು |
| – ಪಿ.ಯು.ಸಿ. ಮತ್ತು ಕಂಪ್ಯೂಟರ್ ಶಿಕ್ಷಣ | : ಕಂಪ್ಯೂಟರ್ ಸಿಬ್ಬಂದಿ |
| – ಕಂಪ್ಯೂಟರ್ ತಂತ್ರಜ್ಞಾನದಲ್ಲಿ ಪದವಿ | : 'ಸೂಕ್ತ' ಹುದ್ದೆ |

## ೩. ವಿದ್ಯಾರ್ಥಿಗಳು ಕಾಲೇಜಿಗೆ / ವಿಶ್ವವಿದ್ಯಾಲಯಕ್ಕೆ ಬರೆಯುವ ಪತ್ರಗಳು :

ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅವಧಿಯಲ್ಲಿ ಕಾಲೇಜಿನೊಂದಿಗೆ / ವಿಶ್ವವಿದ್ಯಾಲಯದೊಂದಿಗೆ ಹಲವು ಬಗೆಯ ಪತ್ರವ್ಯವಹಾರವನ್ನು ಮಾಡಬೇಕಾದ ಸಂದರ್ಭವೂದಗುತ್ತದೆ. ಈ ಪತ್ರಗಳೂ ವ್ಯಾವಹಾರಿಕ ಉದ್ದೇಶದ ಔಪಚಾರಿಕ ಪತ್ರಗಳೇ ಆಗಿರುವುದರಿಂದ ಪತ್ರಗಳ ವಿನ್ಯಾಸದ ಬಗ್ಗೆ ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ. ಆದರೆ ಪ್ರತ್ಯೇಕ ಉದ್ದೇಶಕ್ಕೆ ಅನುಗುಣವಾಗಿ ಸಂಬೋಧಿಸಬೇಕಾದ ವ್ಯಕ್ತಿ ಮತ್ತು ಒಕ್ಕಣೆಯ ಸ್ವರೂಪದ ಬಗ್ಗೆ ತಿಳಿಯುವ ಅಗತ್ಯವಿದೆ.

ಕಾಲೇಜಿನ ಮುಖ್ಯಸ್ಥರು ಪ್ರಾಂಶುಪಾಲರಾಗಿರುವುದರಿಂದ ಎಲ್ಲ ಪತ್ರಗಳೂ ಅವರನ್ನೇ ಉದ್ದೇಶಿಸಬೇಕು. ಒಂದು ವೇಳೆ ತರಗತಿಯ ಅಧ್ಯಾಪಕರ ಮೂಲಕವಾಗಿ ಯಾವುದಾದರೂ ಸಂಗತಿಯನ್ನು ಪ್ರಾಂಶುಪಾಲರ ಗಮನಕ್ಕೆ ತರಬೇಕಾದರೆ, ಹೀಗೆ ಬರೆಯಬೇಕು.

ಪ್ರಾಂಶುಪಾಲರು ದಿನಾಂಕ :
ಜ್ಞಾನದೀಪ ಪದವಿ ಕಾಲೇಜು,
ಬೆಂಗಳೂರ

– ಇವರಿಗೆ

ತರಗತಿಯ ಅಧ್ಯಾಪಕರು
ಬಿ.ಕಾಂ, ಮೂರನೇ ಸೆಮಿಸ್ಟರ್ 'ಎ' ವಿಭಾಗ
ಜ್ಞಾನದೀಪ ಪದವಿ ಕಾಲೇಜು ಬೆಂಗಳೂರು

–ಇವರ ಮೂಲಕ

ವಿದ್ಯಾರ್ಥಿಗಳು ವ್ಯಾಸಂಗದ ಅವಧಿಯಲ್ಲಿ ಬರೆಯಬೇಕಾಗಿ ಬರಬಹುದಾದ ಪತ್ರವ್ಯವಹಾರದ ಕೆಲವು ಮಾದರಿಗಳನ್ನು ಸ್ಥೂಲವಾಗಿ ಹೀಗೆ ಗುರುತಿಸಬಹುದು.

– ವ್ಯಾಸಂಗ ಪ್ರಮಾಣ ಪತ್ರಕ್ಕಾಗಿ ಕೋರಿಕೆ
– ಶುಲ್ಕ ರಿಯಾಯಿತಿಗಾಗಿ ಕೋರಿಕೆ
– ಶುಲ್ಕವನ್ನು ಕಂತುಗಳಲ್ಲಿ ಪಾವತಿಸಲು ಅನುಮತಿ ಕೋರುವ ಪತ್ರ
– ದೀರ್ಘಾವಧಿ ಗೈರುಹಾಜರಿಗೆ ಅನುಮತಿ ಕೋರುವ ಪತ್ರ
– ಪರೀಕ್ಷಾ ಫಲಿತಾಂಶದಲ್ಲಿ ಆಗಿರಬಹುದಾದ ಲೋಪದೋಷಗಳನ್ನು ಪ್ರಾಂಶುಪಾಲರ ಮೂಲಕ ವಿಶ್ವವಿದ್ಯಾಲಯದ ಗಮನಕ್ಕೆ ತರಲು ಬರೆಯುವ ಪತ್ರ
– ಸಾಂದರ್ಭಿಕ ಅಗತ್ಯಗಳಿಗೆ ಅನುಗುಣವಾಗಿ ಇನ್ನಾವುದೇ ಪ್ರಮಾಣ ಪತ್ರಗಳನ್ನು ಪಡೆಯಲು ಬರೆಯುವ ಪತ್ರಗಳು
– ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ನೀಡಬೇಕೆಂದು ಕೋರುವ ಪತ್ರ

**ಪತ್ರಗಳ ಒಂದೆರಡು ಮಾದರಿಗಳನ್ನು ಮುಂದೆ ಕೊಡಲಾಗಿದೆ.**

**೧. ಶುಲ್ಕವನ್ನು ಕಂತುಗಳಲ್ಲಿ ಕಟ್ಟಲು ಕೋರಿಕೆ.**

ಎನ್.ವೀರೇಶ್
ಬಿ.ಕಾಂ, ಮೂರನೇ ಸೆಮೆಸ್ಟ
ಎಸ್.ಜೆ.ಇ.ಎಸ್. ಪದವಿ ಕಾಲೇಜು
ಬೆಂಗಳೂರು
ಜುಲೈ ೧, ೨೦೦೮

ಪ್ರಾಂಶುಪಾಲರು
ಎಸ್.ಜೆ.ಇ.ಎಸ್. ಪದವಿ ಕಾಲೇಜು
ಬೆಂಗಳೂರು

ದಿನಾಂಕ :

– ಇವರಿಗೆ

ಮಾನ್ಯರೇ,

ವಿಷಯ : ಶುಲ್ಕವನ್ನು ಕಂತುಗಳಲ್ಲಿ ಪಾವತಿಸಲು ಅನುಮತಿ

೨೦೨೧–೨೨ ರಲ್ಲಿ ಬಿ.ಕಾಂ, ಮೊದಲನೇ ಮತ್ತು ಎರಡನೆಯ ಸೆಮಿಸ್ಟರ್‌ಗಳನ್ನು ಪೂರೈಸಿ ಈಗ ನಾನು ೨೦೨೨–೨೩ ರಲ್ಲಿ ಮೂರನೇ ಮತ್ತು ನಾಲ್ಕನೇ ಸೆಮಿಸ್ಟರ್‌ಗಳಿಗೆ ಪ್ರವೇಶವನ್ನು ಪಡೆಯುತ್ತಿದ್ದೇನೆ. ಪ್ರಸ್ತುತ ನಾನು ೯,೫೦೦ ರೂ.ಗಳನ್ನು ಶುಲ್ಕವಾಗಿ ಪಾವತಿಸಬೇಕಿದ್ದು ಕೌಟುಂಬಿಕ ಕಾರಣಗಳಿಗಾಗಿ ಈ ಮೊತ್ತವನ್ನು ಒಂದೇ ಕಂತಿನಲ್ಲಿ ಕಟ್ಟಲು ಕಷ್ಟವಾಗುತ್ತಿದೆ. ಆದ್ದರಿಂದ ನಾವು ಈ ಶುಲ್ಕವನ್ನು ಆರು ತಿಂಗಳ ಅವಧಿಯೊಳಗೆ ಕನಿಷ್ಟ ಎರಡು ಕಂತುಗಳಲ್ಲಿ ಕಟ್ಟಲು ಅನುಮತಿಯನ್ನು ನೀಡಿ ಉಪಕರಿಸಬೇಕೆಂದು ಕೋರುತ್ತೇನೆ.

ವಂದನೆಗಳು.

ತಮ್ಮ ವಿಧೇಯ

ಎನ್.ವೀರೇಶ್

**೨. ಫಲಿತಾಂಶದಲ್ಲಿ ಆಗಿರುವ ಲೋಪವನ್ನು ಸರಿಪಡಿಸಲು ಮನವಿ.**

ಎಸ್. ವಿಜಯಲಕ್ಷ್ಮಿ<br>ಬಿ.ಕಾಂ, ಮೂರನೇ ಸೆಮಸ್ಟರ್<br>ಸಂತ ಜೋಸೆಫರ ಕಾಲೇಜು<br>ಬೆಂಗಳೂರು<br>ಜನವರಿ ೦೫, ೨೦೨೨

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

– ಇವರಿಗೆ ದಿನಾಂಕ :

ಪ್ರಾಶುಪಾಲರು
ಸಂತ ಜೋಸೆಫರ ಕಾಲೇಜು
ಬೆಂಗಳೂರು —

– ಇವರ ಮೂಲಕ

ಮಾನ್ಯರೇ,

ವಿಷಯ : ನನ್ನ ಬಿ.ಕಾಂ, ಮೊದಲನೇ ಸಮಸ್ಟರ್ ಫಲಿತಾಂಶದಲ್ಲಿನ ಲೋಪ

ಉಲ್ಲೇಖ : ನನ್ನ ನೋಂದಣಿ ಸಂಖ್ಯೆ : ೦೭ಎಬಿಸಿ೧೦೦೧೦

೨೦೨೧ ರ ನವೆಂಬರ್ ತಿಂಗಳಿನಲ್ಲಿ ನಡೆದ ವಿಶ್ವವಿದ್ಯಾಲಯದ ಪರೀಕ್ಷೆಯಲ್ಲಿ ನಾನು ನಮ್ಮ ಕಾಲೇಜಿನ ಕೇಂದ್ರದಿಂದ ಬಿ.ಕಾಂ. ಮೊದಲನೇ ಸೆಮೆಸ್ಟರ್ ಪರೀಕ್ಷೆಯನ್ನು ೦೭ಎಬಿಸಿ೧೦೦೧೦ ನೋಂದಣಿ ಸಂಖ್ಯೆಯಿಂದ ಬರೆದಿರುತ್ತೇನೆ. ಕಳೆದ ವಾರ ಪ್ರಕಟವಾದ ಫಲಿತಾಂಶದಲ್ಲಿ ಇಂಗ್ಲೀಷ್ ಭಾಷೆಯ ಹೊರತಾಗಿ ಉಳಿದೆಲ್ಲ ನನ್ನ ನೋಂದಣಿ ಸಂಖ್ಯೆಗೆ ಅಂಕಗಳನ್ನು ನಮೂದಿಸಲಾಗಿದೆ. ಈ ಲೋಪಕ್ಕೆ ಕಾರಣ ತಿಳಿದು ಬಂದಿಲ್ಲ. ನಾನು ಎಲ್ಲ ವಿಷಯಗಳಲ್ಲೂ ಪರೀಕ್ಷೆಗೆ ಹಾಜರಾಗಿದ್ದು ನನ್ನ ಪರೀಕ್ಷಾ ಪ್ರವೇಶ ಪತ್ರದ ಜೆರಾಕ್ಸ್ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುತ್ತೇನೆ. ತಾವು ನನ್ನ ಫಲಿತಾಂಶವನ್ನು ಮರುಪರಿಶೀಲನೆ ಮಾಡಿ ತಿದ್ದುಪಡಿ ಮಾಡಿದ ಫಲಿತಾಂಶವನ್ನು ಶೀಘ್ರವಾಗಿ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ವಂದನೆಗಳು.

ತಮ್ಮ ವಿಧೇಯ<br>ಎಸ್. ವಿಜಯಲಕ್ಷ್ಮಿ

# ೪. ಕಂಪ್ಯೂಟರ್ ಮತ್ತು ಬಳಕೆಯ ಸಾಧ್ಯತೆಗಳು

**(ಅ) ಕನ್ನಡ ಮತ್ತು ಕಂಪ್ಯೂಟರ್**
**(ಆ) ಕನ್ನಡ ಮತ್ತು ಆಫೀಸ್ ಆಟೋಮೇಷನ್**
**(ಇ) ಕನ್ನಡ ಮತ್ತು ಮಾಹಿತಿ ತಂತ್ರಜ್ಞಾನ**
**(ಈ) ಕನ್ನಡ ಮತ್ತು ಇ–ಕಲಿಕ**
**(ಉ) ಕನ್ನಡ ಮತ್ತು ಇ–ಅಂಚೆ**
**(ಊ) ಕನ್ನಡ ಮತ್ತು ಬಹು ಮಾಧ್ಯಮ**

ಇಪ್ಪತ್ತನೆಯ ಶತಮಾನವನ್ನು ಮಾಹಿತಿ ತಂತ್ರಜ್ಞಾನ ಯುಗ ಎಂದು ಕರೆಯಲಾಗುತ್ತದೆ. ಕಂಪ್ಯೂಟರಿನಲ್ಲಿ ಮೊದಲಿಗೆ ಇಂಗ್ಲೀಷನ್ನು ಮಾತ್ರ ಬಳಸಲಾಗುತ್ತಿತ್ತು ಆದರೆ ಡಿಜಿಟಲ್ ಯಂತ್ರ ಕಂಪ್ಯೂಟರಿಗೆ ಭಾಷೆಯ ಪ್ರತಿಬಂಧಕವಿಲ್ಲವೆಂದು ವಿಶ್ವದಾದ್ಯಂತ ಈಗ ಕಂಪ್ಯೂಟರಿನ ಬಳಕೆಯನ್ನು ಎಲ್ಲಾ ಭಾಷೆಗಳಿಗೂ ತಂದಿರುವುದು ಭಾಷಾತಾಂತ್ರಿಕತೆಯನ್ನು ಉತ್ಪಾದಿಸುತ್ತಿರುವುದು ಭಾಷಾಕ್ಷೇತ್ರದಲ್ಲಿನ ಒಂದು ಕ್ರಾಂತಿಯೆಂದರೂ ತಪ್ಪಾಗಲಾರದು.

ಕಂಪ್ಯೂಟರ್ ಒಂದು ಗಣಕ ಯಂತ್ರ, ಅದರ ಉಪಯೋಗ ಕೇವಲ ಸಾಫ್ಟ್‌ವೇರ್‌ಗಳನ್ನು ಬಳಸಲು ಮತ್ತು ಉತ್ಪಾದಿಸಲು ಹಾಗೂ ಪ್ರೋಗ್ರಾಮುಗಳನ್ನು ಬರೆಯಲು ಮಾತ್ರವೇ ಎಂಬ ಕಾಲ ಹೋಗಿ ಈಗ ಮಾನವ ತನ್ನ ಉಪಯೋಗಕ್ಕಾಗಿ ಸೃಷ್ಟಿಸಿಕೊಂಡ ಈ ಗಣಕಯಂತ್ರದಿಂದ ತನ್ನ ಭಾವನೆಗಳನ್ನು ಹಂಚಿಕೊಳ್ಳಲು, ಕಷ್ಟಸಾಧ್ಯ ಕೆಲಸಗಳಾದ ಬರವಣಿಗೆ ಹಾಗೂ ವಾಕ್ ಸಂಶ್ಲೇಷಣೆವರೆಗೂ ಬಂದು, ಬಹುಮಾಧ್ಯಮದ ಅಳವಡಿಕೆಯಿಂದ ಭಾಷೆಯಲ್ಲಿ ಆಕರ್ಷಣೆ ಹಾಗೂ ಉಲ್ಲಾಸವನ್ನು ತರುವ ಕಾರ್ಯ ನಡೆಸುವವರೆಗೂ ಮುಂದುವರೆಸಿಕೊಂಡು ಹೋಗುತ್ತಿದ್ದಾನೆ. ಹಲವು ಹತ್ತು ಉಪಯೋಗಗಳಿಗೆ ಕಂಪ್ಯೂಟರಿನಲ್ಲಿ ವಿಶ್ವದ ಎಲ್ಲಾ ಭಾಷೆಗಳನ್ನೂ ಬಳಸಿ ಪ್ರಯೋಗಿಸಲಾಗಿದೆ.

**(ಅ) ಕನ್ನಡ ಮತ್ತು ಕಂಪ್ಯೂಟರ್**

ಕನ್ನಡಕ್ಕೂ ಕಂಪ್ಯೂಟರಿಗೂ, ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಇರುವಷ್ಟೇ ನಂಟು ; ನಮಗ್ಯಾಕೆ ಕಂಪ್ಯೂಟರಿನ ಗೊಡವೆ ಎಂದು ಮೂಗಳೆದ ವಿದ್ವಾಂಸರೂ ಇಲ್ಲದಿಲ್ಲ, ನೀವು ಏನೇ ಹೇಳಿ, ಕಂಪ್ಯೂಟರ್ ನಮ್ಮಷ್ಟು ನಿಖರವಾಗಿ ಬರೆಯುತ್ತದೆಯೇ ? ಎಂದು ಪ್ರಶ್ನಿಸಿದ ವಿದ್ವಾಂಸರೂ ಬೇಕಾದಷ್ಟು ಮಂದಿ ಇದ್ದಾರೆ. ಕನ್ನಡದ ಕೆಲಸ ಒಂದು ಯಂತ್ರ ಮಾಡುತ್ತದೆಯೇ ಎಂದು ಮೂಗಿನ ಮೇಲೆ ಬೆರಳಿಟ್ಟವರೂ ಇದ್ದಾರೆ. ಹಾಗಾದರೆ ಕನ್ನಡವನ್ನು ಕಂಪ್ಯೂಟರಿನಲ್ಲಿ ಕಾಣಬಹುದೇ! ಎಂದು ಆಶ್ಚರ್ಯಚಕಿತರಾಗಿ ಕೇಳಿದವರೂ ಉಂಟು.

ಕಂಪ್ಯೂಟರಿನ ಭಾಷೆಗಳು ಬಂದ ನಂತರ ಭಾಷೆಯನ್ನು ಹ್ಯೂಮನ್ ಲಾಂಗ್‌ವೇಜಸ್ (ಮಾನವಭಾಷೆಗಳು) ಮತ್ತು ಮೆಷಿನ್ ಲಾಂಗ್‌ವೇಜಸ್ (ಯಂತ್ರಭಾಷೆ) ಎಂದು ಎರಡು ಬಗೆಯಾಗಿ ವಿಂಗಡಿಸಿಕೊಳ್ಳಲಾಗಿದೆ. ಮಾನವರಾಡುವ ಭಾಷೆಯನ್ನು ಮಾನವ ಭಾಷೆಗಳು ಎಂತಲೂ, ಕಂಪ್ಯೂಟರ್ ಅರ್ಥಮಾಡಿಕೊಂಡು ಕೆಲಸಗಳನ್ನು ನಡೆಸುವ ಭಾಷೆಗಳನ್ನು ಯಾಂತ್ರಿಕ ಭಾಷೆಯೆಂದೂ ಕರೆಯಲಾಗುತ್ತದೆ. ಮಾನವ ಭಾಷೆಗಳನ್ನು ನ್ಯಾಚುರಲ್ ಲಾಂಗ್‌ವೇಜಸ್ (ಸ್ವಾಭಾವಿಕ ಭಾಷೆಗಳು) ಎಂತಲೂ ಕರೆಯಲಾಗುತ್ತದೆ. ಪ್ರಪಂಚದ ಸ್ವಾಭಾವಿಕ ಭಾಷೆಗಳ ಅಧ್ಯಯನವನ್ನು ನಾವು ಭಾಷಾವಿಜ್ಞಾನವೆಂದು ಕರೆಯುತ್ತೇವೆ. ಕಂಪ್ಯೂಟರಿನ ಭಾಷೆಗಳು ಸಿ, ಸಿ++ ಜಾವ, ಮುಂತಾದವು. ಈ ಭಾಷೆಯ ಗಡಿ ಒಂದು ಮತ್ತು ಶೂನ್ಯ. ಅಂದರೆ ೧ ಮತ್ತು೦. ಅನೇಕ ಸೂತ್ರಗಳ ಪ್ರಕಾರ ಈ ಒಂದು ಮತ್ತು ಶೂನ್ಯದ ನಡುವಣ ಸಂಬಂಧಗಳ ಮೇಲೆ ವಿಶ್ವದ ಯಾವುದೇ ಭಾಷೆಯನ್ನೂ ಸಹ ಕಂಪ್ಯೂಟರಿನಲ್ಲಿ ಮೂಡಿಸಬಹುದಾಗಿದೆ.

ಕನ್ನಡ ಭಾಷೆಯ ಪ್ರಯೋಗ ಇಸ್ಕಿ, ಆಸ್ಕಿ ಮತ್ತು ಯೂನಿಕೋಡುಗಳಲ್ಲಿ ನಡೆಯುತ್ತದೆ. ಆಯಾಯಾ ಕೋಡಿನಲ್ಲಿನ ಅಂಕಿ ಅಂಶಗಳ ಆಧಾರದ ಮೇಲೆ ಭಾಷಾವ್ಯಾಪಾರ ಮುಂದುವರೆಯುತ್ತದೆ.

ಇಂಗ್ಲಿಷ್ ಭಾಷೆಗೆ ಬಳಸುವ ಅದೇ ಕಂಪ್ಯೂಟರ್, ಅದೇ ಮಾನಿಟರ್, ಅದೇ ಹಾರ್ಡ್ ಡಿಸ್ಕಿನೊಂದಿಗೆ ಏನೆಲ್ಲಾ ಮಾಡಬಹುದೆಂಬುದನ್ನು ನೋಡೋಣ:

**(ಆ) ಕನ್ನಡ ಮತ್ತು ಆಫೀಸ್ ಆಟೋಮೇಷನ್**

ಕಂಪ್ಯೂಟರ್‌ನ ಆಪರೇಟಿಂಗ್ ಸಿಸ್ಟಂ (ವಿಂಡೋಸ್, ಲೈನೆಕ್ಸ್ ಮುಂತಾದುವು) ಯಾವುದೇ ಇರಲಿ ಕನ್ನಡ ಭಾಷೆಯನ್ನು ಕಂಪ್ಯೂಟರಿನ ಪರದೆಯ ಮೇಲೆ ಮೂಡಿಸಬಹುದು. ಇದಕ್ಕೆ ಬೇಕಾದುದೆಲ್ಲಾ ಇಷ್ಟೆ– ಒಂದು ಎಡಿಟರ್, ಆ ಎಡಿಟರ್ ಸಹ ಒಂದು ಸಾಫ್ಟ್‌ವೇರೇ. ಈ ಎಡಿಟರನ್ನು ಪ್ರಯೋಗಿಸಿ, ಇಂಗ್ಲೀಷ್‌ನ ಕೀ ಬೋರ್ಡನ್ನೇ ಆಧಾರವಾಗಿಟ್ಟುಕೊಂಡು ಅಕ್ಷರ (ಗ್ಲಿಪ್ ಕೋಡ್) ಗಳನ್ನು ಮಾಡಿರಲಾಗುತ್ತದೆ.

ಕೀಬೋರ್ಡಿನ ಇಂಗ್ಲೀಷಿನ ಅಕ್ಷರದ ಮುಖಾಂತರವೇ ಕನ್ನಡವನ್ನೂ ಬರೆಯಬಹುದಾಗಿದೆ. ಇಂಗ್ಲೀಷ್ ಅಕ್ಷರಗಳ ಮೇಲೆ ಬೇಕಾದರೆ ಕನ್ನಡದ ಅಕ್ಷರಗಳನ್ನು ಅಂಟಿಸಿಯೂ ಕನ್ನಡವನ್ನು ಅಚ್ಚು ಮಾಡಬಹುದಾಗಿದೆ. ಹೀಗೆ ಕನ್ನಡವನ್ನು ಅಚ್ಚು ಮಾಡಲು ಸಾಧ್ಯವಾಗಿಸುವಂತಹ ಕೆಲವು ಕನ್ನಡದ ಸಾಫ್ಟ್ ವೇರ್ ಗಳು ಕೆಳಕಂಡಂತೆ ಇವೆ :

ನುಡಿ ತಂತ್ರಾಂಶ (ಸಾಫ್ಟ್‌ವೇರ್)

ಬರಹ

ಶ್ರೀಲಿಪಿ

ಐಲೀಪ್

ಆಕೃತಿ

ಕೈರಾಲಿ

ಪ್ರಕಾಶಕ್

ವಿಂಡೋಸ್ ಎಕ್ಸ್‌ಪಿ

ಬ್ರಾಹ್ಮಿ (ಭಾರತೀಯ ವಿಜ್ಞಾನ ಸಂಸ್ಥೆಯಿಂದ ನಿರ್ಮಿತ)

ಮೇಲಿನವುಗಳ ಪೈಕಿ ವಿಂಡೋಸ್ ಎಕ್ಸ್‌'ಪಿ ಮತ್ತು ಬಾಹ್ಮಿ ಎರಡೂ ಯೂನಿಕೋಡಿನಲ್ಲಿ ಕೆಲಸ ನಿರ್ವಹಿಸುವಂತಹವು. ಬ್ರಾಹ್ಮಿ ವಿಂಡೋಸ್ ಮತ್ತು ಲೈನೆಕ್ಸ್ ಎಲ್ಲಾ ಆಪರೇಟಿಂಗ್ ಸಿಸ್ಟಂಗಳಲ್ಲೂ ಕಾರ್ಯನಿರ್ವಹಿಸುತ್ತದೆ.

ಕಂಪ್ಯೂಟರಿನ ಕೀಬೋರ್ಡನ್ನು ಉಪಯೋಗಿಸಿಕೊಂಡು ಕನ್ನಡ ಅಕ್ಷರಗಳನ್ನು ಅಚ್ಚುಮಾಡಬಹುದು. ಅಚ್ಚುಮಾಡಿದ ಅಕ್ಷರಗಳನ್ನು ಪರದೆಯ ಮೇಲೆ ನೋಡಿದರೆ ಸಾಲದು, ಅದನ್ನು ಒಂದೆಡೆ ಶೇಖರಿಸಿಯೂ ಸಹ ಇಡಬಹುದು. ಈ ಎಲ್ಲಾ ವ್ಯವಸ್ಥೆಯನ್ನೂ ವರ್ಡ್ ಪ್ರೊಸೆಸ್ಸರ್ (ಮೈಕ್ರೊಸಾಫ್ಟ್ ವರ್ಡ್ ಮತ್ತು ನೋಟ್‌ಪ್ಯಾಡ್)ನ ಮುಖಾಂತರ ಮಾಡಬಹುದು. ವರ್ಡ್ ಪ್ರೊಸೇಸ್ಸರ್ ಎಂದರೆ ಕಂಪ್ಯೂಟರಿನ ಮೇಲ್ಭಾಗದಲ್ಲಿ ಅನೇಕ ರೀತಿಯ ಸೌಲಭ್ಯಗಳ ಸರಣಿಯಿರುತ್ತದೆ. ಉದಾಹರಣೆಗೆ ಕಡತ, ಮುಚ್ಚು, ತೆಗೆ, ಉಳಿಸು, ಸಂಪಾದಿಸು, ವೀಕ್ಷಣೆ, ಸಲಕರಣೆ ಇನ್ನೂ ಮುಂತಾದವು ಇರುತ್ತವೆ. ಮೌಸನ್ನು ಆಯಾಯ ಕಡೆ ತೆಗೆದುಕೊಂಡು ಹೋಗಿ ಕ್ಲಿಕ್ಕಿಸಿದಾಗ ಆಯಾಯಾ ಕ್ರಿಯೆ ನಡೆಯುತ್ತದೆ. ನಾವು ಅಚ್ಚು ಮಾಡಿದುದನ್ನು ಧಾರಾಳವಾಗಿ ಉಳಿಸಿಕೊಳ್ಳಬಹುದು. ಆ ಕಡತವನ್ನು ಬೇಕೆಂದಾಗ ತೆರೆಯಬಹುದು. ಅಂತೆಯೇ ಮುಚ್ಚಬಹುದು. ಹೀಗೆ ಕಛೇರಿ ಅಥವಾ ಮನೆಯಲ್ಲಿನ ಕಡತಗಳನ್ನು ಅಚ್ಚಿಸಿ, ಉಳಿಸಿ ಬಳಸಬಹುದು. ಅಚ್ಚು ಮಾಡುವಾಗ ತಪ್ಪಾದರೆ ಟೈಪ್‌ರೈಟರ್‌ನಂತೆ ಮತ್ತೊಮ್ಮೆ ಮಗದೊಮ್ಮೆ ಕಾಗದವನ್ನು ಹಾಳು ಮಾಡಬೇಕಾಗಿಲ್ಲ. ಕಂಪ್ಯೂಟರಿನ ಹಾಳೆಯಲ್ಲಿ ಅಳಿಸಿ, ಅದೇ ಜಾಗದಲ್ಲಿ ಮತ್ತೆ ಮತ್ತೆ ಅಂಟಿಸಿ ಸಂಸ್ಕರಣಗೊಳಿಸಬಹುದು. ಕಾಗದದ ಅನಿವಾರ್ಯತೆಯನ್ನು ಕಂಪ್ಯೂಟರ್ ನೀಗಿಸಿ ಹಾಕುತ್ತದೆ. ಬೇಕೆಂದಾಗ ಬೇಕಾದ ಕಡತವನ್ನು ಕಂಪ್ಯೂಟರಿಗೆ ಹೊಂದಿಸಿಟ್ಟುಕೊಂಡಿರುವ ಅಚ್ಚುಯಂತ್ರ (ಪ್ರಿಂಟರ್) ದಿಂದ ಪ್ರಿಂಟ್ ಮಾಡಬಹುದು. ಎಡಿಟ್‌ಗಳ ಮುಖಾಂತರ ಇ–ಮೈಲನ್ನು ಕಳುಹಿಸುವ ಸೌಲಭ್ಯವೂ ಲಭ್ಯವಿದೆ.

**ಇದು ವರ್ಡ್ ಪ್ರೊಸೆಸರ್ ಬಗೆಗಿನ ಪಕ್ಷಿನೋಟ**

ಬರೆಯುವಾಗ ಅಂದರೆ ಅಚ್ಚುಮಾಡುವಾಗ ಇಂಗ್ಲೀಷ್‌ನಲ್ಲಿಯಾದರೆ, ಸ್ಖಾಲಿತ್ಯಗಳು (Errors) ತಲೆದೋರಿದರೆ ಅದನ್ನು ಕಂಪ್ಯೂಟರಿನ ಒಳಗಿರುವ ಸ್ಪೆಲ್‌ಚೆಕ್‌ನಿಂದ ಸರಿಪಡಿಸಬಹುದು. ಆದರೆ ಕನ್ನಡದಲ್ಲಿ ಇನ್ನೂ ಈ ಪದಪರೀಕ್ಷಕ ಹಾಗೂ ವಾಕ್ಯ ಪರೀಕ್ಷಕಗಳ ನಿರ್ಮಾಣ ಆಗಬೇಕಾಗಿದೆ.

ಕನ್ನಡದಲ್ಲಿ ಈಗಾಗಲೇ ಅನೇಕ ಸಾಫ್ಟ್‌ವೇರ್‌ಗಳು ಲಭ್ಯವಿದ್ದು, ಒಂದು ಸಾಫ್ಟ್‌ವೇರಿನಲ್ಲಿ ಅಚ್ಚು ಮಾಡಿದ ಕಡತ ಮತ್ತೊಂದರಲ್ಲಿ ತೆರೆದುಕೊಳ್ಳುವುದಿಲ್ಲ ಒಂದು ರೀತಿಯ ಅಕ್ಷರಶೈಲಿಯಲ್ಲಿ ಅಚ್ಚಾದ ಕಡತವು ಮತ್ತೊಂದು ಶೈಲಿಯ ಅಕ್ಷರದಲ್ಲಿ ತೆರೆದುಕೊಳ್ಳುವುದಿಲ್ಲ. ಈಗ ಈ ಎಲ್ಲಾ ಗೊಂದಲಗಳನ್ನೂ ನಿವಾರಿಸಲು ಅಕ್ಷರ ಪರಿವರ್ತಕಗಳು (ಫಾಂಟ್ ಕನ್ವರ್ಟರ್) ಮತ್ತು ಸಾಫ್ಟ್‌ವೇರ್ ಕನ್ವರ್ಟರ್‌ಗಳ ನಿರ್ಮಾಣ ಮಾಡುತ್ತಿದ್ದಾರೆ.

ಇದೇ ರೀತಿಯಲ್ಲಿ ಲೆಕ್ಕಗಳನ್ನು ಎಕ್ಸೆಲ್‌ನಲ್ಲಿ ಮಾಡಬಹುದು. ಕೂಡಿ, ಕಳೆದು, ಗುಣಿಸಿ, ಭಾಗಿಸುವ ಕೆಲಸ ಕಂಪ್ಯೂಟರ್ ಕ್ಷಣಮಾತ್ರದಲ್ಲಿ ಮಾಡಿಬಿಡುತ್ತದೆ. ಇದಕ್ಕೆ ಮಾಡಬೇಕಾದುದೆಲ್ಲಾ ಇಷ್ಟೇ, ಎಕ್ಸೆಲ್ ಶೀಟನ್ನು ತೆಗೆದಿರಿಸಿಕೊಂಡು ಅದರಲ್ಲಿರುವ ಮನೆಗಳಲ್ಲಿ ಬೇಕಾದ ವಿವರಗಳನ್ನು ತುಂಬಿ ಮೇಲಿರುವ ಸಿಗ್ಮ ಚಿಹ್ನೆಯನ್ನು ಉಪಯೋಗಿಸಿಕೊಳ್ಳುವುದು, ಕೂಡಿ, ಕಳೆದು ಗುಣಿಸಿ, ಭಾಗಿಸುವುದು, ಕ್ಷಣ ಮಾತ್ರದಲ್ಲಿ ನಿಖರವಾದ ಲೆಕ್ಕಗಳು ನಿಮ್ಮ ಮುಂದೆ ! ಇದೂ ಅಷ್ಟೆ, ಎಕ್ಸೆಲ್‌ನ ಬಳಕೆಯ ಬಗೆಗಿನ ಪಕ್ಷಿನೋಟ.

**(ಇ) ಕನ್ನಡ ಮತ್ತು ಮಾಹಿತಿ ತಂತ್ರಜ್ಞಾನ**

ಕನ್ನಡಕ್ಕೂ ಮಾಹಿತಿ ತಂತ್ರಜ್ಞಾನಕ್ಕೂ ಎಲ್ಲಿಯ ಸಂಬಂಧವೆಂದು ಅನೇಕರು ಮೂಗು ಮುರಿದಿದ್ದರು. ಆದರೆ ಮಾಹಿತಿಯನ್ನು ಒಂದಡೆಗೆ ಸಂಗ್ರಹಿಸಿ, ಅದರ ಉಪಯುಕ್ತತೆಯನ್ನು ಕಾಲ ನಿರ್ಬಂಧವಿಲ್ಲದೆ, ಸ್ಥಳ ನಿರ್ಬಂಧವಿಲ್ಲದೆ ಎಲ್ಲರೂ ಪಡೆಯುವಂತೆ ಮಾಡುವಲ್ಲಿ ಮಾಹಿತಿ ತಂತ್ರಜ್ಞಾನ ಕನ್ನಡಕ್ಕೂ ವ್ಯಾಪಿಸಿದೆ. ಇಂದು ಅನೇಕ ವೃತ್ತಪತ್ರಿಕೆಗಳು, ಮ್ಯಾಗಜೈನುಗಳು ಜಾಲತಾಣಗಳು ಮುಂತಾದವುಗಳು ಕನ್ನಡದಲ್ಲಿ ಲಭ್ಯವಿದೆ. ಎಲ್ಲ ಕನ್ನಡ ವೃತ್ತಪತ್ರಿಕೆಯ ಆವೃತ್ತಿಗಳೂ, ವಾರಪತ್ರಿಕೆಗಳೂ, ಪಾಕ್ಷಿಕಗಳೂ, ಮಾಸಪತ್ರಿಕೆಗಳೂ, ಸಿನೆಮಾ ಪತ್ರಿಕೆಗಳೂ ಕನ್ನಡದಲ್ಲಿ ಅಂತರ್ಜಾಲದಲ್ಲಿ ಲಭ್ಯವಿದೆ, ಕೆಲವು ಅತ್ಯಂತ ಉಪಯುಕ್ತ ವಿಷಯಗಳ ಮಾಹಿತಿಯನ್ನೊದಗಿಸುವ ಕಣ್ಣುಡಿಯಂತಹ ಜಾಲತಾಣಗಳು ಲಭ್ಯವಿದೆ, ಇವೆಲ್ಲ ಕನ್ನಡಕ್ಕೆ ಮಾಹಿತಿ ತಂತ್ರಜ್ಞಾನ ಸಾಧನಗಳನ್ನಳವಡಿಸಿ ನಿರ್ಮಿಸಿದ ಜಾಲತಾಣಗಳಾಗಿವೆ. ಮನೆಯಲ್ಲಿ ಕಛೇರಿಯಲ್ಲಿ ಬ್ರೌಸಿಂಗ್ ಕೇಂದ್ರಗಳಲ್ಲಿ ಎಲ್ಲೆಂದರಲ್ಲಿ ಈ ಸೌಲಭ್ಯ ಕಾಲದ ನಿರ್ಬಂಧವಿಲ್ಲದೆ ಎಲ್ಲರಿಗೂ ಏಕಕಾಲದಲ್ಲಿ ಲಭ್ಯ.

**(ಈ) ಕನ್ನಡ ಮತ್ತು ಇ–ಕಲಿಕೆ - ಅಂತರ್ಜಾಲ ಬೋಧನೆ –ಕನ್ನಡ**

ಈ ಸೌಲಭ್ಯವನ್ನು ಉಪಯೋಗಿಸಿಕೊಂಡು ಇ–ಕಲಿಕೆಯನ್ನು ಪ್ರಾರಂಭಿಸಲಾಗಿದೆ. ಇ–ಕಲಿಕೆ ಯಾವುದೇ ವಿಷಯದಲ್ಲಿಯಾಗಲೀ ಉಂಟುಮಾಡಬಹುದು. ಒಂದು ಭಾಷೆಯನ್ನು ಕಲಿಸುವುದರಿಂದ ಹಿಡಿದು ತರಬೇತಿ ಕಾರ್ಯಕ್ರಮಗಳು, ಟೂಲ್ ಡಿಸೈನಿಂಗ್‌ವರೆಗೂ ಅಂತರ್ಜಾಲದ ಮುಖಾಂತರ ಬೋಧಿಸಬಹುದು. ಹೀಗೆ ಅಂತರ್ಜಾಲ ಬೋಧನೆಯಲ್ಲಿ ಕನ್ನಡವನ್ನೂ ಸಹ ಬೋಧಿಸಬಹುದು. ಯಾವುದೇ ವಿಷಯವನ್ನಾಗಲೀ ಕನ್ನಡದಲ್ಲೂ ಬೋಧಿಸಬಹುದು, ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಅಂತರ್ಜಾಲ ಬೋಧನ ಪದ್ಧತಿಯ ಮೂಲಕ ಕಲಿಯಬಹುದು, ಕಲಿಸಬಹುದು. ಕನ್ನಡವನ್ನು ವಿಶ್ವದಾದ್ಯಂತ ಬೋಧಿಸುವ, ಕಲಿಯುವ ಸದವಕಾಶವನ್ನು ಪಡೆಯಬಹುದು.

**(ಉ) ಕನ್ನಡ ಮತ್ತು ಇ–ಅಂಚೆ– ಅಂತರ್ಜಾಲದ ಮೂಲಕ ಅಂಚೆ ರವಾನೆ**

ಬೇರೆ ಬೇರೆ ದೇಶಗಳಿಗೆ ಕನ್ನಡದಲ್ಲಿ ಈಗ ಅಂಚೆಯನ್ನು ಕ್ಷಣಮಾತ್ರದಲ್ಲಿ ಕಳುಹಿಸಬಹುದು. ಅದನ್ನು ವಿದ್ಯುದಂಚೆ ಎಂದು ಹೇಳಲಾಗುತ್ತದೆ. 'ಇ–ಮೈಲ್' ಎಂದು ಎಲ್ಲರಿಗೂ ಚಿರಪರಿಚಿತವಾದ ವಿದ್ಯುದಂಚೆ ಕನ್ನಡದಲ್ಲಿ ಮಾಡಲು ಸಾಧ್ಯವಾದುದು ಕನ್ನಡ ಮಾತ್ರವೇ ಬಲ್ಲವರಿಗಂತೂ ವರದಾನ ! ತಮ್ಮ ಭಾವನೆಗಳನ್ನು ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಹಂಚಿಕೊಳ್ಳುವುದು ಕೆಲವರಿಗೆ ಹೆಮ್ಮೆಯ ಮತ್ತು ಸಂತಸದ ಸಂಗತಿ ! ಕಂಪ್ಯೂಟರ್‌ನೊಂದಿಗೆ ಇಂಟರ್ನೆಟ್ (ಅಂತರ್ಜಾಲ)

ಇರಲೇಬೇಕೆಂಬುದನ್ನು ಇಲ್ಲಿ ಮರೆಯಬಾರದು. ಕನ್ನಡವನ್ನು ಕಂಪ್ಯೂಟರಿನಲ್ಲಿ ಬಳಸುವಲ್ಲಿ ಇದೂ ಒಂದು ಪ್ರಭಾವಕಾರಿ ಮಾಧ್ಯಮವಾಗಿದೆ.

**(೬) ಕನ್ನಡ ಬಹುಮಾಧ್ಯಮ**

ಕನ್ನಡಕ್ಕೆ ಬಹು ಮಾಧ್ಯಮವನ್ನು ಬಳಸುವುದೂ ಈಗ ಸಾಧ್ಯ. ಒಂದೆಡೆ ಯಾವುದೇ ಭಾಷೆಗೆ ಬಹುಮಾಧ್ಯಮದ ಬಳಕೆ ಅಸಾಧ್ಯ ಎನ್ನುವುದು ಅನೇಕರ ಅಭಿಪ್ರಾಯ, ಆದರೆ ಬಹು ಮಾಧ್ಯಮಗಳಾದ ದೃಶ್ಯ, ಶ್ರವಣ ಮಾಧ್ಯಮಗಳನ್ನು ಬಳಸಿ ಭಾಷೆಯನ್ನು ಆಕರ್ಷಕವಾಗೂ, ಜೀವಂತವಾಗೂ, ಮಾಡಲು ಸಾಧ್ಯವಿದೆ. ಇದಕ್ಕೆ ಉದಾಹರಣೆಯಾಗಿ ಇತ್ತೀಚೆಗೆ ಬಿಡುಗಡೆ ಮಾಡಿರುವ ಕನ್ನಡ ಬೋಧನಾ ಭಾರತಿಯನ್ನು ನೋಡಬಹುದು. ಬೋಧನಾ ಭಾರತಿಯಲ್ಲಿ ಸಂಗೀತ, ಸುಗಮಸಂಗೀತ, ಜಾನಪದ, ಕಾವ್ಯವಾಚನ ಶೈಲಿಗಳಲ್ಲಿ ಪದ್ಯಗಳನ್ನು ಹಾಡಿಸಿ ಅದನ್ನು ಅಳವಡಿಸಲಾಗಿದೆ. ಕಂಪ್ಯೂಟರಿನ ಮೇಲೆ ಪಠ್ಯವು ಮೂಡಿಬರುತ್ತದೆ, ಅದರ ಹಿನ್ನೆಲೆಯಲ್ಲಿ ಆ ಪದ್ಯದ ಸುಶ್ರಾವ್ಯ ಗಾನ ಮೂಡಿಬರುತ್ತದೆ. ವಿದ್ಯಾರ್ಥಿ, ಶಿಕ್ಷಕರಿಗೂ ಅನುಕೂಲವಾಗುವಂತೆ ಪದ್ಯದ ಕರ್ತೃವಿನ ಛಾಯಾಚಿತ್ರವನ್ನು ನೀಡಿ, ಅವರ ಹುಟ್ಟೂರನ್ನು ಕರ್ನಾಟಕದ ನಕ್ಷೆಯಲ್ಲಿ ತೋರಿಸಲಾಗಿದೆ. ಪಠ್ಯದ ಸಾರಾಂಶವು ಕಂಪ್ಯೂಟರಿನ ಪರದೆಯ ಮೇಲೆ ಮೂಡಿ ಬಂದರೆ ಹಿನ್ನೆಲೆಯಾಗಿ ಅದರ ಧ್ವನಿಮುದ್ರಣ ಬಿತ್ತರಗೊಳ್ಳುತ್ತದೆ. ಇದೇ ರೀತಿ ಮುಖ್ಯಾಂಶಗಳು, ಪಠ್ಯದ ವಿಶೇಷ ಅಂಶಗಳೂ ಧ್ವನಿಯುಕ್ತವಾಗಿದ್ದು ವಿಶೇಷ ಅಂಶಗಳನ್ನು ಪುಷ್ಟೀಕರಿಸಲು ಅನೇಕ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ. ಹೀಗೆ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಪಠ್ಯದ ಪೂರ್ಣ ಅರಿವು ಉಂಟಾಗುತ್ತದೆ. ಒಮ್ಮೆ ಅವರು ಪಠ್ಯವನ್ನು ನೋಡಿದರೆ, ಅದನ್ನೇ ಕೇಳುತ್ತಾರೆ ಹಾಗೂ ಸುಲಭವಾಗಿ ಜ್ಞಾಪನವಿಟ್ಟುಕೊಳ್ಳಲು ಛಾಯಾಚಿತ್ರಗಳು ಸಹಾಯ ಮಾಡುತ್ತವೆ. ಕಲಿಯಲು ಆಸಕ್ತಿಯಿಲ್ಲದ ಮಕ್ಕಳನ್ನೂ ಸಹ ಶ್ರವ್ಯ ಹಾಗೂ ದೃಶ್ಯ ಮಾಧ್ಯಮಗಳು ತಮ್ಮೆಡೆ ಸೆಳೆದು ಕಲಿಕೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತವೆ. ಸಂಧಿ ಹಾಗೂ ಸಮಾಸಗಳನ್ನು ವಿವರಿಸುವಾಗ ಆನಿಮೇಷನ್ ನೀಡಿ ಅದು ಮಕ್ಕಳ ಮನಸ್ಸಿನಲ್ಲಿ ಅಚ್ಚೊತ್ತಿದ ಹಾಗೆ ಮಾಡುತ್ತವೆ. ಈ ರೀತಿಯ ಮೊತ್ತಮೊದಲ ಕನ್ನಡ ಬಹು ಮಾಧ್ಯಮ ಸಿ.ಡಿ. ಬೋಧನಾ ಭಾರತಿಯನ್ನು ಶಾಲೆಗಳಲ್ಲಿ ಪ್ರಯೋಗಿಸಿದಾಗ ಬಹಳ ಒಳ್ಳೆಯ ಫಲಿತಾಂಶ (ಕನಿಷ್ಠ ೭೦% ಅಂಕಗಳು) ತಂದದ್ದು ಹರ್ಷದಾಯಕವಾದದ್ದು. ಪದ್ಯಗಳನ್ನು ಗದ್ಯದಂತೆಯೇ ಬೋಧಿಸುತ್ತಿರುವ ಈ ಸಂದರ್ಭದಲ್ಲಿ ಯಾವ ಯಾವ ಪದ್ಯಗಳನ್ನು ಯಾವ ಯಾವ ಶೈಲಿಯಲ್ಲಿ ಹಾಡಬೇಕೋ ಹಾಡಿಸಿ ಅದನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೂ ತಲುಪಿಸುವಲ್ಲಿ ಈ ಬಹುಮಾಧ್ಯಮ ಸಿಡಿ ಯಶಸ್ವಿಯಾಗಿದೆ.

ಹೊಸ ಪದಗಳ ಅರ್ಥವನ್ನು ಉಚ್ಚಾರಣೆಯೊಂದಿಗೆ ನೀಡಿರುವುದು ವಿದ್ಯಾರ್ಥಿಗಳಿಗೆ ಪದಗಳ ಉಚ್ಚಾರಣೆ ಸರಿಯಾಗಿ ಮಾಡುವಲ್ಲಿ ಮಾರ್ಗದರ್ಶನ ನೀಡುತ್ತದೆ. ಹೀಗೆ ಬಹೂಪಯೋಗೀ ಬಹುಮಾಧ್ಯಮವನ್ನು ಕನ್ನಡದಲ್ಲಿ ಬಳಸಿ ಏನೆಲ್ಲಾ ಮಾಡಲು ಸಾಧ್ಯವಿದೆ !

ಬಹುಮಾಧ್ಯಮವನ್ನು ಕನ್ನಡಕ್ಕೂ ಬಳಸಿ ಕನ್ನಡ ಕ್ಷೇತ್ರವನ್ನು ಶ್ರೀಮಂತಗೊಳಿಸಬಹುದಾಗಿದೆ. ಆದರೆ ಇದು ಕಂಪ್ಯೂಟರ್ ಇಲ್ಲದೆ ಸಾಧ್ಯವಾಗದು ! ಕನ್ನಡಕ್ಕೂ ಕಂಪ್ಯೂಟರ್ ಬೇಕೇ ಬೇಕು !

ಹೀಗೆ ನಾನಾ ರೀತಿಯಲ್ಲಿ ಕನ್ನಡವನ್ನು ಕಂಪ್ಯೂಟರಿನಲ್ಲಿ ಮೆರೆಸಬಹುದು. ಕನ್ನಡಕ್ಕೆ ಹೇಗೆ ಕಂಠ್ಯ ಮತ್ತು ತಾಳೆಗರಿಯ ಹಲಗೆ, ಬಳಪದ ಕಪ್ಪು ಹಲಗೆ, ಸೀಮೆಸುಣ್ಣದ ಕಾಗದ, ಲೇಖನಿಯ ಅವಶ್ಯಕತೆಯಿದೆಯೋ ಹಾಗೆಯೇ ಕಂಪ್ಯೂಟರಿನ ಆವಶ್ಯಕತೆಯೂ ಇದೆ.

ಈಗ ಚಾಲ್ತಿಗೆ ಬರುತ್ತಿರುವ ಇ–ಭೂಮಿ, ಇ–ಬ್ಯಾಂಕಿಂಗ್, ಇ–ಮೈಲ್ ಗಳಿಗೇ ಅಲ್ಲದೆ ಅಂಗಡಿಯ ಬಿಲ್ಲು ಸರಕು ಪಟ್ಟಿ, ದರ್ಜಿಯ ಬಳಿ ಅಳತೆ, ವೈದ್ಯರ ಬಳಿಯಲ್ಲಿನ ನಮ್ಮ ರೋಗ ತಪಾಸಣೆ ವಿವರಗಳು, ವಿದ್ಯುಚ್ಛಕ್ತಿ ಬಿಲ್ಲು ಪಾವತಿ, ನೀರಿನ ಬಿಲ್ಲು ಪಾವತಿ, ದೂರವಾಣಿಯ ಬಿಲ್ಲಿನ ಪಾವತಿ ಎಲ್ಲಕ್ಕೂ ನಾವು ಕಂಪ್ಯೂಟರನ್ನೇ ಅವಲಂಬಿಸಬೇಕಾಗಿದೆ. ಎಲ್ಲಾ ಬಿಲ್ಲುಗಳನ್ನೂ ಒಂದೇ ಕಡೆ ಪಾವತಿಸುವ ಸೌಲಭ್ಯ ನಮಗೆ ಬರಲಿದೆ. ಇದರಿಂದ ಸಮಯದ ಉಳಿತಾಯ ಸಾಧ್ಯವಾಗುತ್ತದೆ. ಅದು ಎಲ್ಲವೂ ಕನ್ನಡದಲ್ಲೂ ಲಭ್ಯವಿದೆ.

ಕನ್ನಡ ಮತ್ತು ಕಂಪ್ಯೂಟರ್ ಎರಡಕ್ಕೂ ಅವಿನಾಭಾವ ಸಂಬಂಧವನ್ನು ನಾವು ಕಾಣಬಹುದಾಗಿದೆ.

ಘಟಕ ಮೂರರ 'ಸಂವಹನ ಕನ್ನಡ' ಪಠ್ಯ ಭಾಗವನ್ನು ಡಾ.ಟಿ.ಯಲ್ಲಪ್ಪ ಮತ್ತು ಡಾ.ಎಚ್.ಎನ್.ಮುರಳೀಧರ ಇವರುಗಳು ಸಂಪಾದಿಸಿರುವ 'ವ್ಯಾವಹಾರಿಕ ಕನ್ನಡ ಮತ್ತು ಸಂವಹನಾ ಕೌಶಲ', ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಇವರು ಪ್ರಕಟಿಸಿರುವ ಪುಸ್ತಕಗಳಿಂದ ಆಯ್ದುಕೊಳ್ಳಲಾಗಿದೆ.

## Kannada Websites patti illide nodi

**General Sites**

http://www.kannadastore.com/

http://www.kannadakasturi.com

**Kannada Wikipedia**

http://www.vishvakannada.com/

http://www.kannada.com/

http://www.totalkannada.com/

http://www.my-kannada.com/

http://www.thatskannada.com

http://www.ourkarnataka.com/

http://www.karnatakarakshanavedike.org/

http://www.cs.toronto.edu/~kulki/kannada/kanindex.html

http://sify.com/kannada/

http://www.kannadaratna.com/

http://www.vishwabanku.org/

http://www.kannadasangha.com.bh/index.htm

**Kannada History**

http://www.ancientscripts.com/kannada.html

http://www.kamat.com/kalranga/kar/index.htm

**Kannada Songs & films**

http://www.kannadaaudio.com/

http://www.udbhava.com/

http://www.chirag-entertainers.com/

http://www.viggy.com/

http://www.indiaglitz.com/channels/kannada/

http://www.MusicIndiaOnline.org

http://www.chitraranga.comhttp://www.chitraloka.com/

http://www.musicindiaonline.com/

http://www.hamaracd.com/hcdindia/asp/Kannada.asp?eid=4+3

http://www.angelfire.com/ar/kebballi/index.html

http://www.geocities.com/singer_ram/

http://www.cs.toronto.edu/~kulki/kannada/haadu.htmlhttp://www.geocities.com/Hollywood/Boulevard/8329/
http://kannada.galatta.com/
http://nagathihallichandru.com/
http://www.achichu.com/Kannada-Songs/3.htm

**Kannada Radio**

http://kannadasongs.allindiansite.com/

**Kannada Lyrics and Literature**

http://www.kannadalyrics.com/
http://www.kannadasaahithya.com/
http://www.dasasahitya.org
http://www.missouri.edu/~physchan/kannada/kannada.html

**Kannada Newspapers and Articles**

http://199.74.239.15/udayavani/home.asp
http://www.kannadaprabha.com/
http://www.sanjevani.com/
http://www.prajavani.net/apr292005/home.php
http://www.vijaykarnatakaepaper.com
http://www.prajavani.net
http://www.eesanje.com/
http://www.kannadadhvani.com/
http://www.prakashaka.com/
http://www.sampada.net/
http://www.idukannada.com/

**KarnatakaCook Book**

http://www.bennett.com/curry/archives/cat_karnataka.php Southern Kitchen

**Karnataka Tour**

http://kstdc.nic.in/
http://www.junglelodges.com/
http://www.mybangalore.com/
http://www.karnatakatourism.org/http://www.tourisminindia.com/indiainfo/states/karnataka/index.htm

**Cities & Places**

http://www.explocity.com/bangalore.asp
http://www.karnataka.com
http://www.bangalore.comhttp://www.bangaloreit.com
http://www.bangaloreonline.com
http://www.apnabangalore.com

http://www.bangalorebest.comhttp://www.bangalorenet.com
http://www.children-of-bangalore.com
http://www.bangaloretelecom.com/
http://www.bangalorebio.com/
http://linux-bangalore.org/http://www.educationbangalore.com/
http://bangalore.gnu.org.in/
http://www.cyberbangalore.com/ http://www.mybangalore.com/

**ಪ್ರಶ್ನೆಗಳು:**

೧. ಔಪಚಾರಿಕ ಪತ್ರ ಎಂದರೇನು? 'ಔಪಚಾರಿಕ ಅಭಿವ್ಯಕ್ತಿ' ಕ್ರಮದ ಭಾಷೆಯನ್ನು ಪರಿಚಯಿಸಿ
೨. ಅನೌಪಚಾರಿಕ ಅಭಿವ್ಯಕ್ತಿ ಎಂದರೇನು? ಇದರ ಭಾಷಾ ಸ್ವರೂಪವನ್ನು ಪರಿಚಯಿಸಿ
೩. ಔಪಚಾರಿಕ ಅಥವಾ ವ್ಯವಹಾರ ಪತ್ರದ ಸ್ವರೂಪ, ಭಾಷೆ ಮತ್ತು ಅದರ ವಿವಿಧ ಅಂಗಗಳನ್ನು ಪರಿಚಯಿಸಿ
೪. ವ್ಯವಹಾರ ಪತ್ರದ ಮಾದರಿ ಪತ್ರವೊಂದನ್ನು ರಚಿಸಿ
೫. ತಿಳುವಳಿಕೆ ಪತ್ರ ಎಂದರೇನು? ಸಭೆಯ ತಿಳುವಳಿಕೆ ಪತ್ರ ಅದರ ಕಾರ್ಯಸೂಚಿಯ ಮಾದರಿಯನ್ನು ತಯಾರಿಸಿ
೬. ಆಹ್ವಾನ ಪತ್ರಿಕೆಯ ಸ್ವರೂಪ ಮತ್ತು ಲಕ್ಷಣವನ್ನು ವಿವರಿಸಿ
೭. ಕಾಲೇಜು ವಾರ್ಷಿಕೋತ್ಸವ ಸಮಾರಂಭ 'ಆಹ್ವಾನ ಪತ್ರಿಕೆ' ತಯಾರಿಸಿ
೮. ಅಭ್ಯರ್ಥನ (ಅರ್ಜಿ) ಪತ್ರ ಎಂದರೇನು? ಒಳ್ಳೆಯ ಅಭ್ಯರ್ಥನ ಪತ್ರದ ಲಕ್ಷಣಗಳೇನು?
೯. ಔದ್ಯೋಗಿಕ ಜಾಹಿರಾತನ್ನು ಆಧರಿಸಿ ಬರೆದ ಅಭ್ಯರ್ಥನ ಪತ್ರದ ಮಾದರಿಯನ್ನು ರಚಿಸಿ
೧೦. ಸಂಕ್ಷಿಪ್ತ ವ್ಯಕ್ತಿವಿವರ (Resume)ದಲ್ಲಿ ಇರಬೇಕಾದ ಅಂಶಗಳು ಯಾವುವು? ಅದರ ಮಾದರಿ ತಯಾರಿಸಿ
೧೧. ಶುಲ್ಕವನ್ನು ಕಂತುಗಳಲ್ಲಿ ಪಾವತಿಸಲು ಕೋರಿ ವಿದ್ಯಾರ್ಥಿಗಳು ಕಾಲೇಜಿನ ಪ್ರಾಂಶುಪಾಲರಿಗೆ ಬರೆಯುವ ಪತ್ರದ ಮಾದರಿ ರಚಿಸಿ
೧೨. ಅಂಕಪಟ್ಟಿಯಲ್ಲಿ ಆಗಿರುವ ಲೋಪವನ್ನು ಸರಿಪಡಿಸಬೇಕೆಂದು ವಿದ್ಯಾರ್ಥಿ– ವಿಶ್ವವಿದ್ಯಾಲಯಕ್ಕೆ ಬರೆಯುವ ಪತ್ರದ ಮಾದರಿಯನ್ನು ತಯಾರಿಸಿ.
೧೩. ಕನ್ನಡದಲ್ಲಿ ಕಂಪ್ಯೂಟರ್ ಬಳಕೆಗೆ ಇರುವ ಹಲವು ಸಾಧ್ಯತೆಗಳನ್ನು ಪರಿಚಯಿಸಿ.

# ಮೂರನೇ ಸೆಮಿಸ್ಟರ್ ಪದವಿ
# ಕನ್ನಡ ಮುಕ್ತ ಆಯ್ಕೆ – ಪ್ರಶ್ನೆ ಪತ್ರಿಕೆ
# ಕನ್ನಡ ಅಭಿಮಾನ –೨

**ಸಮಯ: 2.30 ಗಂಟೆ** **ಗರಿಷ್ಠ ಅಂಕಗಳು : 60**

---

**I ಯಾವುದಾದರೂ ಐದಕ್ಕೆ ಪ್ರಶ್ನೆಗಳಿಗೆ ಉತ್ತರಿಸಿ:** **(5X2=10)**

1) ಭಾಷೆಯ ಬಗೆಗಿನ ದಂಡಿಯ ಅಭಿಪ್ರಾಯವೇನು?
2) ಹ್ಯಾಕೆಟ್ ಹೆಸರಿಸುವ ಭಾಷೆಯ ಏಳು ವೈಶಿಷ್ಟ್ಯಗಳನ್ನು ಹೆಸರಿಸಿ
3) ಭಾಷಾ ವಿಜ್ಞಾನಿಗಳು ವಿಭಜಿಸಿರುವ ಭಾಷೆಯ ನಾಲ್ಕು ವರ್ಗೀಕರಣಗಳನ್ನು ಹೆಸರಿಸಿ
4) ಪ್ರಮುಖ ದ್ರಾವಿಡ ಭಾಷೆಗಳನ್ನು ಹೆಸರಿಸಿ
5) ಕೇಶಿರಾಜ ಗುರುತಿಸಿದ ಕನ್ನಡದ ಒಂಬತ್ತು ಅಸಾಧಾರಣ ಲಕ್ಷಣಗಳನ್ನು ಹೆಸರಿಸಿ
6) ವ್ಯವಹಾರ ಪತ್ರದ ಅಂಗಗಳನ್ನು ಹೆಸರಿಸಿ
7) ಕನ್ನಡದ ಸಾಫ್ಟ್‌ವೇರ್‌ಗಳನ್ನು ಹೆಸರಿಸಿ

**II ಯಾವುದಾದರೂ <u>ನಾಲ್ಕಕ್ಕೆ</u> ಸಂಕ್ಷಿಪ್ತವಾಗಿ ಉತ್ತರಿಸಿ:** **(4X5=20)**

8) ಭಾಷೆ ಎಂದರೇನು? ಅದರ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ಪರಿಚಯಿಸಿ
9) ದ್ರಾವಿಡ ಭಾಷೆಯ ವೈಶಿಷ್ಟ್ಯಗಳನ್ನು ಪರಿಚಯಿಸಿ
10) ಆಹ್ವಾನ ಪತ್ರಿಕೆಯ ಸ್ವರೂಪ ಮತ್ತು ಲಕ್ಷಣಗಳನ್ನು ವಿವರಿಸಿ
11) ಅಭ್ಯರ್ಥನ ಪತ್ರ ಎಂದರೇನು? ಒಳ್ಳೆಯ ಅಭ್ಯರ್ಥನ ಪತ್ರದ ಲಕ್ಷಣಗಳಾವುವು?
12) ಅಂಕಪಟ್ಟಿಯಲ್ಲಿ ಆಗಿರುವ ದೋಷವನ್ನು ಸರಿಪಡಿಸಲು ವಿದ್ಯಾರ್ಥಿ ವಿಶ್ವವಿದ್ಯಾಲಯಕ್ಕೆ ಬರೆಯುವ ಪತ್ರದ ಮಾದರಿ ತಯಾರಿಸಿ
13) ಕನ್ನಡ ಮತ್ತು ಆಫೀಸ್ ಆಟೋಮೇಶನ್ – ಸ್ವರೂಪವನ್ನು ವಿವರಿಸಿ

**III ಯಾವುದಾದರೂ <u>ಮೂರು</u> ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ:** **(3X10=30)**

14) ಹ್ಯಾಕೆಟ್ ಹೇಳುವ ಮಾನವ ಭಾಷೆಯ ಏಳು ವೈಶಿಷ್ಟ್ಯಗಳನ್ನು ವಿವರಿಸಿ
15) ದ್ರಾವಿಡ ಭಾಷಾವರ್ಗದ ಸ್ವರೂಪ ಮತ್ತು ವರ್ಗೀಕರಣವನ್ನು ವಿವರಿಸಿ
16) ಕನ್ನಡ ಭಾಷೆಯ ವೈಶಿಷ್ಟ್ಯಗಳನ್ನು ವಿವರಿಸಿ
17) ವ್ಯವಹಾರ ಪತ್ರದ ವಿವಿಧ ಅಂಗಗಳನ್ನು ವಿವರಿಸಿ, ಮಾದರಿ ಪತ್ರವನ್ನು ರಚಿಸಿ
18) ಕಂಪ್ಯೂಟರ್‌ನಲ್ಲಿ ಕನ್ನಡ ಬಳಕೆಗೆ ಇರುವ ಹಲವು ಸಾಧ್ಯತೆಗಳನ್ನು ವಿವರಿಸಿ